ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ



ಅಕ್ಟೋಬರ್ 26 ಗುರುವಾರ 2023

ಸಂಪುಟ: 44 | ಸಂಚಿಕೆ: 190 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಮುಂದಿನ ವಿಜಯದಶಮಿ ವೇಳೆಗೆ
ನಾನೇ ಮುಖ್ಯಮಂತ್ರಿಯಾಗಿರ್ತೇನೆ...!



● ಆಪ್ತ ಬಳಗಕ್ಕೆ ಡಿ.ಕೆ. ಶಿವಕುಮಾರ್ ಸಂದೇಶ ● ವಿಜಯದಶಮಿ ಶುಭಾಶಯ ವಿನಿಮಯ ಸಂದರ್ಭ ಲೋಕಾಭಿರಾಮ ಮಾತುಕತೆಯಲ್ಲಿ ಮುಂದಿನ ಬಾರಿ ಮುಖ್ಯಮಂತ್ರಿಯಾಗಿ ಶುಭ ಕೋರ್ತೇನೆ...



ಬೆಂಗಳೂರು, ಅ.25(ಕೆಎಂಶಿ)– ಮುಂಬರುವ ವಿಜಂಯುದಶಮಿ ವೇಳೆಗೆ ರಾಜ್ಯದಲ್ಲಿ ನಾನೇ ಮುಖ್ಯಮಂತ್ರಿಯಾಗಿರುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಪ್ತ ವರ್ಗಕ್ಕೆ ಸಂದೇಶ ರವಾನಿಸಿದ್ದಾರೆ.

ಆಯ್ದ ಕೆಲವು ಮಾಧ್ಯಮ ಮಿತ್ರರು ಹಾಗೂ ಆಪ್ತ ಬಳಗಕ್ಕೆ ಸ್ವತಃ ತಾವೇ ದೂರವಾಣಿ ಮಾಡಿ ವಿಜಯದಶಮಿ ಹಬ್ಬದ ಶುಭಾಶಯ ಹೇಳಿದ್ದಲ್ಲದೆ, ಮುಂದಿನ ವರ್ಷ ಮುಖ್ಯಮಂತ್ರಿಯಾಗಿ ಶುಭಾಶಯ ಕೋರುವುದಾಗಿ ಅವರು ಹೇಳಿದ್ದಾರೆ. ಶಿವಕುಮಾರ್ ರವಾನಿಸಿರುವ ಈ ಸಂದೇಶ ಎಲ್ಲರಲ್ಲೂ ಆಶ್ಚರ್ಯ ಉಂಟುಮಾಡಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯಗಳಿಸಿದ್ದು, ಸರ್ಕಾರ ರಚನೆ ಸಂದರ್ಭದಲ್ಲಿ ಎಐಸಿಸಿ ಮಧ್ಯೆ ಪ್ರವೇಶಿಸಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ನಾಯಕತ್ವದ ಕಗ್ಗಂಟನ್ನು ಬಿಡಿಸಿಟ್ಟಿದ್ದರು.

ದೆಹಲಿಯ ಸೂತ್ರದಂತೆ ಸಿದ್ದರಾಮಯ್ಯ ಮೊದಲ ಅವಧಿಗೆ ಅಂದರೆ ಎರಡು ವರ್ಷಕ್ಕೆ. ನಂತರ ಉಳಿದ ಮೂರು ವರ್ಷಗಳ ಅವಧಿಗೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದಾಗಿತ್ತು. ಅಷ್ಟೇ ಅಲ್ಲ, ಅಧಿಕಾರ ಹಂಚಿಕೆ ಹಾಗೂ ಸರ್ಕಾರದ ಪಾಲುದಾರಿಕೆ ಬಗ್ಗೆಯೂ ಎಐಸಿಸಿ ಮಾಡಿದ ಸೂತ್ರಕ್ಕೆ ಉಭಯ ನಾಯಕರು ಸಮ್ಮತಿಸಿದ್ದರು. ಮುಂದಿನ ವಿಜಯದಶಮಿ ವೇಳೆಗೆ ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡು ಕೇವಲ 16 ತಿಂಗಳಷ್ಟೇ ಕಳೆದಿರುತ್ತದೆ. ಸೂತ್ರದಂತೆ ನಾಯಕತ್ವ ಬದಲಾವಣೆಗೆ ಇನ್ನೂ ಸಮಯ ಇರುತ್ತದೆ. ಆದರೂ ಶಿವಕುಮಾರ್ ಏಕೆ ಈ ಸಂದೇಶ ರವಾನಿಸಿದ್ದಾರೆ ಎಂಬುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಬೆಳಗಾವಿಯ ಮುಸುಕಿನ ಗುದ್ದಾಟ ಹೊರ ಬರುತ್ತಿದ್ದಂತೆ ●10ನೇ ಪುಟಕ್ಕೆ



ವಿಶ್ವವಿಖ್ಯಾತ ದಸರಾ ಮಹೋತ್ಸವ ಸಂಪನ್ನಗೊಂಡರೂ ಬುಧವಾರ ಮೈಸೂರಿನಲ್ಲಿ ಪ್ರವಾಸಿಗರ ಜಾತ್ರೆಯೇ ನೆರೆದಿದೆ. ಎಲ್ಲೆಡೆ ವಾಹನ ದಟ್ಟಣೆ ಮಾಮೂಲಿಯಾಗಿತ್ತು.


ಬಿಗ್ ಬಾಸ್ ಸ್ಪರ್ಧಿ ವರ್ತೂರ್ ಸಂತೋಷ್ ಬಂಧನ ಬಳಿಕ
ಸೆಲೆಬ್ರಿಟಿಗಳಿಗೆ ಸಂಕಷ್ಟ ತಂದೊಡ್ಡಿರುವ 'ಹುಲಿ ಉಗುರು'

ನಟರಾದ ಜಗ್ಗೇಶ್, ದರ್ಶನ್, ನಿಖಿಲ್, ರಾಕ್‌ಲೈನ್, ವಿನಯ್ ಗುರೂಜಿ, ಧನಂಜಯ್ ಗುರೂಜಿ ಮನೆಗಳಲ್ಲಿ ಅರಣ್ಯಾಧಿಕಾರಿಗಳ ಪರಿಶೀಲನೆ

ಮೈಸೂರು, ಅ.25–ಹುಲಿ ಉಗುರು ಪೆಂಡೆಂಟ್ ಧರಿಸಿದ್ದ ಆರೋಪದ ಮೇರೆಗೆ ವನ್ಯಜೀವಿ ಕಾಯ್ದೆಯಡಿ ಬಿಗ್ ಬಾಸ್ ಸ್ಪರ್ಧಿ ವರ್ತೂರ್ ಸಂತೋಷ್ ಬಂಧನವಾಗುತ್ತಿದ್ದಂತೆಯೇ ಕೆಲ ಸೆಲೆಬ್ರಿಟಿಗಳಿಗೆ ಸಂಕಷ್ಟ ಎದುರಾಗಿದೆ.


ರಾಜ್ಯಸಭಾ ಸದಸ್ಯರೂ ಆದ ನಟ ಜಗ್ಗೇಶ್, ನಟ ದರ್ಶನ್, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪುತ್ರ ಜೆಡಿಎಸ್ ಯುವ ಮುಖಂಡರೂ ಆದ ನಟ ನಿಖಿಲ್, ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಚಿಕ್ಕಮಗಳೂರು ಜಿಲ್ಲೆ ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ ಮತ್ತು ಕುಣಿಗಲ್ ತಾಲೂಕು ಬಿದನಗೆರೆಯಲ್ಲಿರುವ ಶನೇಶ್ವರ ದೇವಸ್ಥಾನದ ಧರ್ಮದರ್ಶಿ ಧನಂಜಯ್ ಗುರೂಜಿ ಅವರುಗಳು ಹುಲಿ ಉಗುರಿನ ಪೆಂಡೆಂಟ್ ಧರಿಸಿದ್ದ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಇವರೆಲ್ಲರ ನಿವಾಸಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಿದ್ದಾರೆ. ಅಧಿಕಾರಿಗಳು ತೆರಳಿದಾಗ ನಟ ಜಗ್ಗೇಶ್ ಮನೆಯಲ್ಲಿ ಇರಲಿಲ್ಲ. ಆದರೆ ಅವರ ಪತ್ನಿ ಹುಲಿ ಉಗುರಿನ ಪೆಂಡೆಂಟ್ ಅನ್ನು ಅರಣ್ಯಾಧಿಕಾರಿಗಳಿಗೆ ನೀಡಿದ್ದರಿಂದ ಅವರು ಯಾವುದೇ ●10ನೇ ಪುಟಕ್ಕೆ



ವರ್ತೂರ್ ಸಂತೋಷ್


ಜಗ್ಗೇಶ್


ದರ್ಶನ್


ನಿಖಿಲ್


ರಾಕ್‌ಲೈನ್ ವೆಂಕಟೇಶ್


ಧನಂಜಯ ಗುರೂಜಿ


ವಿನಯ್ ಗುರೂಜಿ

ನಾನು ಧರಿಸಿದ್ದ ಹುಲಿ ಉಗುರು ಪೆಂಡೆಂಟ್ ಕೃತಕವಾದದ್ದು

ನಿಖಿಲ್ ಕುಮಾರಸ್ವಾಮಿ ಸ್ಪಷ್ಟನೆ

ಬೆಂಗಳೂರು, ಅ.25–ಹುಲಿ ಉಗುರು ಪೆಂಡೆಂಟ್ ಧರಿಸಿದ ಆರೋಪವನ್ನು ಸ್ಪಷ್ಟವಾಗಿ ತಳ್ಳಿಹಾಕಿರುವ ಜೆಡಿಎಸ್ ಯುವ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರು, ನಾನು ಧರಿಸಿದ್ದ ಹುಲಿ ಉಗುರು ಮಾದರಿಯ ಪೆಂಡೆಂಟ್ ಕೃತಕವಾದದ್ದೇ ಹೊರತು ನೈಜವಾದುದ್ದಲ್ಲ. ಅದನ್ನು ನನ್ನ ಮದುವೆ ಸಮಯದಲ್ಲಿ ಉಡುಗೊರೆ ನೀಡಿದ್ದು. ಅದು ಈಗಲೂ ನನ್ನ ಬಳಿ ಇದೆ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಬಹುದು. ದಯಮಾಡಿ ಯಾರೂ ಸತ್ಯಕ್ಕೆ ದೂರವಾದ ಸುದ್ದಿಗಳನ್ನು ಪ್ರಸಾರ ಮಾಡಬಾರದು ಎಂದು ಟ್ವೀಟ್ ●10ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಇಂದು ರಥೋತ್ಸವ; ನಾಡಿದ್ದು ತೆಪ್ಪೋತ್ಸವ



ಮೈಸೂರು,ಅ.26(ಎಂಟಿವೈ)– ದಸರಾ ಮಹೋತ್ಸವದ ಅಂಗವೇ ಆಗಿ, ನಾಳೆ (ಅ.26) ಬೆಳಗ್ಗೆ 7.50ಕ್ಕೆ ಚಾಮುಂಡಿ ಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಯ ರಥೋತ್ಸವ ಶ್ರದ್ಧಾಭಕ್ತಿಯಿಂದ ಜರುಗಲಿದೆ.

ಸಂಪ್ರದಾಯದಂತೆ ಜಂಬೂಸವಾರಿ ಬಳಿಕ ನಿಗದಿತ ಶುಭ ಮುಹೂರ್ತದಂದು ಚಾಮುಂಡಿಬೆಟ್ಟದಲ್ಲಿ ರಥೋತ್ಸವ ನಡೆಯುವ ಪದ್ಧತಿಯಿದ್ದು, ಈ ಹಿನ್ನೆಲೆಯಲ್ಲಿ ಅಶ್ವಯುಜ ಮಾಸ, ಶುಕ್ಲ ಪಕ್ಷ ದ್ವಾದಶೀ ದಿನವಾದ ಗುರುವಾರ ಬೆಳಗ್ಗೆ 7.50ರಿಂದ 8.10ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡೇಶ್ವರಿ ರಥೋತ್ಸವ ನಡೆಯಲಿದೆ.

ಚಾಮುಂಡಿಬೆಟ್ಟದ ದೇವಾಲಯದ ಸುತ್ತ ಒಂದು ಸುತ್ತು ರಥ ಸಾಗಲಿದೆ. ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತೆ ರಾಜಮನೆತನದ ಸಂಪ್ರದಾಯದಂತೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ●10ನೇ ಪುಟಕ್ಕೆ

ಕಾಫಿ ಉದ್ಯಮಿ ಪತ್ನಿ ಹತ್ಯೆ

ಮಂಡ್ಯ ಹೊರವಲಯದ ಹೆಬ್ಬಾಳ್ ಬಳಿ ಘಟನೆ

ಮಂಡ್ಯ, ಅ. 25– ಕಾಫಿ ಉದ್ಯಮಿಯ ಪತ್ನಿಯನ್ನು ಹತ್ಯೆ ಮಾಡಿರುವ ಘಟನೆ ಮಂಡ್ಯ ಹೊರವಲಯದ ಹೆಬ್ಬಾಳ ಬಳಿ ಮಂಗಳವಾರ ಸಂಜೆ ನಡೆದಿದೆ.

ಮಂಡ್ಯ ನಗರದ ರಾಘವೇಂದ್ರ ಕಾಫಿ ವರ್ಕ್ಸ್ ಹಾಗೂ ಹೆಬ್ಬಾಳ ಬಳಿ ಚಿಕೋರಿ ಘಟಕ ನಡೆಸುತ್ತಿದ್ದ ರಮೇಶ್ ಎಂಬುವರ ಪತ್ನಿ ನಳಿನಿ(62) ಹತ್ಯೆಗೀಡಾದವರಾಗಿದ್ದು, ಹತ್ಯೆಗೂ ಮುನ್ನ ಅವರು ಹಂತಕರೊಂದಿಗೆ ಸೆಣಸಾಡಿದ್ದಾರೆ. ಕೊನೆಗೆ ಅವರ ಕುತ್ತಿಗೆಯನ್ನು ಬಿಗಿದು ಹತ್ಯೆ ಮಾಡಲಾಗಿದೆ ಎಂಬುದಕ್ಕೆ ಕುರುಹುಗಳು ಪತ್ತೆಯಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಂಡ್ಯದ ಪೇಟೆ ಬೀದಿ ಕಾಮನ ಸರ್ಕಲ್ ಬಳಿ ರಾಘವೇಂದ್ರ ಕಾಫಿ ವರ್ಕ್ಸ್ ಹೆಸರಿನಲ್ಲಿ ಕಾಫಿಪುಡಿ ಅಂಗಡಿ ನಡೆಸುತ್ತಿದ್ದ ರಮೇಶ್ ಅವರು, ಕೆಲ ವರ್ಷಗಳ ಹಿಂದೆ ಖಾಸಗಿ ಬ್ಯಾಂಕ್‌ನಲ್ಲಿ ಸಾಲ ಪಡೆದು ಹೆಬ್ಬಾಳ ಬಳಿ ಕಾಫಿಗೆ ಸಂಬಂಧಿಸಿದಂತೆ ಚಿಕೋರಿ ಘಟಕವನ್ನು ಸ್ಥಾಪಿಸಿದ್ದರು. ಆದರೆ, ಈ ಉದ್ಯಮದಲ್ಲಿ ನಷ್ಟ ಸಂಭವಿಸಿದ್ದು, ಬ್ಯಾಂಕ್‌ಗೆ ಸಾಲ ಮರುಪಾವತಿಯಾಗದ ಕಾರಣ ಬ್ಯಾಂಕ್‌ನವರು ನ್ಯಾಯಾಲಯದ ●10ನೇ ಪುಟಕ್ಕೆ

ಲಾಲ್‌ಬಾಗ್ ಮಾದರಿಯ ಮೈಸೂರಿನ ಲಿಂಗಾಂಬುದಿ ಸಸ್ಯಶಾಸ್ತ್ರೀಯ ತೋಟ
ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಲೋಕಾರ್ಪಣೆ

- 15 ಎಕರೆಯಲ್ಲಿ 5.60 ಕೋಟಿ ವೆಚ್ಚದಲ್ಲಿ ನಿರ್ಮಾಣ
- ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳಿಗೆ ಮರು ಹುಟ್ಟು
- 290 ಸಸ್ಯ ಪ್ರಭೇದಗಳನ್ನು ಬೆಳೆಸಿ, ಸಂರಕ್ಷಿಸಲಾಗಿದೆ
- ಕಿರುಹಣ್ಣುಗಳ ತೋಟ, ಬೊಂಬು-ಬಿದಿರು ತಾಣ
- ತಾವರೆ ಕೊಳ, ಕಲ್ಯಾಣಿ ನಿರ್ಮಾಣದಿಂದ ಜಲಸಂವೃದ್ಧಿ



ಮೈಸೂರು, ಅ.25(ಬಿಎಲ್‌ಯು)– ಉದ್ಯಾನನಗರಿ ಬೆಂಗಳೂರಿನ ಲಾಲ್‌ಬಾಗ್ ಸಸ್ಯ ಶಾಸ್ತ್ರೀಯ ತೋಟದ ಮಾದರಿಯಲ್ಲಿ ಮೈಸೂರಿನ ರಾಮಕೃಷ್ಣನಗರದ ಲಿಂಗಾಂಬುದಿ ಕೆರೆ ಬಳಿ ನಿರ್ಮಿಸಿರುವ ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟ (Botanical Gardens)ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿದರು.

ಎರಡು ಕೈಗಳಲ್ಲಿ ಸಸ್ಯ ಸಂಪತ್ತನ್ನು ರಕ್ಷಿಸುವಂತೆ ಅತ್ಯಾಕರ್ಷಕವಾಗಿ ನಿರ್ಮಿಸಿರುವ ಪ್ರವೇಶ ದ್ವಾರದಲ್ಲಿ ಟೇಪ್ ಕತ್ತರಿಸುವ ಮೂಲಕ ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟವನ್ನು ಸಿದ್ದರಾಮಯ್ಯ ಉದ್ಘಾಟಿಸಿದರು. ನಂತರ ಬ್ಯಾಟರಿ ಚಾಲಿತ ವಾಹನದಲ್ಲಿ ಸಸ್ಯ ಶಾಸ್ತ್ರೀಯ ತೋಟವನ್ನು ವೀಕ್ಷಣೆ ಮಾಡಿದರು. ಅತ್ಯಾಕರ್ಷಕವಾಗಿ ನಿರ್ಮಾಣ ಮಾಡಿರುವ ಸಸ್ಯ ಶಾಸ್ತ್ರೀಯ ತೋಟವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವಂತೆ ಇದೇ ವೇಳೆ ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ ನೀಡಿದರು. ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಸಿ.ಎನ್. ಮಂಜೇಗೌಡ ಸೇರಿದಂತೆ ಹಲವು ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

ಒಟ್ಟು 187 ಎಕರೆ ಪ್ರದೇಶದಲ್ಲಿರುವ ಲಿಂಗಾಂಬುದಿ ಕೆರೆಗೆ ಹೊಂದಿಕೊಂಡಂತೆ 15 ಎಕರೆ ಪ್ರದೇಶದಲ್ಲಿ ಸಸ್ಯ ಶಾಸ್ತ್ರೀಯ ತೋಟ ನಿರ್ಮಾಣ ಮಾಡಲಾಗಿದೆ. 2012ರಲ್ಲಿ ಆರಂಭವಾದ ಈ ತೋಟವನ್ನು 5.60 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ●10ನೇ ಪುಟಕ್ಕೆ



ಮೈಸೂರು ಮಿತ್ರ ಗುರುವಾರ 26 ಅಕ್ಟೋಬರ್ 2023

ಭೀಮ ಬಳಗದ ವತಿಯಿಂದ ಆಳೆತ್ತರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಸ್ಥಾಪನೆ



ಮೈಸೂರು,ಅ.25–ಮೈಸೂರು ನಗರದ ಆದಿಚುಂಚನಗಿರಿ ರಸ್ತೆಯ ಅಶೋಕಪುರಂ ಪೊಲೀಸ್ ಠಾಣೆ ಎದುರಿನ ಉದ್ಯಾನವನದಲ್ಲಿ ಭೀಮ ಬಳಗದ ವತಿಯಿಂದ ಆಳೆತ್ತರದ, ಸುಂದರವಾದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪಿಸಲು ಮುಂದಾಗಿರುವುದಾಗಿ ಭೀಮ ಬಳಗದ ಅಧ್ಯಕ್ಷ ಷಣ್ಮುಖ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಉದ್ಯಾನವನದಲ್ಲಿ ಈಗಾಗಲೇ ಬಾಬಾ ಸಾಹೇಬರ ಪ್ರತಿಮೆ ಇದ್ದು, ಅದು ಅತ್ಯಂತ ಚಿಕ್ಕದಾಗಿದ್ದು, ತುಂಬಾ ಹಳೆಯದಾಗಿತ್ತು. ನಮ್ಮ ಬಳಗ, ಮೈಸೂರು ಪಾಲಿಕೆ ಮತ್ತು ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಸ್.ಎ.ರಾಮದಾಸ್ ಅವರ ಶಾಸಕರ ಅನುದಾನದಡಿ 5 ಲಕ್ಷ ಹಾಗೂ ವಾರ್ಡ್ ನಂ.57ರ ನಗರಪಾಲಿಕೆ ಸದಸ್ಯರಾದ ಎಂ.ಸಿ.ರಮೇಶ್ ಅವರ 10 ಲಕ್ಷ ಅನುದಾನದಡಿ ಆಳೆತ್ತರದ ಪ್ರತಿಮೆಯನ್ನು ಸ್ಥಾಪಿಸಲು ಕಾಮಗಾರಿ ನಡೆಯುತ್ತಿದೆ. ಅತೀ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಂಡ ನಂತರ ಕುವೆಂಪುನಗರದ ಸಾರ್ವಜನಿಕರೊಂದಿಗೆ ಸೇರಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಬಳಗದ ಉಪಾಧ್ಯಕ್ಷ ಜೆ.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಕಾರ್ಯದರ್ಶಿ ಎನ್.ರವೀಂದ್ರ, ಖಜಾಂಚಿ ಬಾಲ್ ರಾಜ್, ಸದಸ್ಯರಾದ ಶಿವಸ್ವಾಮಿ, ಮಹಾಲಿಂಗು ಉಪಸ್ಥಿತರಿದ್ದರು.



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ವಿಜಯದಶಮಿಯಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಘನತೆವೆತ್ತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಏಕದಳ ಬಿಲ್ವಪತ್ರೆ ಗಿಡವನ್ನು ನೆಟ್ಟು ನೀರೆರೆಯುತ್ತಿರುವುದು. ಗಿಡ ನೀಡಿದ ಬೆಂಗಳೂರಿನ ರಾಚಪ್ಪ, ಗಂಗಾಧರ, ಪ್ರೊ.ಲಿಂಗರಾಜ ಗಾಂಧಿ ಇತರರಿದ್ದಾರೆ.

ನಾಳೆ ಜುಲೂಸ್ ಗೌಸಿಯ ಮೆರವಣಿಗೆ

ಮೈಸೂರು, ಅ. 25– ಮೈಸೂರಿನ ಲಷ್ಕರ್ ಮೊಹಲ್ಲಾದ ಸರ್ಕಾರ್ ಮೆಹಬೂಬ್ ಸುಭಾನಿ ಫೌಂಡೇಶನ್ ವತಿಯಿಂದ ಅ.27ರಂದು ಮಧ್ಯಾಹ್ನ 3.15ಕ್ಕೆ ಹಜರತ್ ಷೇಕ್ ಅಬ್ದುಲ್ ಖಾದರ್ ಜೀಲಾನಿ ಬಾಗ್ದಾದ್ ಷರೀಫ್ (ಗ್ಯಾರ್ವೀನ್ ಷರೀಫ್) ಅಂಗವಾಗಿ ಮೈಸೂರಿನ ಅಶೋಕ ರಸ್ತೆ, ಮೀಲಾದ್ ಪಾರ್ಕ್ ಸರ್ಕಲ್, ಮಸೀದಿ ಆಜಮ್ ಅಹಲೆ ಸುನ್ನತ್ ವಲ್ ಜಮಾತ್‌ನಲ್ಲಿ ಜುಲೂಸ್ ಗೌಸಿಯಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ಹಫೀಜ್ ಉಲ್ಲಾ ಷರೀಫ್ ಸಾಹೇಬ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೆರವಣಿಗೆಯಲ್ಲಿ ಅಹಲೆ ಸುನ್ನತೋ ಜಮಾತ್ ಉಲ್ಮಾಗಳು, ದಾವತ್ ಇಸ್ಲಾಮಿ ಮುಬ್ಲಿಕ್, ಸೂಫಿ ಸಂತರು, ದರ್ವೇಶ್‌ಗಳು, ಮುಷಾಯಿಕಿನ್, ಅರೇಬಿಕ್ ಕಾಲೇಜು ವಿದ್ಯಾರ್ಥಿಗಳು, ಉಪನ್ಯಾಸಕರು, ಶಿಕ್ಷಕರು, ಭಕ್ತಾದಿಗಳು, ಅಹಲೆ ಸುನ್ನತ್ ಜಮಾತ್ ಸಂಘಟನೆಗಳು, ಮಸೀದಿ ವ್ಯವಸ್ಥಾಪಕ ಸಮಿತಿ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 3–00 ಗಂಟೆಗೆ ಅಶೋಕ ರಸ್ತೆಯ ಮಸೀದಿ ಆಜಮ್ ಅಹಲೆ ಸುನ್ನತ್ ವಲ್ ಜಮಾತ್ ಆವರಣದಲ್ಲಿ ಫಾತೆಹಾಖಾನಿ, ದಾರುದ್ ಸಲಾಂ, ಆಲಂ ಕುಶಾಯಿ ನೆರವೇರಿಸಲಾಗುವುದು. ನಂತರ ಮೆರವಣಿಗೆಯು ಅಶೋಕ ರಸ್ತೆ, ಸಾಡೆ ರಸ್ತೆ, ಡಾ.ಝಾಕಿರ್ ಹುಸೇನ್ ಸರ್ಕಲ್ (ಮಿಷನ್ ಆಸ್ಪತ್ರೆ) ಈದಿಗಾ ಮಸೀದಿ ರಸ್ತೆ, ಪುಲಿಕೇಶಿ ರಸ್ತೆಯ ಮುಖಾಂತರ ಸಾಗುವುದು. ಮುಸ್ಲಿಮರ ರುದ್ರಭೂಮಿ ಸರ್ಕಲ್‌ನಲ್ಲಿ ಭಾವನಾತ್ಮಕ ದುವಾ, ಗೌರವ ನಮನ ಸಲ್ಲಿಸಲಾಗುವುದು. ನಂತರ ಮೆರವಣಿಗೆಯು ಸುನ್ನಿ ಚೌಕ, ಕೆ.ಟಿ.ಸ್ಟ್ರೀಟ್, ಕಾಂತರಾಜ ಅರಸ್ ಪಾರ್ಕ್, ಸತ್ತಾರ್ ಸೇಠ್ ಬ್ಲಾಕ್ ಮೂಲಕ ತೆರಳಿ ಮಸೀದಿ ಆಜಮ್ ಅಹಲೆ ಸುನ್ನತ್ ವಲ್ ಜಮಾತ್ ಅನ್ನು ತಲುಪುವುದು.

ಹೆಚ್ಚಿನ ವಿವರಗಳಿಗೆ ಶ್ರೀ ಹಫೀಜುಲ್ಲಾ ಷರೀಫ್ ಖಾದ್ರಿ, ಸಂಘಟಕರ ಮೊಬೈಲ್ ನಂ.9901270392 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಮಂಗಳವಾರ ಅದ್ದೂರಿಯಾಗಿ ನಡೆದ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಮೇಯರ್ ಶಿವಕುಮಾರ್ ಅರಮನೆಯಿಂದ ಬನ್ನಿ ಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಕುದುರೆ ಸವಾರಿ ಮಾಡಿದರು. ಕಳೆದ ವರ್ಷ ಜಂಬೂ ಸವಾರಿಯಲ್ಲಿ ಕುದುರೆ ಸವಾರಿ ಮಾಡಿದ್ದ ಇವರು, ಎರಡನೇ ಬಾರಿಗೆ ಅವಕಾಶ ಪಡೆದಿರುವುದು ವಿಶೇಷ.

ನಾಳೆ ಸಹಸ್ರ ಚಂಡಿಕಾ ಹೋಮ ಪೂರ್ಣಾಹುತಿ

ಮೈಸೂರು, ಅ.25–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ನಡೆದ ವಿಸ್ತಾರ ಸಹಸ್ರ ಚಂಡಿ ಹೋಮದ ಪೂರ್ಣಾಹುತಿ ಅ.27ರಂದು ನಡೆಯಲಿದೆ. ಅಂದು ಬೆಳಗ್ಗೆ 9.30 ಗಂಟೆಗೆ ಆರಂಭವಾಗುವ ಹೋಮದಲ್ಲಿ ಮಧ್ಯಾಹ್ನ 1 ಗಂಟೆಗೆ ಪೂರ್ಣಾಹುತಿ ನಡೆಸಲಾಗುತ್ತದೆ. ಈ ವೇಳೆ ವೇದಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ ಮತ್ತು ಡಿ.ಟಿ.ಪ್ರಕಾಶ್ ಉಪಸ್ಥಿತರಿರುವರು.

ನಾಳೆಯಿಂದ ವೈದ್ಯಕೀಯ ವಸ್ತುಪ್ರದರ್ಶನ

ಮೈಸೂರು,ಅ.25– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಶತಮಾನೋತ್ಸವವನ್ನು ಆಚರಿಸುತ್ತಿದ್ದು, ಇದರ ಅಂಗವಾಗಿ ನಗರದ ಇರ್ವಿನ್ ರಸ್ತೆಯ ಎಂ.ಎಂ.ಸಿ & ಆರ್.ಐ ಆವರಣದಲ್ಲಿರುವ ನೂತನ ಗ್ರಂಥಾಲಯ ಕಟ್ಟಡದಲ್ಲಿ ಅ.27ರಿಂದ ಒಂದು ತಿಂಗಳವರೆಗೆ ವೈದಕೀಯ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗಂಗಾಧರಗೆ ಪಿಹೆಚ್.ಡಿ ಪದವಿ

ಮೈಸೂರು, ಅ. 25–ಡಾ. ಸತೀಶ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ಗಂಗಾಧರ ಎಂ.ಎಂ. ಅವರು ಆ್ಯಂಟಿ ಬ್ಯಾಕ್ಟೀರಿಯಲ್ ಪ್ರಾಪರ್ಟಿಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ



ಶ್ರೀಮತಿ ಲಕ್ಷ್ಮಿ ನಿಧನ

ಮೈಸೂರು, ಅ.25–ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ಶ್ರೀಮತಿ ಲಕ್ಷ್ಮಿ(50) ಅವರು ಅ.23ರಂದು ನಿಧನರಾದರು. ಮೃತರು ಪತಿ ಆರ್.ಪ್ರಕಾಶ್, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದು, ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾ ಗಜಪಡೆಗೆ ತೂಕದ ಪರೀಕ್ಷೆ: ಅರ್ಜುನನೇ ಬಲಿಷ್ಠ

● 50 ದಿನದಲ್ಲಿ 500 ಕೆಜಿ ತೂಕ ಹೆಚ್ಚಿಸಿಕೊಂಡ ಭೀಮ ● ಕ್ಯಾಪ್ಟನ್ ಅಭಿಮನ್ಯು 300 ಕೆಜಿ, ಮಹೇಂದ್ರ 305, ಹೊಸ ಆನೆ ಕಂಜನ್ 265 ಕೆಜಿ, ವರಲಕ್ಷ್ಮಿ 205 ಕೆಜಿ ತೂಕ ಹೆಚ್ಚಳ





ಮೈಸೂರು, ಅ.25(ಎಂಟಿವೈ)– ಜಂಬೂಸವಾರಿಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡು ಪ್ರಶಂಸೆಗೆ ಪಾತ್ರವಾಗಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆಗಳಿಗೆ ಬುಧವಾರ ತೂಕದ ಪರೀಕ್ಷೆ ಮಾಡಿಸಲಾಯಿತು. ಪೌಷ್ಟಿಕ ಆಹಾರ ಸೇವನೆಯಿಂದಾಗಿ 50 ದಿನದಲ್ಲೇ ಭೀಮ 500 ಕೆಜಿ ಹಾಗೂ ಅಭಿಮನ್ಯು 300 ಕೆಜಿ ತೂಕ ಹೆಚ್ಚಿಸಿಕೊಂಡು ಬೀಗಿವೆ.

ದಸರಾ ಮಹೋತ್ಸವದಲ್ಲಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿರುವ ಗಜಪಡೆ ಮರಳಿ ಸ್ವಸ್ಥಾನಕ್ಕೆ ತೆರಳಲು ಸಜ್ಜಾಗಿದ್ದು, ಸಂಪ್ರದಾಯದಂತೆ ಇಂದು ಎಲ್ಲಾ ಆನೆಗಳಿಗೂ ತೂಕದ ಪರೀಕ್ಷೆ ಮಾಡಿಸಿ, ದಾಖಲೀಕರಿಸಲಾಯಿತು.

ಪ್ರತಿವರ್ಷ ಗಜಪಡೆ ಆಗಮನ ಹಾಗೂ ಆಯುಧಪೂಜೆ ದಿನ ಆನೆಗಳಿಗೆ ತೂಕ ಮಾಡಿಸುವ ಪದ್ಧತಿ ರೂಢಿಯಲ್ಲಿದೆ.

ಅರಮನೆಯ ಬಲರಾಮ ದ್ವಾರದಿಂದ ಬೆಳಗ್ಗೆ ಹೊರಬಂದ ಗಜಪಡೆ ಕೆ.ಆರ್. ವೃತ್ತದ ಮೂಲಕ ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ ಮೂಲಕ ಸಾಯಿ ರಾಮ್ ಅಂಡ್ ಕೋ. ವೇ–ಬ್ರಿಡ್ಜ್‌ಗೆ ಕರೆತರಲಾಯಿತು. ನಂತರ ಒಂದೊಂದೇ ಆನೆಯನ್ನು ತೂಕ ಮಾಡಿಸಲಾಯಿತು. 14 ಆನೆಗಳಲ್ಲಿ ಅರ್ಜುನನೇ ತೂಕದಲ್ಲಿ ಮುಂದೆ ಇದ್ದರೆ, ಹಿರಿಯ ಹೆಣ್ಣಾನೆ ವಿಜಯ 2845 ಕೆಜಿ ತೂಗುವ ಮೂಲಕ ಕೊನೆ ಸ್ಥಾನದಲ್ಲಿದ್ದಾಳೆ.

ಆನೆಗಳ ಭುಜಬಲ: ಅಂಬಾರಿ ಆನೆ ಅಭಿಮನ್ಯು 5460 ಕೆಜಿ, ಅರ್ಜುನ 5850, ಗೋಪಿ 5240, ಸುಗ್ರೀವ 5310, ಧನಂಜಯ 5180, ಪ್ರಶಾಂತ 5215, ಭೀಮ 4870, ಮಹೇಂದ್ರ 4835, ಕಂಜನ್ 4505, ರೋಹಿತ 3620 ಕೆಜಿ, ಹೆಣ್ಣಾನೆಗಳಾದ ಹೊಸ ಆನೆ ಲಕ್ಷ್ಮೀ 3365, ವರಲಕ್ಷ್ಮೀ 3225, ಹೊಸ ಆನೆ ಹಿರಣ್ಯ 3025, ಹಿರಿಯ ಆನೆ ವಿಜಯ 2845 ಕೆಜಿ ತೂಗಿದ್ದಾಳೆ.

ಸೆ.25ರಂದು ಆಗಮಿಸಿದ 2ನೇ ತಂಡದ 5 ಹಾಗೂ ಹಿರಿಯ ಆನೆ ಅರ್ಜುನನ ತೂಕದಲ್ಲೂ ಹೆಚ್ಚಳ ಕಂಡಿದೆ.

ಈ ತಂಡದ ಆನೆಗಳು 30 ದಿನದಲ್ಲೇ ತೂಕ ಹೆಚ್ಚಿಸಿಕೊಂಡಿವೆ. ಅರ್ಜುನ 170 ಕೆಜಿ, ಸುಗ್ರೀವ 275, ಪ್ರಶಾಂತ 245, ರೋಹಿತ 270, ಹಿರಣ್ಯ 110 ಹಾಗೂ ಲಕ್ಷ್ಮೀ 130 ಕೆಜಿ ತೂಕ ಹೆಚ್ಚಿಸಿಕೊಂಡಿವೆ.

50 ದಿನದಲ್ಲೇ ತೂಕದಲ್ಲಿ ಹೆಚ್ಚಳ

ಮೊದಲ ತಂಡದ 9 ಆನೆಗಳನ್ನು ಸೆ.1ರಂದು ಗಜಪಯಣದ ಮೂಲಕ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಕರೆತರಲಾಗಿತ್ತು. ಸೆ.5ರಂದು ಅರಮನೆ ಪ್ರವೇಶಿಸಿದ್ದ ಗಜಪಡೆಗೆ ಸೆ.6ರಿಂದ ಪೌಷ್ಟಿಕ ಆಹಾರ ನೀಡಲು ಆರಂಭಿಸಲಾಗಿತ್ತು. ಇದರ ಪರಿಣಾಮವಾಗಿ ಮೊದಲ ತಂಡ 8 ಆನೆಗಳು 50 ದಿನದಲ್ಲೇ ಗಮನಾರ್ಹ ಪ್ರಮಾಣದಲ್ಲಿ ತೂಕ ಹೆಚ್ಚಿಸಿಕೊಂಡಿವೆ. ಭವಿಷ್ಯದ ಅಂಬಾರಿ ಆನೆಯಾಗುವ ಭರವಸೆ ಮೂಡಿಸಿರುವ ಭೀಮ 500 ಕೆಜಿ ತೂಕ ಹೆಚ್ಚಿಸಿಕೊಂಡಿದ್ದಾನೆ. ಅಂಬಾರಿ ಆನೆ ಅಭಿಮನ್ಯು 300 ಕೆಜಿ. ಮಹೇಂದ್ರ 305 ಕೆಜಿ, ಧನಂಜಯ 240 ಕೆಜಿ, ಗೋಪಿ 160 ಕೆಜಿ, ಕಂಜನ್ 265 ಕೆಜಿ, ವಿಜಯ 15 ಕೆಜಿ ಹಾಗೂ ವರಲಕ್ಷ್ಮೀ 205 ಕೆಜಿ ತೂಕ ಹೆಚ್ಚಿಸಿಕೊಂಡಿವೆ.

ವಯಸ್ಕರಲ್ಲಿ ಸಾಕ್ಷರತೆ ಅರಿವು; ವಿಚಾರ ಸಂಕಿರಣ



ಮೈಸೂರು,ಅ.25–ಮೈಸೂರಿನ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ವಯಸ್ಕರಲ್ಲಿ ಸಾಕ್ಷರತೆ ಮತ್ತು ಜಾಗೃತಿ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ರೋಟರಿ ಜಿಲ್ಲಾ ಗವರ್ನರ್ ರೋ.ಹೆಚ್.ಆರ್. ಕೇಶವ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೇಶದಲ್ಲಿ ಯಾರು ಅಕ್ಷರವನ್ನು ಕಲಿತಿಲ್ಲವೋ ಅವರಿಗೆ ಓದು ಬರಹ ಕಲಿಸಿ ಅವರಲ್ಲಿ ಅಕ್ಷರದ ಜ್ಞಾನವನ್ನು ಮೂಡಿಸುವಂತದ್ದು ಈ ಸಾಕ್ಷರತಾ ಯೋಜನೆಯ ಬಹಳ ಮುಖ್ಯ ಉದ್ದೇಶವಾಗಿದೆ. ಹಾಗಾಗಿ ನಮ್ಮ 85ಕ್ಕೂ ಹೆಚ್ಚು ರೋಟರಿ ಸಂಘ ಸಂಸ್ಥೆಗಳು ಈ ಯೋಜನೆಯಲ್ಲಿ ಭಾಗವಹಿಸಿ ಕೆಲವು ಶಾಲೆಗಳನ್ನು ದತ್ತು ಪಡೆದುಕೊಂಡು ಅನಕ್ಷರಸ್ಥರಿಗೆ ಅಕ್ಷರದ ಅರಿವನ್ನು ಬಿಡುವಿನ ವೇಳೆಯಲ್ಲಿ ಕಲಿಸಬೇಕು ಎಂದು ತಿಳಿಸಿದರು.

ರೋಟರಿ 3191ರ ಮಾಜಿ ಜಿಲ್ಲಾ ಗವರ್ನರ್ ರೋ.ರಾಜೇಂದ್ರ ರೈ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತಾ, ಸರ್ವರಿಗೂ ಶಿಕ್ಷಣ ಹಾಗೂ ಪೂರ್ಣ ಸಾಕ್ಷರತೆ ದೊರಕಿಸುವ ಉದ್ದೇಶದಿಂದ ರೋಟರಿ ಇಂಡಿಯಾ ಲಿಟರಸಿ ಮಿಷನ್ ಮತ್ತು ಟಿಇಎಸಿಹೆಚ್ ಯೋಜನೆಯ ಸಹಯೋಗದಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಭಾರತ ಪೂರ್ಣ ಸಾಕ್ಷರತೆಯನ್ನು ಹೊಂದುವಲ್ಲಿ ವಿಶ್ವಾಸವಿದೆ ಎಂದು ತಿಳಿಸಿದರು.

ಮಾಜಿ ಜಿಲ್ಲಾ ಗವರ್ನರ್ ಗಣೇಶ್ ಭಟ್ ಅವರು ವಯಸ್ಕರ ಸಾಕ್ಷರತೆ, ಅದರ ಅನುಕೂಲದ ಬಗ್ಗೆ ವಿವರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ರೋಟರಿ ಗವರ್ನರ್ ನಾಗಾರ್ಜುನ, ಜಿಲ್ಲಾ ಕಾರ್ಯದರ್ಶಿ ರೋ.ಸುನಿಲ್ ಬಾಳಿಗಾ, ರೋ. ಗಣೇಶ್‌ಭಟ್, ರೋ.ವಿಕ್ರಂದತ್ತ, ರೋ.ಪಿ.ಕೆ. ರಾಮಕೃಷ್ಣ, ಮಾಜಿ ಸಹಾಯಕ ರಾಜ್ಯಪಾಲರಾದ ಅನಂತ ರಾಜೇ ಅರಸ್, ರೋ.ಸುಭೋದ್, ರೋ.ಇಂದ್ರ ಬಲ್ಲಾಳ್, ರೋ.ಲತಾ ಸಚ್ಚಿದಾನಂದ ಉಪಸ್ಥಿತರಿದ್ದರು.

ಇಂದು ಸ್ವಸ್ಥಾನಕ್ಕೆ ದಸರಾ ಜಂಬೋಪಡೆ

ಅರಮನೆ ಆವರಣದಲ್ಲಿ ಬೆಳಗ್ಗೆ 10.40ಕ್ಕೆ ಸಾಂಪ್ರದಾಯಿಕ ಪೂಜೆ ನಂತರ ಬೀಳ್ಕೊಡುಗೆ

ಮೈಸೂರು,ಅ.25(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡು ತಂಡಗಳಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಿದ್ದ ಅಂಬಾರಿ ಆನೆ ಅಭಿಮನ್ಯು ನೇತೃತ್ವದ 14 ಆನೆಗಳು ನಾಳೆ (ಅ.26) ಮಧ್ಯಾಹ್ನದ ವೇಳೆಗೆ ತಮ್ಮ ತಮ್ಮ ಸ್ವಸ್ಥಾನಗಳಿಗೆ ಮರಳಲಿವೆ. ಜಂಬೂಸವಾರಿ ಮೆರವಣಿಗೆಯಲ್ಲಿ ರಾಜಗಾಂಭೀರ್ಯದಿಂದ ಸಾಗಿ, ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಗಜಪಡೆಗೆ, ನಾಳೆ ಬೆಳಗ್ಗೆ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ಅವರಿಂದ ಪೂಜೆ ಸಲ್ಲಿಸಿ ಬೀಳ್ಕೊಡಲಾಗುತ್ತಿದೆ. ಬಳಿಕ ಆನೆಗಳನ್ನು ಲಾರಿಗಳ ಮೂಲಕ ಬೆಂಗಾವಲು ಪಡೆಯೊಂದಿಗೆ ಆಯಾಯ ಶಿಬಿರಗಳಿಗೆ ಸುರಕ್ಷಿತವಾಗಿ ತಲುಪಿಸಲಾಗುತ್ತದೆ.



ಮಂಗಳವಾರ ಜಂಬೂಸವಾರಿ ವೀಕ್ಷಿಸಲು ಆಗಮಿಸಿದ್ದ ಪ್ರವಾಸಿಗರಿಗೆ ಟೀಂ ಮೈಸೂರು ವತಿಯಿಂದ ಶುದ್ಧ ಕುಡಿಯುವ ನೀರು ಪೂರೈಸಲಾಯಿತು. ಈ ಸಂದರ್ಭದಲ್ಲಿ ಟೀಂ ಮೈಸೂರ್‌ನ ಗೋಕುಲ್ ಗೋವರ್ಧನ್, ಯಶವಂತ್, ಅನಿಲ್ ಜೈನ್, ಹಿರಿಯಣ್ಣ, ಬಸವರಾಜು, ಯತೀಶ್, ಶಿವಪ್ರಸಾದ್, ಹರೀಶ್ ಶೆಟ್ಟಿ, ಬಾಲಕೃಷ್ಣ, ಚೇತನ್ ರಾವ್, ಸುನೀಲ್, ಸತೀಶ್, ಮಂಜುನಾಥ್ ಇನ್ನಿತರರಿದ್ದರು.

3 ಲಕ್ಷಕ್ಕೂ ಅಧಿಕ ಮಂದಿಯಿಂದ ಫಲಪುಷ್ಪ ಪ್ರದರ್ಶನ ವೀಕ್ಷಣೆ

ಮೈಸೂರು, ಅ.25(ಜಿಎ)–ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಈ ಬಾರಿ ಮೂರು ಲಕ್ಷಕ್ಕೂ ಅಧಿಕ ಜನ ಭೇಟಿ ನೀಡಿದ್ದು, ಅದರಲ್ಲೂ ವಿಜಯದಶಮಿಯಂದು 50 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ.

ಈ ಬಾರಿ ಫಲಪುಷ್ಪ ಪ್ರದರ್ಶನದಲ್ಲಿ ಕಲಾತ್ಮಕವಾಗಿ ಜೋಡಿಸಲಾದ ಹೂ ಕುಂಡಗಳು ಮೈಸೂರಿಗೆ ಆಗಮಿಸಿದ್ದ ದೇಶ–ವಿದೇಶದ ಲಕ್ಷಾಂತರ ಮಂದಿಯ ಮನ ಸೆಳೆದವು. ಹೂವುಗಳ ತಾಜಾತನವು ಆಕರ್ಷಿಸಿತ್ತು. ವಿಶೇಷವಾಗಿ ಕೋಲ್ಕತ್ತಾ ಬಿಳಿ ಕ್ರೈಸಾಂಥೆಮಮ್ ಹೂವುಗಳನ್ನು ಬಳಸಿ ರಚಿಸಲಾದ ಚಂದ್ರಯಾನ–3ರ ಮಾದರಿ ನೋಡಿ ಆಶ್ಚರ್ಯಚಕಿತರಾದರು.

ಕುಪ್ಪಣ್ಣ ಪಾರ್ಕ್‌ನಲ್ಲಿ ಸ್ಥಳೀಯ ತೋಟಗಾರಿಕಾ ಇಲಾಖೆ ಮತ್ತು ಇತರ ಕಡೆಯಿಂದ ತರಲಾದ 85,000ಕ್ಕೂ ಹೆಚ್ಚು ಹೂವಿನ ಕುಂಡಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. 50,000ಕ್ಕೂ ಹೆಚ್ಚು ಹೂವುಗಳನ್ನು ಬಳಸಿ ರಚಿಸಲಾದ ಶ್ರೀ ಚಾಮುಂಡೇಶ್ವರಿಯ ಕಲಾತ್ಮಕ ಪ್ರತಿರೂಪವೂ ಹೈಲೈಟ್ ಆಗಿತ್ತು.




ಹೂವಿನಿಂದ ಮಾಡಲಾದ ಕ್ರಿಕೆಟ್ ಬ್ಯಾಟ್, ವಿಕೆಟ್‌ಗಳು, ಚೆಂಡು ಮತ್ತು ಭಾರತದ ನಕ್ಷೆಯೊಂದಿಗೆ ಕ್ರಿಕೆಟ್ ವಿಶ್ವಕಪ್‌ನಲ್ಲಿ ಭಾರತಕ್ಕೆ ಶುಭ ಹಾರೈಸುವ ಹೂವಿನ ಮಾದರಿ ಪ್ರಮುಖ ಆಕರ್ಷಣೆಯಾಗಿತ್ತು. ಮೈಸೂರು ಮಹಾರಾಜರು ದರ್ಬಾರ್ ನಡೆಸುವ ರತ್ನಖಚಿತ ಹೂವಿನ ಸಿಂಹಾಸನದ ಮಾದರಿಯನ್ನು ವರ್ಣರಂಜಿತ ಹೂವುಗಳ ಪ್ಯಾಲೆಟ್ ಬಳಸಿ ವಿನ್ಯಾಸಗೊಳಿಸಲಾಗಿತ್ತು. ಹಾಗೇ ಈ ಬಾರಿ ಹೂವಿನ ಹಾಕಿ ಸ್ಟಿಕ್, ಬಾಲ್, ಶಟಲ್ ಕಾಕ್ ಮತ್ತು ರಾಕೆಟ್ ಕೂಡ ಪ್ರವಾಸಿಗರನ್ನು ಆಕರ್ಷಿಸಿತು.

ದಸರಾ ಫಲಪುಷ್ಪ ಪ್ರದರ್ಶನದ ಅಂಗವಾಗಿ ತೋಟಗಾರಿಕಾ ಇಲಾಖೆಯು ಕೈಗಾರಿಕೆ, ಸರ್ಕಾರಿ ಕಚೇರಿ ಮತ್ತು ಮನೆಗಳಲ್ಲಿನ ಅತ್ಯುತ್ತಮ ಉದ್ಯಾನ ತೋಟಗಾರಿಕೆ ವಿಜೇತರಿಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಗುರುವಾರ ಸಂಜೆ 4 ಗಂಟೆಗೆ ಬಹುಮಾನ ವಿತರಿಸಲಿದೆ.

ಈ ಎಲ್ಲಾ ಆಕರ್ಷಕ ಆಕೃತಿಗಳನ್ನು ನೋಡಲು ದೇಶ–ವಿದೇಶದಿಂದ ಪ್ರವಾಸಿಗರು ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಅದರಂತೆ ಫಲಪುಷ್ಪ ಪ್ರದರ್ಶನಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು. ಚಾಲನೆಗೊಂಡ ದಿನದಿಂದ ವಿಜಯದಶಮಿ ದಿನದವರೆಗೂ ನಿತ್ಯವೂ 30 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದರು. ಹಾಗೇ ಆಯುಧಪೂಜೆ ಮತ್ತು ವಿಜಯದಶಮಿ ದಿನದಂದು 50 ಸಾವಿರಕ್ಕೂ ಹೆಚ್ಚಿನ ಪ್ರವಾಸಿಗರು ಭೇಟಿ ನೀಡಿ ಫಲಪುಷ್ಪ ಪ್ರದರ್ಶನವನ್ನು ಕಣ್ತುಂಬಿಕೊಂಡಿದ್ದಾರೆ.

> “ಪ್ರತಿ ಬಾರಿಯಂತೆ ಈ ಬಾರಿಯೂ ಫಲಪುಷ್ಪ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, 3 ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ. ಮತ್ತಷ್ಟು ದಿನ ಫಲಪುಷ್ಪ ಪ್ರದರ್ಶನ ಮುಂದುವರೆಸುವಂತೆಯೂ ಮನವಿಗಳು ಬಂದಿವೆ
> **–ಸುವೇದ, ಹಿರಿಯ ಸಹಾಯಕ ನಿರ್ದೇಶಕಿ, ತೋಟಗಾರಿಕೆ**

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.10.2023 ಗುರುವಾರ, ಮಳೆ ನಕ್ಷತ್ರ: ಸ್ವಾತಿ, 25.10.2023 ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಸೈನ್ಸ್ ಅಂಡ್ ಟೆಕ್ನಾಲಜಿ ಯೂನಿವರ್ಸಿಟಿ :** ಜೆಎಸ್‌ಎಸ್ ಅಂತರ ಸಂಸ್ಥೆಗಳ ಪುರುಷರ ಕ್ರಿಕೆಟ್ ಪಂದ್ಯಾವಳಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ನಿರ್ದೇಶಕ ಡಾ. ಬಿ. ಸುರೇಶ್, ಸ್ಥಳ: ಕೆಎಸ್‌ಸಿಎ ಮೈದಾನ, ಜೆಎಸ್‌ಎಸ್ ಟಿಐ ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಮಹಾರಾಜ ಕಾಲೇಜು :** ಸ್ವಾಗತ ಹಾಗೂ ಅಭಿವಿನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ಸಿ.ಎ. ಶ್ರೀಧರ್, ಉಪಸ್ಥಿತರು : ಮಹಾರಾಜ ಕಾಲೇಜು ಆಡಳಿತಾಧಿಕಾರಿ ಪ್ರೊ. ವಿ. ಷಣ್ಮುಗಂ, ಸಂಚಾಲಕರಾದ ಪ್ರೊ. ಷಹಸೀನಾ ಬೇಗಂ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10ಕ್ಕೆ.

■ **ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ, ಕ್ರೀಡೆ, ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್‌ಕ್ರಾಸ್ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಪ್ರಧಾನ ಭಾಷಣಕಾರರು : ಸಂಸ್ಕೃತಿ ಚಿಂತಕ ಡಾ. ಡಿ. ಸತೀಶ್‌ಚಂದ್ರ, ಮುಖ್ಯ ಅತಿಥಿಗಳು: ಮಾಜಿ ಮೇಯರ್ ಸುನಂದ ಪಾಲನೇತ್ರ, ಪತ್ರಾಂಕಿತ ವ್ಯವಸ್ಥಾಪಕ ಎಂ. ವಿದ್ಯಾರಣ್ಯ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲರಾದ ಡಾ. ಎನ್. ರಾಗಿಣಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಇಂಡಿಯನ್ ಕಾಂಕ್ರೀಟ್ ಇನ್ಸ್‌ಟಿಟ್ಯೂಟ್** : ಐಸಿಐ–ಸ್ಟೂಡೆಂಡ್ ಚಾಪ್ಟರ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಐಸಿಐ ಬೆಂಗಳೂರು ಸೆಂಟರ್ ಅಧ್ಯಕ್ಷ ಹೆಚ್.ಆರ್. ಗಿರೀಶ್, ಗೌರವ ಅತಿಥಿಗಳು : ಐಸಿಐ ಕಾರ್ಯದರ್ಶಿ ಪ್ರೊ. ಸುಹಾಸ್ ರಾಮಚಂದ್ರ, ಸೋಮಶೇಖರ್, ವಿಶ್ವನಾಥರಾವ್, ಸ್ಥಳ: ಸರ್ವಪಲ್ಲಿ ರಾಧಾಕೃಷ್ಣನ್ ಸಭಾಂಗಣ, ಎನ್‌ಐಇ–ಅಡ್ಮಿನ್ ಬ್ಲಾಕ್, ಮಾನಂದವಾಡಿ ರಸ್ತೆ, ಮಧ್ಯಾಹ್ನ 2.30 ರಿಂದ.

■ **ಗಾನಭಾರತೀ :** ವಿದುಷಿ ಭಾಗ್ಯಲಕ್ಷ್ಮಿ ಚಂದ್ರಶೇಖರ್ ಅವರಿಂದ ವೀಣಾ ವಾದನ, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೃಷ್ಣ ತಿಪ್ಪೂರು, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಆರ್.ರಾಮಕೃಷ್ಣ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 10.00 ಚಿಂತನಪಲ್ಲಿ ರಾಮಚಂದ್ರ ರಾವ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರ ನಾಮ–ಎಸ್.ಪಿ. ಬಾಲಸುಬ್ರಹ್ಮಣ್ಯಂ, ಎಂ.ಎಲ್.ವಸಂತಕುಮಾರಿ, 1.20 ಭಾವಗೀತೆ–ಪಾವನಿ ಕಾಶೀನಾಥ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ ವಿಶ್ವ ಬಾಹ್ಯಾಕಾಶ ಸಪ್ತಾಹದ ಅಂಗವಾಗಿ ಚರ್ಚೆ, ಭಾಗವಹಿಸುವವರು ಡಾ. ಎನ್.ಎಸ್.ಪ್ರಸಾದ್ ಮತ್ತು ಅಭಿಷೇಕ್ ಎ.ಎಸ್., 6.50 ಕೃಷಿರಂಗ–ಕಿಸಾನ್‌ವಾಣಿ– ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಭರಮಣ್ಣ ಬಸಪ್ಪ ನಾಯಕ್ ಅವರೊಂದಿಗೆ ಸಂದರ್ಶನ, 8.00 ಯುವವಾಣಿ–ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ ನಿವೇದಿತಾ ಎಚ್., 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ಮಹಿಷಪುರದಲ್ಲಿ ಒಂದು ದಿನ", ನಿರ್ದೇಶನ ಹಾಗೂ ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್

ನ.2ರಿಂದ ಹಾಸನಾಂಬೆ ದರ್ಶನ



ಹಾಸನ: ನವೆಂಬರ್ 2ರಂದು ಪ್ರಸಿದ್ಧ ಅಧಿದೇವತೆ ಹಾಸನಾಂಬೆ ದೇವಸ್ಥಾನ ತೆರೆಯಲಾಗುತ್ತಿದ್ದು ಅಪಾರ ಭಕ್ತರು ಆಗಮಿಸುವ ನಿರೀಕ್ಷೆಯ ಮೇಲೆ ನಿಗಾ ಇಡಲು ಜಿಲ್ಲಾಡಳಿತ ಹೊಸ ನಿಯಮಗಳನ್ನು ರೂಪಿಸಿದೆ.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಭಕ್ತರು ಬರುವ ಸಾಧ್ಯತೆ ಇರುವುದರಿಂದ ಜಿಲ್ಲಾಡಳಿತವು ಹೊಸ ನಿಯಮಗಳನ್ನು ರೂಪಿಸಿದೆ.

ಮೊದಲ ಬಾರಿಗೆ ಜಿಲ್ಲಾಡಳಿತವು ಗರ್ಭಗುಡಿ, ಕಾರ್ಪೆಟ್ ಮತ್ತು ಜರ್ಮನ್ ಟೆಂಟ್ ಒಳಗೆ 10 ಕಿಲೋಮೀಟರ್ ಉದ್ದದ ಸಾಮಾನ್ಯ ಸರತಿ ಸಾಲಿನಲ್ಲಿ ಮಾಲೆ ಮತ್ತು ಶಾಲು ಹೊದಿಸಿ ಅರ್ಚನೆ ಮತ್ತು ವಿವಿಐಪಿಗಳನ್ನು ಗೌರವಿಸುವುದನ್ನು ನಿಷೇಧಿಸಿದೆ.

ಬಾಯಾರಿಕೆ ನೀಗಿಸಲು ಉದ್ದನೆಯ ಸರತಿ ಸಾಲಿನಲ್ಲಿ ನಿಂತ ಭಕ್ತರಿಗೆ ಹಾಲು, ನೀರು ನಿರಂತರ ಪೂರೈಕೆ. ತಾತ್ಕಾಲಿಕ ಶೌಚಾಲಯಗಳನ್ನು 25ರಿಂದ 50 ಕ್ಕೆ ಹೆಚ್ಚಿಸಲಾಗಿದೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ನಿಮಿಷದಿಂದ ನಿಮಿಷದ ಮಾಹಿತಿಯನ್ನು ಪಡೆಯಲು ವಾರ್ ರೂಮ್. ಮುಖ್ಯ ದ್ವಾರದಿಂದ ಭಕ್ತರನ್ನು ತಪ್ಪಿಸಲು ವಿಐಪಿಗಳಿಗೆ ತ್ವರಿತ ಪ್ರತಿಕ್ರಿಯೆ ಕೋಡ್‌ನೊಂದಿಗೆ ಪಾಸ್‌ಗಳು ಮತ್ತು ಗುರುತಿನ ಚೀಟಿಗಳನ್ನು ಒದಗಿಸಲಾಗುತ್ತದೆ.

24 ಗಂಟೆಗಳ ಕಾಲ ದೇವಸ್ಥಾನ ತೆರೆದಿರುವುದರಿಂದ ರಾಜ್ಯದ ವಿವಿಧ ಭಾಗಗಳಿಂದ ಬರುವ ಭಕ್ತರಿಗೆ ರಾತ್ರಿ ತಂಗುವ ಸೌಲಭ್ಯ. ಹಾಸನ ನಗರದ 7 ಪ್ರಮುಖ ವೃತ್ತಗಳು ಮತ್ತು ಸ್ಥಳಗಳಲ್ಲಿ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುವುದು. ಸರತಿ ಸಾಲಿನಲ್ಲಿ ಸ್ಥಾಪಿಸಲಾದ ಟಿವಿಯಲ್ಲಿ ಮಹಾಭಾರತ ಸಂಚಿಕೆಯನ್ನು ಪ್ರದರ್ಶಿಸಲಾಗುತ್ತದೆ. ಭಕ್ತರ ಕಣ್ಗಾವಲಿಗೆ ನಿಯೋಜನೆಗೊಂಡಿರುವ ಪೊಲೀಸರು ಹಾಗೂ ಕಂದಾಯ ಅಧಿಕಾರಿಗಳಿಗೆ ವಾಕಿ-ಟಾಕಿ ವ್ಯವಸ್ಥೆ ಮಾಡಲಾಗುವುದು.

ಹಾಸನಾಂಬೆ ದೇವಸ್ಥಾನದಲ್ಲಿ ಲಭ್ಯವಿರುವ ಅಂಕಿಅಂಶಗಳ ಪ್ರಕಾರ ಕಳೆದ ವರ್ಷ 3.64 ಕೋಟಿ ರೂಪಾಯಿ ಗಳಿಸಿತ್ತು. ದೇವಾಲಯದ ಅಭಿವೃದ್ಧಿ ಸಮಿತಿಯು 8.50 ಕೋಟಿ ರೂಪಾಯಿ ಸ್ಥಿರ ಠೇವಣಿ ಹೊಂದಿದೆ. ಕಳೆದ ವರ್ಷ 6 ಲಕ್ಷಕ್ಕೂ ಹೆಚ್ಚು ಭಕ್ತರು ದೇವಾಲಯಕ್ಕೆ ಭೇಟಿ ನೀಡಿದ್ದರು. ಈ ವರ್ಷ ಇದು 10 ಲಕ್ಷಕ್ಕೆ ತಲುಪಬಹುದು ಎಂದು ಮೂಲಗಳು ತಿಳಿಸಿವೆ.

ಜಿಲ್ಲಾಧಿಕಾರಿ ಸಿ ಸತ್ಯಭಾಮಾ ಮತ್ತು ಸಹಾಯಕ ಆಯುಕ್ತರು ಮತ್ತು ದೇವಸ್ಥಾನದ ಆಡಳಿತಾಧಿಕಾರಿ ಮಾರುತಿ ಅವರ ಪ್ರಕಾರ, ದಶಕಗಳಿಂದ ಅನುಸರಿಸುತ್ತಿರುವ ಆಚರಣೆಗಳ ನಂತರ ನವೆಂಬರ್ 2ರಂದು ದೇವಾಲಯದ ಬಾಗಿಲು ತೆರೆಯುತ್ತದೆ. ಆದರೆ ಅದೇ ದಿನ ಭಕ್ತರಿಗೆ ಪ್ರವೇಶವಿಲ್ಲ. ನವೆಂಬರ್ 3ರಿಂದ ನವೆಂಬರ್ 14ರವರೆಗೆ ಭಕ್ತರಿಗಾಗಿ ದೇವಾಲಯವು 24X7 ತೆರೆದಿರುತ್ತದೆ. ನವೆಂಬರ್ 15ರಂದು ದೇವಾಲಯದ ಬಾಗಿಲು ಮುಚ್ಚಲಾಗುತ್ತದೆ. ಭಕ್ತರು 1000 ರೂ. ಮತ್ತು 300 ರೂ.ಗಳ ವಿಶೇಷ ಪ್ರವೇಶ ಟಿಕೆಟ್‌ಗಳೊಂದಿಗೆ ವಿಶೇಷ ಪ್ರವೇಶ ಪಡೆಯಬಹುದು.

ಅ.28ರಿಂದ ಎರಡು ದಿನ '1ಎಕ್ಸ್‌ಬೆಟ್ ಮೈಸೂರು ಡರ್ಬಿ 2023 (ಗ್ರೇಡ್1)' ಸೇರಿ ವಾರಾಂತ್ಯ ರೇಸ್

ಮೈಸೂರು,ಅ.25(ಪಿಎಂ)- ಮೈಸೂರು ರೇಸ್ ಕ್ಲಬ್‌ನಲ್ಲಿ (ಎಂಆರ್‌ಸಿ) ಪ್ರತಿಷ್ಠಿತ '1ಎಕ್ಸ್‌ಬೆಟ್ ಮೈಸೂರು ಡರ್ಬಿ 2023 (ಗ್ರೇಡ್1)' ರೇಸ್ ಸೇರಿದಂತೆ ಇತರ ವಾರಾಂತ್ಯದ ರೇಸ್‌ಗಳು ಅ.28 ಮತ್ತು 29ರಂದು ನಡೆಯಲಿವೆ.

ಮೈಸೂರಿನ ಎಂಆರ್‌ಸಿ ಕ್ಲಬ್ ಹೌಸ್‌ನಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಎಂಆರ್‌ಸಿ ಅಧ್ಯಕ್ಷರೂ ಆದ ಸೀನಿಯರ್ ಸ್ಟೀವರ್ಡ್ ಕೆ.ಎಂ. ಚಂದ್ರೇಗೌಡ, '1ಎಕ್ಸ್‌ಬೆಟ್' ವತಿಯಿಂದ ಮೈಸೂರು ಡರ್ಬಿ 2023 (ಗ್ರೇಡ್1) ಅನ್ನು ಪ್ರಾಯೋಜನೆ ಮಾಡಲಾಗಿದೆ. 1974ರಲ್ಲಿ ಮೊದಲನೇ ಡರ್ಬಿ ನಡೆಯಿತು. ಇದರಲ್ಲಿ ಜಾಕಿ ಆರ್ ಆಲ್ಫೋರ್ಡ್ ಸವಾರಿ ಮಾಡಿದ ಬಿಸಿ ಮಿಡ್‌ನೈಟ್ ಕೌಬಾಯ್ ಕುದುರೆ ಗೆಲುವು ಸಾಧಿಸಿತ್ತು. ಟ್ರೈನರ್ ಮೋಸಸ್ ಅವರು ತರಬೇತುದಾರರಾಗಿದ್ದರು. ಅಲ್ಲಿಂದ ಈವರೆಗೆ 47 ಮೈಸೂರು ಡರ್ಬಿ ನಡೆದಿದ್ದು, ಈ ಬಾರಿ 48ನೇ ಆವೃತ್ತಿ ನಡೆಯುತ್ತಿದೆ ಎಂದರು.

ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷ ಮೈಸೂರು ಡರ್ಬಿ ನಡೆಸಲು ಸಾಧ್ಯವಾಗಲಿಲ್ಲ. ಮೈಸೂರು ಡರ್ಬಿಯಲ್ಲಿ ಗಂಡು ಮತ್ತು ಹೆಣ್ಣು ಕುದುರೆ ಎರಡೂ ಓಡುತ್ತವೆ. ಈ ಪೈಕಿ ಹೆಣ್ಣು ಕುದುರೆ ಗೆಲುವು ಸಾಧಿಸಿರುವುದು ಕಡಿಮೆ. ಈವರೆಗೆ ಒಟ್ಟು ನಡೆದಿರುವ 47 ಡರ್ಬಿಯಲ್ಲಿ ಹೆಣ್ಣು ಕುದುರೆ ಗೆಲುವು ಪಡೆದಿರುವುದು ಕೇವಲ 8ರಲ್ಲಿ ಮಾತ್ರ. ಆದರೆ 39 ಆವೃತ್ತಿಗಳಲ್ಲಿ ಗಂಡು ಕುದುರೆಗಳು ಗೆಲುವು ಸಾಧಿಸಿವೆ. 2019ರಲ್ಲಿ ತರಬೇತುದಾರರಾದ ಪದ್ಮನಾಭನ್ ಅವರಿಂದ ತರಬೇತಿ ಪಡೆದ ಜಾಕಿ ಪಿ.ಟ್ರೆವರ್ ಅವರಿಂದ ಸವಾರಿ ಮಾಡಿದ ಸರ್ ಸೆಸಿಲ್ ಗ್ರಾಜಿ ಕುದುರೆ ಡರ್ಬಿ ಗೆಲುವು ಸಾಧಿಸಿ, 1.59.058 ನಿಮಿಷಗಳ ವೇಗದ ಕೋರ್ಸ್ ದಾಖಲೆ ಮಾಡಿದೆ ಎಂದರು.



ಮೈಸೂರಿನ ಎಂಆರ್‌ಸಿ ಕ್ಲಬ್ ಹೌಸ್‌ನಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಡರ್ಬಿ ಸೇರಿದಂತೆ ಇತರ ರೇಸ್‌ಗಳ ಕಪ್‌ಗಳನ್ನು ಪ್ರದರ್ಶಿಸಲಾಯಿತು. (ಎಡದಿಂದ) ಎಂಆರ್‌ಸಿ ಕಾರ್ಯದರ್ಶಿಯೂ ಆದ ಸಿಇಒ ಎನ್.ಹೆಚ್.ಎಸ್.ಮಣಿ, ಕಮಿಟಿ ಸದಸ್ಯರಾದ ಎ.ಎಸ್.ಅಜಿತ್‌ಕುಮಾರ್ ರಾಜ್ ಅರಸ್, ಜಯರಾಜ್ ಅರಸ್, ಸ್ಟೀವರ್ಡ್ ಕೆ.ಜಿ. ಅನಂತ ರಾಜ್ ಅರಸ್, ಅಧ್ಯಕ್ಷ ಕೆ.ಎಂ.ಚಂದ್ರೇಗೌಡ, ಸ್ಟೀವರ್ಡ್‌ಗಳಾದ ಹೆಚ್.ಕೆ.ರಮೇಶ್, ಕೆ.ಎನ್.ಸುರೇಶ್‌ಕುಮಾರ್, ಕಮಿಟಿ ಸದಸ್ಯರಾದ ಡಾ. ಎಂ.ವಿ. ವೇಣು, ಎಂಆರ್‌ಸಿ ಉಪ ಕಾರ್ಯದರ್ಶಿ ಡಾ. ಜಗನ್ನಾಥ್ ಚಿತ್ರದಲ್ಲಿದ್ದಾರೆ.

'1ಎಕ್ಸ್‌ಬೆಟ್ ಮೈಸೂರು ಡರ್ಬಿ 2023 (ಗ್ರೇಡ್1)'ಕ್ಕೆ ಒಟ್ಟು ಷೇರು ಹಣ 1 ಕೋಟಿ ರೂ. ಆಗಿದೆ. ಈ ರೇಸ್‌ನ ವಿಜೇತರಿಗೆ 57 ಲಕ್ಷ ರೂ. ಬಹುಮಾನ ದೊರೆಯಲಿದೆ. ಉಳಿದಂತೆ ದ್ವಿತೀಯ ಸ್ಥಾನಕ್ಕೆ 19 ಲಕ್ಷ ತೃತೀಯ ಸ್ಥಾನಕ್ಕೆ 9.50 ಲಕ್ಷ 4ನೇ ಸ್ಥಾನಕ್ಕೆ 4.75 ಲಕ್ಷ 5ನೇ ಸ್ಥಾನಕ್ಕೆ 2.85 ಲಕ್ಷ 6ನೇ ಸ್ಥಾನಕ್ಕೆ 1.90 ಲಕ್ಷರೂ. ಬಹುಮಾನ ಲಭಿಸಲಿದೆ ಎಂದರು.

ಒಟ್ಟು 9 ಕುದುರೆಗಳು ಡರ್ಬಿಯಲ್ಲಿ ಭಾಗವಹಿಸಲಿವೆ. ಮೈಸೂರಿನ ಒಂದು ಕುದುರೆ ಸೇರಿದಂತೆ 8 ಕುದುರೆ ಬೆಂಗಳೂರಿನಿಂದ ಬಂದು ಭಾಗವಹಿಸಲಿವೆ. ಮೈಸೂರಿನ ಕುದುರೆ 'ಎಲೋ ಕ್ಯೂನ್ಸ್' ಆಗಿದ್ದು, ಬೆಂಗಳೂರಿನ ಫಿಯರ್‌ಲೆಸ್ ಜೋಯ್, ವ್ಯಾಗ್ನಸ್, ರಿವರ್ ಆಫ್ ಗೋಲ್ಡ್, ರೂಲಿಂಗ್ ಡೈನಾಸ್ಟಿ, ಸೈಗಾನ್, ಸ್ಟ್ರಾವಿನ್ಸಕಿ, ಟಚ್ ಆಫ್ ಗ್ರೇ ಮತ್ತು ಫಾಸ್ಟ್ ಪೇಸ್ ಕುದುರೆಗಳು ಡರ್ಬಿಯಲ್ಲಿ ಪಾಲ್ಗೊಳ್ಳಲಿವೆ ಎಂದು ತಿಳಿಸಿದರು.

'ಮೈಸೂರು ಡರ್ಬಿ' ಮೈಸೂರಿಗೆ ಪ್ರತಿಷ್ಠಿತವಾದ ರೇಸ್ ಆಗಿದ್ದು, ಕಳೆದ ವರ್ಷ ಈ ರೇಸ್ ಅನ್ನು 8ರಿಂದ 9 ಸಾವಿರ ಮಂದಿ ಎಂಆರ್‌ಸಿಗೆ ಭೇಟಿ ನೀಡಿ ವೀಕ್ಷಿಸಿದ್ದರು. ಈ ಬಾರಿಯೂ ಅದೇ ಸಂಖ್ಯೆಯಲ್ಲಿ ಜನ ಬರುವ ನಿರೀಕ್ಷೆ ಹೊಂದಲಾಗಿದೆ. ಈ ರೇಸ್‌ನಲ್ಲಿ ಭಾಗವಹಿಸುತ್ತಿರುವ ಕುದುರೆಗಳು ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾಗಿವೆ ಎಂದು ತಿಳಿಸಿದರು.

ಮೈಸೂರು ಡರ್ಬಿಗೆ ಸಂಬಂಧಿಸಿದಂತೆ ಎಂಆರ್‌ಸಿ ಕೌಶಲ್ಯದ ಸ್ಪರ್ಧೆಗಳನ್ನು ಆಯೋಜಿಸಿದೆ. ಬಂಪರ್ ಬಹುಮಾನವಾಗಿ ಆಲ್ಟೋ ಕಾರ್ ನೀಡುತ್ತಿದ್ದು, ಬೈಕ್‌ಗಳು ಸೇರಿದಂತೆ ಇನ್ನಿತರ ಬಹುಮಾನಗಳೂ ದೊರೆಯಲಿವೆ. 200 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ ಎಂದರು.

ಅಧ್ಯಕ್ಷರಾಗಿ ತಡವಾಗಿ ಅಧಿಕಾರ ವಹಿಸಿಕೊಂಡ ಕಾರಣವೇನು? ಎಂಬುದಕ್ಕೆ ಪ್ರತಿಕ್ರಿಯಿಸಿದ ಕೆ.ಎಂ.ಚಂದ್ರೇಗೌಡ, ಜನರಲ್ ಬಾಡಿ ಮೀಟಿಂಗ್ ನಡೆಯುವುದು ತಡವಾದ ಕಾರಣ ಅಧಿಕಾರ ವಹಿಸಿಕೊಳ್ಳುವುದೂ ತಡವಾಯಿತು. ಎಂಆರ್‌ಸಿ ಜಾಗಕ್ಕೆ ಸಂಬಂಧಿಸಿದಂತೆ ಗುತ್ತಿಗೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಪಿಐಎಲ್ (ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ) ಕುರಿತಂತೆ ಎಂಆರ್‌ಸಿ ಪರ ತೀರ್ಪು ಪಡೆಯುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಂಆರ್‌ಸಿ ಸೇವಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಎಂಆರ್‌ಸಿ ಕ್ಲಬ್ ಕಣ್ಣಿನ ಆಸ್ಪತ್ರೆ ಇದೀಗ ಮೈಸೂರಿನಲ್ಲಿ ಮಾತ್ರವಲ್ಲದೆ, ಮಂಡ್ಯ, ಹಾಸನ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿಯೂ ಬಡ ಜನತೆಗಾಗಿ ಉಚಿತವಾಗಿ ಕಣ್ಣಿನ ಚಿಕಿತ್ಸಾ ಶಿಬಿರಗಳನ್ನು ಆಯೋಜಿಸುತ್ತಿದೆ ಎಂದು ತಿಳಿಸಿದರು.

ನಿಮ್ಮ ಅವಧಿಯಲ್ಲಿ ಸದಸ್ಯತ್ವ ಹೆಚ್ಚಳ ಮಾಡಲಾಗುತ್ತದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಕುರಿತಂತೆ ಮುಂದೆ ಏನಾಗುತ್ತದೆ ಎಂದು ಸದ್ಯ ಹೇಳಲಾಗದು. ಈ ಬಗ್ಗೆ ಯಾವುದೇ ತೀರ್ಮಾನ ಮಾಡಿಲ್ಲ ಎಂದರು. ಸ್ಟೀವರ್ಡ್‌ಗಳಾದ ಕೆ.ಜಿ.ಅನಂತ ರಾಜ್ ಅರಸ್, ಹೆಚ್.ಕೆ.ರಮೇಶ್, ಕೆ.ಎನ್. ಸುರೇಶ್‌ಕುಮಾರ್, ಎಂಆರ್‌ಸಿ ಕಾರ್ಯದರ್ಶಿಯೂ ಆದ ಸಿಇಒ ಎನ್.ಹೆಚ್. ಎಸ್.ಮಣಿ, ಕಮಿಟಿ ಸದಸ್ಯರಾದ ಎ.ಎಸ್. ಅಜಿತ್‌ಕುಮಾರ್‌ರಾಜ್‌ಅರಸ್, ಜಯರಾಜ್ ಅರಸ್, ಡಾ.ಎಂ.ವಿ.ವೇಣು, ಎಂಆರ್‌ಸಿ ಉಪ ಕಾರ್ಯದರ್ಶಿ ಡಾ.ಜಗನ್ನಾಥ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅ.28ರ ರೇಸ್‌ಗಳು

ಮೈಸೂರ್ ರೇಸ್ ಕ್ಲಬ್ ಆನಿವರ್ಸರಿ ಕಪ್ (ಬುಕ್‌ಮೇಕರ್ಸ್ ಪ್ರಾಯೋಜಕತ್ವ), ದಿ ಹೆಚ್.ಪಿ. ವಿಶ್ವನಾಥನ್ ಮೆಮೋರಿಯಲ್ ಟ್ರೋಫಿ, ಬೊಟೊಲೊಂಡಾ ಟ್ರೋಫಿ, ದಿ ಆರ್.ಎಂ.ಪುಟ್ಟಣ್ಣ ಮೆಮೊರಿಯಲ್ ಟ್ರೋಫಿ, ದಿ ಶರಣ್ ಲಕ್ಷ್ಮಣನ್ ಮೆಮೋರಿಯಲ್ ಟ್ರೋಫಿ, ದಿ ಶ್ರೀ ಸಿ.ಸಶಾಚಲಂ ಮೆಮೋರಿಯಲ್ ಟ್ರೋಫಿ.

ಅ.29ರ ರೇಸ್‌ಗಳು

ದಿ 1ಎಕ್ಸ್‌ಬೆಟ್ ಮೈಸೂರು ಡರ್ಬಿ 2023 (ಗ್ರೇಡ್ 1), ದಿ ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ, ದಿ ಹೈದರಾಬಾದ್ ರೇಸ್ ಕ್ಲಬ್ ಟ್ರೋಫಿ, ದಿ ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಲಿಮಿಟೆಡ್ ಟ್ರೋಫಿ, ದಿ ಮದ್ರಾಸ್ ರೇಸ್ ಕ್ಲಬ್ ಟ್ರೋಫಿ, ದಿ ರಾಯಲ್ ಕಲ್ಕತ್ತಾ ಟರ್ಫ್ ಕ್ಲಬ್ ಟ್ರೋಫಿ ಮತ್ತು ದಿ ಡೆಲ್ಲಿ ರೇಸ್ ಕ್ಲಬ್ ಟ್ರೋಫಿ.

ರಾಜಭವನದ ಹೊರಗಡೆ ಪೆಟ್ರೋಲ್ ಬಾಂಬ್ ಎಸೆತ: ವ್ಯಕ್ತಿ ಬಂಧನ



ಚೆನ್ನೈ: ಚೆನ್ನೈನ ರಾಜಭವನದ ಮುಖ್ಯ ಗೇಟ್ ಎದುರು ಬುಧವಾರ ಮೊಲೊಟೊವ್ ಕಾಕ್ಟೈಲ್ ಎಸೆಯಲಾಗಿದೆ. ಈ ಕೃತ್ಯವೆಸಗಿದ ವ್ಯಕ್ತಿಯನ್ನು ಕೂಡಲೇ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯ ವಿಚಾರಣೆ ಮುಂದುವರೆದಿದ್ದು, ಯಾವ ಉದ್ದೇಶದಿಂದ ಪೆಟ್ರೋಲ್ ಬಾಂಬ್ ಎಸೆಯಲಾಯಿತು ಎಂಬುದರ ಕುರಿತು ಪ್ರಶ್ನಿಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊಲೊಟೊವ್ ಕಾಕ್ಟೈಲ್ ಬೆಂಕಿಯಿಡುವ ಸಾಧನವಾಗಿದ್ದು, ಸಾಮಾನ್ಯವಾಗಿ ಪೆಟ್ರೋಲ್ ತುಂಬಿರುತ್ತದೆ ಮತ್ತು ಬಟ್ಟೆಯ ತುಂಡನ್ನು ಬತ್ತಿಯಾಗಿ ಬಳಸಲಾಗುತ್ತದೆ. ಈ ಘಟನೆ ತಮಿಳುನಾಡಿನ ನಿಜವಾದ ಕಾನೂನು ಸುವ್ಯವಸ್ಥೆ ಬಿಂಬಿಸುತ್ತದೆ ಎಂದು ರಾಜ್ಯ ಘಟಕದ ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಆರೋಪಿಸಿದ್ದಾರೆ.

ಶಾಹಿನ್ ತಾಜ್‌ಗೆ ಪಿಹೆಚ್.ಡಿ



ಮೈಸೂರು, ಅ. 25-ಡಾ. ಎಂ. ಭಾಗ್ಯ ಅವರ ಮಾರ್ಗದರ್ಶನದಲ್ಲಿ ಆರ್.ಎ. ಶಾಹಿನ್ ತಾಜ್ ಅವರು ಪ್ರಾಣಿಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕುಮಾರಸ್ವಾಮಿ ರಾಜಕೀಯದ ವಿಲನ್...!

ಹೆಚ್‌ಡಿಕೆಗೆ ತಿರುಗೇಟು ಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು,ಅ.25(ಬಿಎಲ್‌ಯು)-ರಾಜಕೀಯದಲ್ಲಿ ವಿಲನ್ ಇದ್ದರೆ ಅದು ಮಿಸ್ಟರ್ ಕುಮಾರಸ್ವಾಮಿ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟಕಿಯಾಡಿದ್ದಾರೆ.

ಮಹಾಭಾರತದ ಹಲವು ವಿಲನ್ ಪಾತ್ರಗಳಿಗೆ ತಮ್ಮನ್ನು ಹೋಲಿಸಿರುವ ಕುಮಾರಸ್ವಾಮಿ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಅಬ್ಬಬ್ಬಾ... ಎಂದು ಕೆಲ ಕ್ಷಣ ನಕ್ಕರು. ರಾಜಕೀಯದಲ್ಲಿ ವಿಲನ್ ಇದ್ದರೆ ಅದು ಮಿಸ್ಟರ್ ಕುಮಾರಸ್ವಾಮಿ ಎಂದರು.

ಸರ್ಕಾರ ನಾಳೆಗೆ ಬಿದ್ದು ಹೋಗುತ್ತದೆ ಎಂದು ತಿಳಿದಿದ್ದರೂ ಕುಮಾರಸ್ವಾಮಿ ಅಮೇರಿಕಾದಲ್ಲಿ ಕುಳಿತಿದ್ದರು. ಮುಖ್ಯಮಂತ್ರಿ ಆಗಿದ್ದಾಗ ಇಡೀ ಒಂದು ವರ್ಷ ಎರಡು ತಿಂಗಳು ಶಾಸಕರು ಹಾಗೂ ಮಂತ್ರಿಗಳ ಕೈಗೆ ಸಿಗದೆ ತಾಜ್ ವೆಸ್ಟ್‌ಎಂಡ್‌ನಲ್ಲಿ ಕುಳಿತು ಕಾಲ ಕಳೆದರು ಎಂದು ಟೀಕಿಸಿದರು.

ಈ ಸರ್ಕಾರ ಬೀಳಿಸಲು ಬಿಜೆಪಿ ಕಾರಣ ಎಂದು ಅವಿಶ್ವಾಸ ಗೊತ್ತುವಳಿಯ ಮತ ಯಾಚನೆಯ ಭಾಷಣದ ವೇಳೆ ಕುಮಾರಸ್ವಾಮಿ ಆರೋಪ ಮಾಡಿದ್ದರು. ಇದು ವಿಧಾನಸೌಧದ ಅಧಿವೇಶನದಲ್ಲಿ ರೆಕಾರ್ಡ್ ಆಗಿದೆ. ಬೇಕಿದ್ದರೆ ಬಿಡುಗಡೆ ಮಾಡುತ್ತೇನೆ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

ಬಿಜೆಪಿಯವರು ಹಾಗೂ ಕುಮಾರಸ್ವಾಮಿ ಈಗ ಹತಾಶರಾಗಿ ಮಾತನಾಡುತ್ತಾರೆ. ಆದರೆ ಕುಮಾರಸ್ವಾಮಿ ಬಿಜೆಪಿಯವರಿಗಿಂತ ಹೆಚ್ಚು ಹತಾಶರಾಗಿದ್ದಾರೆ ಎಂದು ಗೇಲಿ ಮಾಡಿದರು.

ಬಿಜೆಪಿ ಮತ್ತು ಜೆಡಿಎಸ್‌ನವರದು ಒಂದು ರೀತಿ ಎಳವರು ಹಾಗೂ ಕುರುಡರ ಕಥೆಯಾಗಿದೆ. ಇವರ ಮೇಲೆ ಅವರ ಅವಲಂಬನೆ, ಅವರ ಮೇಲೆ ಇವರ ಅವಲಂಬನೆಯಾಗಿದೆ. ಒಂದೇ ಒಂದು ಸೀಟ್ ಗೆಲ್ಲಲು ಆಗಲ್ಲ ಎಂದು ಈಗ ಬಿಜೆಪಿಯವರ ಜೊತೆ ಜೆಡಿಎಸ್‌ನವರು ಸಖ್ಯ ಬೆಳೆಸಿದ್ದಾರೆ ಎಂದರು.

ಬಾಯಿಗೆ ಬಂದಂತೆ ಬಿಜೆಪಿ ಹಾಗೂ ಜೆಡಿಎಸ್‌ನವರು ಮಾತನಾಡುತ್ತಾರೆ. ಇವರದು ಖಾಲಿ ಡಬ್ಬ. ಯಾವಾಗಲೂ ಖಾಲಿ ಡಬ್ಬ ಜಾಸ್ತಿ ಶಬ್ದ ಮಾಡುತ್ತದೆ. ಆದರೆ ನಾವು ತುಂಬಿದ ಕೊಡ ಇದ್ದಂತೆ. ತುಂಬಿದ ಕೊಡ ಯಾವತ್ತೂ ತುಳುಕುವುದಿಲ್ಲ ಎಂದರು.

ಅಂಬಾರಿ ಬಸ್‌ನಲ್ಲಿ ದೀಪಾಲಂಕಾರ ಸವಿದ ಗಜಪಡೆ ಪರಿವಾರ



ಮೈಸೂರು, ಅ.25(ಎಂಕೆ)- ನಾಡಹಬ್ಬ ಮೈಸೂರು ದಸರಾ ಯಶಸ್ಸಿನ ಪಾಲುದಾರರಾದ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಸ್ಥರಿಗೆ ಕೆಎಸ್‌ಟಿಡಿಸಿ ಅಂಬಾರಿ ಬಸ್‌ನಲ್ಲಿ ದಸರಾ ದೀಪಾಲಂಕಾರ ವೀಕ್ಷಣೆಗೆ ಬುಧವಾರ ಅವಕಾಶ ಮಾಡಿಕೊಡಲಾಯಿತು.

ಅರಮನೆ ಉತ್ತರದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಅಂಬಾರಿ ಬಸ್ ಹತ್ತಿದ್ದ ಸುಮಾರು 40ಕ್ಕೂ ಹೆಚ್ಚು ಮಂದಿ, ಜಗಮಗಿಸುವ ದೀಪಾಲಂಕಾರ ಸವಿದು, ಸಂಭ್ರಮಿಸಿದರು. ಮಾರ್ಗ ಮಧ್ಯದ್ದಕ್ಕೂ ಜೈ ಚಾಮುಂಡೇಶ್ವರಿಗೆ ಜೈಕಾರ ಕೂಗುತ್ತಾ, ತಮ್ಮ ಮೊಬೈಲ್‌ಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡು ಹರ್ಷ ವ್ಯಕ್ತಪಡಿಸಿದರು.

ಆಹಾ... ಎಷ್ಟೊಂದು ಚೆನ್ನಾಗಿದೆ...!

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ ಮಾರ್ಗವಾಗಿ ಸಾಗಿ ಆಯುರ್ವೇದಿಕ್ ಸರ್ಕಲ್, ಹೈವೇ ವೃತ್ತ, ಎಲ್‌ಐಸಿ ವೃತ್ತದಿಂದ ವಾಪಸ್ ಸಯ್ಯಾಜಿ ರಾವ್ ರಸ್ತೆ ಮೂಲಕ ರೈಲ್ವೆ ನಿಲ್ದಾಣ ವೃತ್ತ, ದಾಸಪ್ಪ ಸರ್ಕಲ್, ಮೆಟ್ರೋಪೋಲ್ ಸರ್ಕಲ್, ಏಕಲವ್ಯ ವೃತ್ತ, ರಾಮಸ್ವಾಮಿ ವೃತ್ತದಿಂದ ಚಾಮರಾಜ ಡಬಲ್ ರೋಡ್ ಮಾರ್ಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠ ವೃತ್ತದಿಂದ ಹಾರ್ಡಿಂಜ್ ಸರ್ಕಲ್ ಮಾರ್ಗವಾಗಿ ಮತ್ತೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ತಲುಪಿದರು. ಅರಮನೆ ಆವರಣದಲ್ಲಿಯೇ ಕಳೆದೊಂದು ತಿಂಗಳಿಂದ ವಾಸ್ತವ್ಯ ಹೂಡಿರುವ ಮಾವುತರು, ಕಾವಾಡಿಗಳು ಹಾಗೂ ಕುಟುಂಬಸ್ಥರು ದಸರಾ ದೀಪಾಲಂಕಾರ ಕಂಡು ಪುಳಕಿತರಾದರು. ಇದೊಂದು ವಿಶೇಷ ಅನುಭವ. ದಸರಾ ದೀಪಾಲಂಕಾರ ವೀಕ್ಷಣೆಗೆ ಅವಕಾಶ ನೀಡಿರುವುದಕ್ಕೆ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆಗೆ ಧನ್ಯವಾದ ತಿಳಿಸುತ್ತೇವೆ ಎಂದು ಹೇಳಿದರು.

ಸದ್ಯದಲ್ಲೇ ವಿಪಕ್ಷ ನಾಯಕ, ಪಕ್ಷದ ಅಧ್ಯಕ್ಷ ಸ್ಥಾನದ ಗೊಂದಲ ನಿವಾರಣೆ: ವಿಜಯೇಂದ್ರ

ನನ್ನ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನೇಮಿಸಿದರೆ ಅದೂ ಬಿಎಸ್‌ವೈ ಮಗ ಎಂಬ ಕಾರಣಕ್ಕೆ ಅಲ್ಲ; ಪಕ್ಷದ ಸಂಘಟನೆ ದೃಷ್ಟಿಯಿಂದ ಅಷ್ಟೆ



ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಬುಧವಾರ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಮೈಸೂರು, ಅ.25 (ಎಸ್‌ಪಿಎನ್)- ನಾನು ಸುತ್ತೂರು ಮಠಕ್ಕೆ ಭೇಟಿ ನೀಡಿರುವುದಕ್ಕೂ, ರಾಜ್ಯ ಘಟಕದ ಅಧ್ಯಕ್ಷರ ಘೋಷಣೆಗೂ ಯಾವುದೇ ಸಂಬಂಧವಿಲ್ಲ. ಇದೊಂದು ಸೌಹಾರ್ದಯುತ ಭೇಟಿ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪಷ್ಟಪಡಿಸಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮಿಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ವಿಪಕ್ಷನಾಯಕ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ಹುದ್ದೆ ಆಯ್ಕೆಯಲ್ಲಿ ಸ್ವಲ್ಪ ತಡವಾಗಿರುವುದು ನಿಜ. ಆದರೆ, ಇನ್ನು ಕೆಲವೇ ದಿನಗಳಲ್ಲಿ ಎಲ್ಲಾ ಗೊಂದಲಗಳಿಗೂ ತೆರೆ ಬೀಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಹಾಗೂ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸುವುದಕ್ಕೆ ಬಿ.ಎಸ್. ಯಡಿಯೂರಪ್ಪ ಅವರ ವಿರೋಧವಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇವೆಲ್ಲವೂ ಬರೀ ಊಹಾಪೋಹ. ಇಂತಹ ಯಾವ ಬೆಳವಣಿಗೆಯಲ್ಲೂ ಅವರು (ಬಿಎಸ್‌ವೈ) ಭಾಗವಹಿಸಿಲ್ಲ. ಯಾರನ್ನೇ ನೇಮಿಸಿದರೂ ಅದನ್ನು ಬಿಎಸ್‌ವೈ ಸೇರಿದಂತೆ ಇತರರು ಒಪ್ಪಿಕೊಂಡೇ ಪಕ್ಷ ಸಂಘಟನೆಗಾಗಿ ಕೆಲಸ ಮಾಡುತ್ತಾರೆ ಎಂದರು.

ಬಿ.ಎಸ್.ಯಡಿಯೂರಪ್ಪ ಅವರು, ನನ್ನನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಲು ಲಾಬಿ ನಡೆಸುತ್ತಿದ್ದಾರೆ ಎನ್ನುವುದೆಲ್ಲವೂ ಸುಳ್ಳು. ಒಂದು ವೇಳೆ ನನ್ನನ್ನು ಅಧ್ಯಕ್ಷನನ್ನಾಗಿ ನೇಮಿಸಿದರೆ, ಅದು ಯಡಿಯೂರಪ್ಪನವರ ಮಗ ಎಂಬ ಕಾರಣಕ್ಕಲ್ಲ. ಎಲ್ಲವನ್ನೂ ನಮ್ಮ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ. ಪಕ್ಷ ಸಂಘಟನೆಗೆ ಯಾರನ್ನು ನೇಮಿಸಬೇಕು. ಯಾರಿಗೆ ಅಧ್ಯಕ್ಷ ಸ್ಥಾನ ನೀಡಿದರೆ ಒಳ್ಳೆಯದು ಎಂಬುದರ ಕುರಿತು ಪರಿಶೀಲಿಸಿ, ಜವಾಬ್ದಾರಿ ನೀಡುತ್ತಾರೆ. ನಮ್ಮ ಪಕ್ಷ ಕಾರ್ಯಕರ್ತರ ಪಕ್ಷ ಎಂದರು.

ಬಿಜೆಪಿಗೆ ಸೋಲು ಹೊಸದೇನಲ್ಲ. ನಾವು ಹತಾಶರಾಗಿಲ್ಲ. ಅದಕ್ಕಾಗಿ ಬಿಜೆಪಿ ಮುಖಂಡರು, ಸರ್ಕಾರದ ಅಕ್ರಮಗಳ ಬಗ್ಗೆ ಮಾತನಾಡುತ್ತಿದ್ದಾರೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿದ ಅವರು, ನಾವು ಸರ್ಕಾರದ ಅಕ್ರಮಗಳ ಬಗ್ಗೆ ಮಾತನಾಡುತ್ತಿದ್ದೇವೆ. ಇದನ್ನೇ ಹತಾಶೆ ಎಂದರೆ ಹೇಗೆ?., ಪಂಚರಾಜ್ಯಗಳ ಚುನಾವಣೆಗಾಗಿ ರಾಜ್ಯ ಸರ್ಕಾರ ಗುತ್ತಿಗೆದಾರರು, ಬಿಲ್ಡರ್‌ಗಳಿಂದ ಹಣ ವಸೂಲಿ ಮಾಡುತ್ತಿದೆ. ಐಟಿ ರೈಡ್ ಸಂದರ್ಭದಲ್ಲಿ ಗುತ್ತಿಗೆದಾರನ ಮನೆಯಲ್ಲಿ ಸಿಕ್ಕ ಹಣ ಯಾರದ್ದು ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್ ಪ್ರಸ್ತುತ ಇಡೀ ರಾಜ್ಯದ ಜನರ ಮುಂದೆ ಬೆತ್ತಲಾಗಿದೆ. ಪಂಚ ಗ್ಯಾರಂಟಿಗಳಿಗೆ ಕೊಡಲು ಸರ್ಕಾರದ ಬಳಿ ಹಣವಿಲ್ಲ. ಅದಕ್ಕಾಗಿ ಬಿಜೆಪಿ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಬರ ಪರಿಹಾರವನ್ನು ಸರ್ಕಾರ ತಕ್ಷಣವೇ ಕೊಡಬೇಕು. ಕೇಂದ್ರದ ಹಣ ಬರುತ್ತದೆ. ಮೊದಲು ರಾಜ್ಯ ಸರ್ಕಾರದ ಹಣವನ್ನು ಬಿಡುಗಡೆಗೊಳಿಸಲಿ. ಅದನ್ನು ಬಿಟ್ಟು ಕೇಂದ್ರದತ್ತ ಬೆರಳು ತೋರಿಸುವ ಕೆಲಸ ಮಾಡಬಾರದು ಎಂದ ಅವರು, ರಾಮನಗರ ಜಿಲ್ಲೆ ಕುರಿತು ಡಿಕೆಶಿ ಹೇಳಿಗೆ ಕುರಿತಾದ ಚರ್ಚೆಗೆ ಪ್ರಕ್ರಿಯಿಸಿದ ಅವರು, ಡಿಕೆಶಿ ಅವರ ರಿಯಲ್ ಎಸ್ಟೇಟ್ ಉದ್ಯಮ ವಿಸ್ತರಣೆಯಾಗಬೇಕು. ಅದಕ್ಕಾಗಿ ರಾಮನಗರ ಜಿಲ್ಲೆ ಬದಲಾವಣೆ ಕುರಿತು ಮಾತನಾಡುತ್ತಿರಬಹುದು ಎಂದರು.

ಪಂಚ ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಹಣವೇ ಬಂದಿಲ್ಲ. ರಾಜ್ಯದ ಬೊಕ್ಕಸ ಖಾಲಿಯಾಗುತ್ತಿದೆ. ಇದನ್ನು ಮುಚ್ಚಿಕೊಳ್ಳಲು ಬಿಜೆಪಿ ಮೇಲೆ ಗೂಬೆ ಕೂರಿಸುವ ಕೆಲಸದಲ್ಲಿ ಮುಖ್ಯಮಂತ್ರಿ ತೊಡಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಈ ವೇಳೆ ಶಾಸಕ ಶ್ರೀವತ್ಸ, ಮಾಜಿ ಸಚಿವ ಎಂ.ಶಿವಣ್ಣ, ಬಿಜೆಪಿ ಗ್ರಾಮಾಂತರ ಅಧ್ಯಕ್ಷೆ ಮಂಗಳ ಸೋಮಶೇಖರ್, ಬಿಜೆಪಿ ಮುಖಂಡರಾದ ಪಿ.ರಾಜೇಂದ್ರ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಕೇಬಲ್ ಮಹೇಶ್ ಉಪಸ್ಥಿತಿದ್ದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : (ರೋಗಿಯನ್ನು ಪರೀಕ್ಷೆ ಮಾಡಿ) "ನಿಮ್ಮ ನಾಡಿ ಬಡಿತ ಗಡಿಯಾರದ ಮುಳ್ಳಿನಷ್ಟೇ ನಿಖರವಾಗಿದೆಯಲ್ಲಾ..?"

ರೋಗಿ : "ಡಾಕ್ಟರ್, ನೀವು ನನ್ನ ಕೈ ಗಡಿಯಾರವನ್ನು ಹಿಡಿದುಕೊಂಡಿದ್ದೀರಾ!"

ಮೈಸೂರು ಮಿತ್ರ

ಗುರುವಾರ, 26 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಲಹೆಗಳನ್ನು ಪಡೆಯುವವರು ಬಹಳ ಮಂದಿ.
ಅದರ ಲಾಭ ಪಡೆಯುವವರು ಕೆಲವೇ ಮಂದಿ – ಸೈರಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೇ ಇರನು

ನಿಮ್ಮ ಪತ್ರಗಳು

ನುಡಿದಂತೆ ನಡೆದ ನಗರ ಪಾಲಿಕೆ ಆಯುಕ್ತರಿಗೆ ಧನ್ಯವಾದಗಳು



ಮಾನ್ಯರೇ,

ಮಾರಾಟವಾಗದೆ ರಸ್ತೆ ಬದಿಯಲ್ಲಿ ಬಿಟ್ಟು ಹೋದ ಬೂದುಕುಂಬಳ ಮತ್ತು ಬಾಳೆ ಕಂದುಗಳನ್ನು ಅಶಕ್ತ ಪಶುಗಳ ಆಶ್ರಯದಾಣವಾದ ಪಿಂಜರಾಪೋಲಿಗೆ ಸಾಗಿಸಲು ಆದೇಶ ನೀಡುವಂತೆ ಆಯುಕ್ತರಲ್ಲಿ ಮನವಿ ಮಾಡಲಾಗಿತ್ತು. ಮನವಿಗೆ ಸ್ಪಂದಿಸಿ ಆದೇಶ ಹೊರಡಿಸಿ, ಸಾಗಿಸಿಕೊಡುವುದಾಗಿ ಭರವಸೆ ನೀಡಿದ್ದರು. ಸರ್ಕಾರಿ ಅಧಿಕಾರಿಗಳು ದಸರಾ ಕೆಲಸದ ಒತ್ತಡದಲ್ಲಿ ನಮ್ಮ ಕೆಲಸ ಮಾಡುವ ಬಗ್ಗೆ ಅನುಮಾನವಿತ್ತು. ಆದ ಕಾರಣ ಎಂದಿನಂತೆ ನಮ್ಮ ತಂಡ ನಗರದ ಕೆಲವು ಭಾಗಗಳಲ್ಲಿ ಸಂಚರಿಸಿ 5 ಲೋಡ್ ಕುಂಬಳ ಕಾಯಿ ಸಂಗ್ರಹಿಸಿದೆವು. ಆದರೆ ಟ್ರಾಫಿಕ್ ಒತ್ತಡದಿಂದ ನಗರದ ಮುಖ್ಯ ಭಾಗಗಳಿಗೆ ಚಲಿಸಲು ಸಾಧ್ಯವಾಗದೆ, ವಾಹನ ದಟ್ಟಣೆ ಕಡಿಮೆಯಾಗಲು ಕಾಯುತ್ತಿದ್ದೆವು. ಆಗ ನಮಗೆ ಮಾನ್ಯ ಆಯುಕ್ತರು ಭರವಸೆ ನೀಡಿದ್ದಂತೆ ಕುಂಬಳ ಕಾಯಿ ಮತ್ತು ಬಾಳೆ ಕಂದುಗಳನ್ನು ತುಂಬಿಸುತ್ತಿರುವ ಬಗ್ಗೆ ಮಾಹಿತಿ ನೀಡಿದರು. ಹಾಗೆಯೇ ಪಿಂಜರಾಪೋಲ್‌ಗೆ ತಲುಪಿಸಿದ ಬಗ್ಗೆಯೂ ಮಾಹಿತಿ ನೀಡಿದರು. ತಮ್ಮ ಕಾರ್ಯವನ್ನು ಮಾರನೆಯ ದಿನ ವಿಜಯದಶಮಿಯ ದಿನವೂ ಮುಂದುವರೆಸಿದರು. ಇವರ ಈ ಮಾದರಿ ನಡೆಯಿಂದ ಅಶಕ್ತ ಪಶುಗಳ ಎರಡು ದಿನದ ಆಹಾರಕ್ಕೆ ದಾರಿಯಾಯಿತು. ಇಂತಹ ಸಾಮಾಜಿಕ ಕಾಳಜಿಯುಳ್ಳ ಆಯುಕ್ತರನ್ನು ಪಡೆದ ಮೈಸೂರಿಗರು ನಿಜಕ್ಕೂ ಧನ್ಯರು. ನುಡಿದಂತೆ ನಡೆದ, ಹೊಸ ಪದ್ಧತಿಗೆ ನಾಂದಿ ಹಾಡಿದ ಆಯುಕ್ತರಾದ ರೆಹಮಾನ್ ಷರೀಫರಿಗೆ, ಇದಕ್ಕೆ ಸಹಕರಿಸಿದ ಆರೋಗ್ಯಾಧಿಕಾರಿಗಳಾದ ಡಾ.ವೆಂಕಟೇಶ್ ಅವರಿಗೆ ಮತ್ತು ಪಾಲಿಕೆಯ ಪೌರಕಾರ್ಮಿಕರಿಗೆ ಅನಂತ ಧನ್ಯವಾದಗಳು. ಈ ಹೊಸ ಪದ್ಧತಿಯು ದೀಪಾವಳಿ, ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಬಿಟ್ಟು ಹೋಗುವ ಬಾಳೆ ಕಂದುಗಳ ಸಂದರ್ಭದಲ್ಲಿಯೂ ಪಾಲನೆಯಾದಲ್ಲಿ ಉತ್ತಮ.

–ಎಸ್.ರವಿ, ವಕೀಲ, ಮೈಸೂರು.

ಸರ್ಕಾರ ಬರ ಪರಿಹಾರ ಶೀಘ್ರ ವಿತರಿಸಲಿ

ಮಾನ್ಯರೆ,

ರಾಜ್ಯದಲ್ಲಿ ಈ ವರ್ಷ ವಾಡಿಕೆಯಷ್ಟು ಮಳೆಯಾಗದ ಹಿನ್ನೆಲೆಯಲ್ಲಿ ಸರ್ಕಾರ 216 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ರಾಜ್ಯ ಸರ್ಕಾರ ಬರ ಪರಿಹಾರವನ್ನು ಶೀಘ್ರ ವಿತರಿಸಿ ರೈತರ ನೆರವಿಗೆ ನಿಲ್ಲಬೇಕು. ಈ ಸಮಯದಲ್ಲಿ ಕೇಂದ್ರ ಸರ್ಕಾರದಿಂದ ಬರ ಪರಿಹಾರ ಮೊತ್ತ ತೆಗೆದುಕೊಂಡು ಬರಲು ರಾಜ್ಯದ ಸಂಸದರಿಗೆ ರಾಜಕೀಯ ಇಚ್ಛಾಶಕ್ತಿಯೂ ಬೇಕಿದೆ. ಜನಪ್ರತಿನಿಧಿಗಳು ಪಕ್ಷಬೇಧ ಮರೆತು ಈ ಕೆಲಸವನ್ನು ಮಾಡಬೇಕು. ನೆರೆ–ಬರ ಎರಡೂ ಪ್ರಾಕೃತಿಕ ಕ್ರಿಯೆಗಳಾಗಿದ್ದು, ಬರ ಎದುರಿಸುವ ಸಂದರ್ಭ ಬಂದರೆ ಪರ್ಯಾಯ ಬೆಳೆಗಳನ್ನು ಬೆಳೆಯಲು ಸಾಕಷ್ಟು ಮುಂಚಿತವಾಗಿ ರೈತರಿಗೆ ಸಂಬಂಧಪಟ್ಟ ಇಲಾಖೆ ರೈತರಲ್ಲಿ ಜಾಗೃತಿ ಮೂಡಿಸಬೇಕು ಮತ್ತು ಮಾಹಿತಿಯನ್ನೂ ನೀಡಬೇಕು. ಹವಾಮಾನ ಬದಲಾವಣೆಯಿಂದಾಗಿ ಹಿಂದೆಂದಿಗಿಂತಲೂ ಕೃಷಿ ವಲಯ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ನಾಗರಿಕ ಸಮಾಜವೂ ಒಳಗೊಂಡಂತೆ ದೀರ್ಘಕಾಲದ ಪರಿಹಾರ ಮಾರ್ಗವನ್ನು ಕಂಡುಕೊಳ್ಳಬೇಕು. ಇದರಿಂದ ರೈತರ ಅಭ್ಯುದಯಕ್ಕೆ ನಾವೆಲ್ಲರೂ ಕಾರಣರಾಗಬೇಕು. –ಪ್ರಸಾದ್ ಜಿ.ಎಂ, ಮೈಸೂರು

ಹಿರಿಯ ನಾಗರಿಕರು, ದಿವ್ಯಾಂಗರಿಗೆ ಸರ್ಕಾರಗಳೇ ಸಾರಿಗೆ ವ್ಯವಸ್ಥೆ ಸ್ವಾಗತಾರ್ಹ

ಮಾನ್ಯರೆ,

ಮುಂದಿನ ತಿಂಗಳು ಮಧ್ಯ ಪ್ರದೇಶ, ಮಿಜೋರಾಂ, ಛತ್ತೀಸ್‌ಗಡ್, ರಾಜಾಸ್ಥಾನ ಮತ್ತು ತೆಲಂಗಾಣ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ 70 ವರ್ಷ ದಾಟಿದ ಹಿರಿಯ ನಾಗರಿಕರಿಗೆ ಮತ್ತು ದಿವ್ಯಾಂಗರು ಮತ ಚಲಾಯಿಸಲು ಅನುಕೂಲವಾಗುವಂತೆ ರಾಜ್ಯ ಸರ್ಕಾರಗಳೇ ಸಾರಿಗೆ ವ್ಯವಸ್ಥೆ ಮಾಡಿಕೊಡುವಂತೆ ಚುನಾವಣಾ ಆಯೋಗ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿರುವುದು ಸ್ವಾಗತಾರ್ಹ.

ಇಷ್ಟು ವರ್ಷಗಳ ಕಾಲ ಚುನಾವಣೆಗಳಲ್ಲಿ ಯಾವುದಾರೊಂದು ರಾಜಕೀಯ ಪಕ್ಷದ ಕಾರ್ಯಕರ್ತರು ಹಿರಿಯ ನಾಗರಿಕರನ್ನು ಮತ್ತು ದಿವ್ಯಾಂಗರನ್ನು ಕೆಲವು ರಾಜಕೀಯ ಪಕ್ಷಗಳು ಆಮಿಷ ತೋರಿಸಿ ತಮ್ಮ ಪರವಾಗಿ ಮತ ಚಲಾಯಿಸಲು ಹೇಳುತ್ತಿದ್ದರು. ಈಗ ಚುನಾವಣಾ ಆಯೋಗವೇ ಸಾರಿಗೆ ವ್ಯವಸ್ಥೆ ಮಾಡಿಕೊಡಲು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿರುವುದು ಚುನಾವಣೆ ಮತ್ತಷ್ಟು ಪಾರದರ್ಶಕತೆಯಿಂದ ನಡೆಯಲು ಸಹಾಯವಾಗುತ್ತದೆ. ಇಂತಹ ದಿಟ್ಟ ನಿರ್ಧಾರ ಕೈಗೊಂಡ ಚುನಾವಣಾ ಆಯೋಗಕ್ಕೂ ಅಭಿನಂದನೆಗಳು.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಪೂಜೆ!

ಮಾನ್ಯರೆ,

ಮಹಿಷ (ದಸರಾ) ವಿಷಯ ಏನಾದರಿರಲಿ, ದೇವತೆಗಳಂತೆ (ನರ) ರಾಕ್ಷಸರನ್ನೂ ಪೂಜಿಸುವ ಕಾಲ ಬಂತಲ್ಲ ಎಂದು ಸೋಜಿಗ ಪಡಬೇಕಾಗಿದೆ!

ಎಲ್ಲೋ ಒಂದು ಕಡೆ, ದೇಶಭಕ್ತರ ಚಿತ್ರಗಳೊಡನೆ ನಾತೂರಾಂ ಗೋಡ್ಸೆಯ ಚಿತ್ರವನ್ನೂ ಮೆರವಣಿಗೆಯಲ್ಲಿ ಒಯ್ಯಲಾಯಿತಂತೆ. ಸದ್ಯ ಗಾಂಧೀಜಿಯ ಭಾವಚಿತ್ರದ ಜೊತೆ ಗೋಡ್ಸೆಯ ಚಿತ್ರ ಎಲ್ಲೆಡೆ ಮೆರೆಯುವಂತಾಗದಿರಲಿ!

(ಹೇ, ರಾಂ!)

ಮಹಾಕಾವ್ಯ: ಪತ್ರಿಕೆಗಳೇ ಇಂದಿನ 'ಮಹಾಕಾವ್ಯ'ಗಳು. ನಾನೀಗ ಮತ್ತೇನನ್ನೂ ಓದುತ್ತಿಲ್ಲ, ಪತ್ರಿಕೆಗಳ ವಿನಾ!

ದೊಣ್ಣೆ: ಈಗಿನ ರಾಷ್ಟ್ರೀಯ ಮಾತ್ರವಲ್ಲ, ಜಾಗತಿಕ ವಿದ್ಯಮಾನಗಳನ್ನೂ ಗಮನಿಸಿದರೆ, "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎಂಬ ಗಾದೆ ನೆನಪಾಗುತ್ತದೆ. ಖಾದ್ರಿ ಶಾಮಣ್ಣ ಹಿಂದೆ ಸಭೆಯೊಂದರಲ್ಲಿ ಹೇಳಿದರು: "ದೊಣ್ಣೆಯೇ ದೊಡ್ಡಪ್ಪ!" ದೊಡ್ಡಪ್ಪ, ಚಿಕ್ಕಪ್ಪ, ಅಪ್ಪ ಎಲ್ಲವೂ! (ಬಂದೂಕೆ ಭಗವಂತ?)

– ಸಿಪಿಕೆ, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಹೆಣ್ಣಿನ ದುಡಿಮೆಗೆ ಇನ್ನೂ ದೊರೆಯದ ಮನ್ನಣೆ; ವಿಶ್ಲೇಷಣೆಗೆ ಸಂದ ಅರ್ಥಶಾಸ್ತ್ರದ ನೊಬೆಲ್

ಈ ಬಾರಿ ಅರ್ಥಶಾಸ್ತ್ರಕ್ಷೇತ್ರದಲ್ಲಿ ನೀಡಿರುವ ನೊಬೆಲ್ ಪಾರಿತೋಷಕಕ್ಕೆ ಎರಡು ವೈಶಿಷ್ಟ್ಯಗಳು ಇವೆ. ಮೊದಲನೆಯದು ಇದು ಸಂದಿರುವುದು ಮಹಿಳಾ ಅರ್ಥಶಾಸ್ತ್ರಜ್ಞೆ, ಕ್ಲೌಡಿಯ ಗೋಲ್ಡಿನ್ ಅವರಿಗೆ. ಎರಡನೆಯದು, ಮಹಿಳಾ ಬದುಕನ್ನು ಪ್ರಧಾನವಾಗಿ ಕೇಂದ್ರೀಕರಿಸಿದ ಅರ್ಥಶಾಸ್ತ್ರೀಯ ವಿಶ್ಲೇಷಣೆಗೆ ನೊಬೆಲ್ ದೊರೆತಿರುವುದು.

1901 ರಲ್ಲಿ ಪ್ರಥಮ ಬಾರಿಗೆ ನೊಬೆಲ್ ಪಾರಿತೋಷಕಗಳನ್ನು ನೀಡಲಾಗಿದ್ದು ಅಂದಿನಿಂದ ಇಂದಿನವರೆಗೆ ಅರ್ಥಶಾಸ್ತ್ರ ಕ್ಷೇತ್ರದಲ್ಲಿ 87 ಮಂದಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರಲ್ಲಿ ಮೂವರು ಮಾತ್ರವೇ ಮಹಿಳೆಯರು. ಆದರೆ 2019 ರಲ್ಲಿ ಈ ಪ್ರಶಸ್ತಿಗೆ ಭಾಜನರಾದ ಎಸ್ಥರ್ ಡಫ್ಲೋ ಅವರು ಅದನ್ನು ಅಭಿಜಿತ್ ಬ್ಯಾನರ್ಜಿ ಮತ್ತು ಮಿಚೆಲ್ ಕ್ರೆಮರ್ ಅವರೊಡನೆ ಹಂಚಿಕೊಂಡಿದ್ದರೆ, 2009ರಲ್ಲಿ ಅರ್ಥಶಾಸ್ತ್ರ ನೊಬೆಲ್ ಪಡೆದ ಎಲಿನೋರ್ ಓಸ್ಟ್ರೋಮ್ ಅದನ್ನು ಆಲಿವರ್ ವಿಲಿಯಮ್ಸ್ ಅವರೊಡನೆ ಹಂಚಿಕೊಂಡಿದ್ದರು. ಈ ಅರ್ಥದಲ್ಲಿ ಅರ್ಥಶಾಸ್ತ್ರ ನೊಬೆಲ್ ಪಾರಿತೋಷಕವನ್ನು ಏಕವ್ಯಕ್ತಿ ಆಗಿ ಪಡೆದಿರುವ ಮಹಿಳೆ ಗೋಲ್ಡಿನ್ ಮಾತ್ರ. ಡಿಫ್ಲೋ ಅವರ ಕೆಲಸ ಜಾಗತಿಕ ಬಡತನವನ್ನು ತೊಡೆದುಹಾಕುವತ್ತ ಗಮನ ಹರಿಸಿದ್ದರೆ ಓಸ್ಟ್ರೋಮ್ ಅವರು ಸಾಮುದಾಯಿಕ ಸಂಪನ್ಮೂಲಗಳ ಆರ್ಥಿಕ ನಿರ್ವಹಣೆಯನ್ನು ಕುರಿತು ಸಂಶೋಧನೆಯನ್ನು ಕೈಗೊಂಡಿದ್ದರು.

1901 ರಿಂದ 2023 ರವರೆಗೆ 965 ವ್ಯಕ್ತಿಗಳು ಮತ್ತು 27 ಸಂಸ್ಥೆಗಳಿಗೆ ಅವರು ತಮ್ಮ–ತಮ್ಮ ಕ್ಷೇತ್ರಗಳಲ್ಲಿ ಮಾಡಿದ ಅಸಾಧಾರಣ ಕೆಲಸಕ್ಕೆ ನೊಬೆಲ್ ಪಾರಿತೋಷಕಗಳನ್ನು ನೀಡಲಾಗಿದೆ. ಈ ಕ್ಷೇತ್ರಗಳು ಭೌತಶಾಸ್ತ್ರ, ವೈದ್ಯಕೀಯ ಕ್ಷೇತ್ರ, ರಸಾಯನಶಾಸ್ತ್ರ, ಸಾಹಿತ್ಯ, ಶಾಂತಿ ಸ್ಥಾಪನೆ ಮತ್ತು ಅರ್ಥಶಾಸ್ತ್ರ. ವಿಷಯವಾರು ಪ್ರಶಸ್ತಿ ವಿಜೇತರನ್ನು ಲಿಂಗಾಧಾರಿತವಾಗಿ ವರ್ಗೀಕರಿಸಿದಾಗ ಭೌತಶಾಸ್ತ್ರದಲ್ಲಿ 4, ವೈದ್ಯಕೀಯ ಕ್ಷೇತ್ರದಲ್ಲಿ 12, ರಸಾಯನಶಾಸ್ತ್ರದಲ್ಲಿ7, ಸಾಹಿತ್ಯದಲ್ಲಿ 16, ಶಾಂತಿ ಸ್ಥಾಪನೆ ಗಾಗಿ 17 ಮತ್ತು ಅರ್ಥಶಾಸ್ತ್ರದಲ್ಲಿ 3 ಮಹಿಳೆಯರಿಗೆ ಮಾತ್ರ ನೊಬೆಲ್ ಇದುವರೆಗೂ ದೊರೆತಿರುವುದು.

ಹಾರ್ವರ್ಡ್ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದಲ್ಲಿ 1989 ರಲ್ಲಿ ಖಾಯಂ ಪ್ರಾಧ್ಯಾಪಕ ಹುದ್ದೆಯನ್ನು ಪಡೆದ ಮೊದಲ ಮಹಿಳೆ ಗೋಲ್ಡಿನ್ ಅವರು. ಅವರ ಸಂಶೋಧನೆಗಳು, 1800 ರಿಂದ ದುಡಿಯುವ ವರ್ಗದಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ, ಕಾಣುತ್ತಿರುವ ಏರಿಳಿತಗಳ ಪ್ರಮಾಣ ಮತ್ತು ಪರಿ –ಇವುಗಳನ್ನು ಕುರಿತು ಬೆಳಕು ಚೆಲ್ಲುತ್ತವೆ. ಗೋಲ್ಡಿನ್ ಅವರ ಸಂಶೋಧನೆಗಳ ಪ್ರಕಾರ ಮಹಿಳೆಯರ ಉದ್ಯೋಗ ಭಾಗವಹಿಸುವಿಕೆ ಅರ್ಥ ವ್ಯವಸ್ಥೆಯ ಸ್ವರೂಪವನ್ನು ಅವಲಂಬಿಸಿದ್ದು ಸಮಾಜ ಕೃಷಿ ಕೇಂದ್ರಿತ ಉದ್ಯೋಗಗಳಿಂದ ಕೈಗಾರಿಕಾ ವಲಯದತ್ತ ಚಲಿಸಲಾರಂಭಿಸಿದಾಗ ಮಹಿಳಾ ಭಾಗವಹಿಸುವಿಕೆಯ ಪ್ರಮಾಣ ಇಳಿಮುಖವಾಯಿತು.1970 ರ ದಶಕದಲ್ಲಿ ಅಮೆರಿಕದ ಉದ್ಯೋಗ ಕ್ಷೇತ್ರ ಮಹತ್ತರ ಬದಲಾವಣೆಗಳನ್ನು ಕಂಡಿತು. ಇದಕ್ಕೆ ಮೂಲ ಕಾರಣವೆಂದರೆ ಸೇವಾ ಕ್ಷೇತ್ರ ವಿಸ್ತಾರವಾಗ ತೊಡಗಿದ್ದು. 1970ರ ದಶಕವನ್ನು ಗೋಲ್ಡಿನ್ 'ಕ್ರಾಂತಿಕಾರಿ ಕಾಲ' ಎಂದು ಕರೆದರು. ಈ ಕಾಲಘಟ್ಟದಲ್ಲಿ ಮಹಿಳೆಯರು ಗಮನಾರ್ಹವಾದ ಪ್ರಮಾಣದಲ್ಲಿ ಉನ್ನತ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದ್ದು, ಅವರ ವಿವಾಹದ ವಯಸ್ಸು ಮುಂದೆ ಹೋದ ಕಾರಣ ಅವರು ಉದ್ಯೋಗಗಳನ್ನು ಪಡೆಯಲು ಪೂರಕವಾದ ವಾತಾವರಣ ಸೃಷ್ಟಿಯಾಯಿತು.



ಕ್ಲೌಡಿಯ ಗೋಲ್ಡಿನ್

ಗರ್ಭ ನಿರೋಧಕ ಔಷಧಿಗಳ ಲಭ್ಯತೆ ಹೆಚ್ಚಾದಾಗ ಮಹಿಳೆಯರು ಸಾಂಸಾರಿಕ ಜವಾಬ್ದಾರಿಗಳನ್ನು ಹೊರುವುದನ್ನು ಮುಂದೂಡಬಹುದು. ಶಿಕ್ಷಣ, ವಿವಾಹದ ವಯಸ್ಸಿನಲ್ಲಿ ಏರಿಕೆ ಮತ್ತು ತಾಯ್ತನದ ಮುಂದೂಡಿಕೆ– ಇವು ಮೂರೂ ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವನ್ನು ಹೆಚ್ಚಿಸುತ್ತವೆ ಎಂಬುದು ಗೋಲ್ಡಿನ್ ಅವರ ಸೈದ್ಧಾಂತಿಕ ನಿಲುವು.

1990 ರಲ್ಲಿಯೇ ಪ್ರಕಟವಾದ ಗೋಲ್ಡಿನ್ ಅವರ 'ಅಂಡರ್ ಸ್ಟ್ಯಾಂಡಿಂಗ್ ದ ಜೆಂಡರ್ ಗ್ಯಾಪ್: ಅನ್ ಎಕನಾಮಿಕ್ ಹಿಸ್ಟರಿ ಆಫ್ ಅಮೆರಿಕನ್ ವಿಮೆನ್' ಎಂಬ ಗ್ರಂಥ ಲಿಂಗಾಧಾರಿತ ವೇತನ ವ್ಯತ್ಯಾಸಗಳ ಪ್ರಭಾವಶಾಲಿ ವಿಶ್ಲೇಷಣೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. 2021 ರಲ್ಲಿ ಪ್ರಕಟವಾದ, ಸುಮಾರು ಎರಡು ಶತಮಾನಗಳ ಕಾಲ ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಕಂಡು ಬಂದ ಏರಿಳಿತಗಳ ಚಿತ್ರಣವನ್ನು ದಾಖಲಿಸಿದ ಅವರ ಗ್ರಂಥ 'ಕೆರಿಯರ್ ಅಂಡ್ ಫ್ಯಾಮಿಲಿ:ವಿಮೆನ್'ಸ್ ಸೆಂಚುರಿ– ಲಾಂಗ್ ಜರ್ನಿ ಟುವರ್ಡ್ ಈಕ್ವಿಟಿ' ಅವರಿಗೆ ಸಂದ ನೊಬೆಲ್ ಗೌರವಕ್ಕೆ ಸಾಕ್ಷಿ.

ಮಹಿಳೆಯರು ಮತ್ತು ಪುರುಷರು ಒಂದೇ ಬಗೆಯ ಕೆಲಸಗಳನ್ನು ಮಾಡಿದರೂ ಮಹಿಳೆಯರ ಕೆಲಸ ಅಗೋಚರ ಮತ್ತು ವೇತನ ರಹಿತ. ಬಹಳ ವರ್ಷಗಳ ಹಿಂದೆಯೇ ಮಹಿಳೆಯರು ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಿದ್ದರೂ ಅವರ ದುಡಿಮೆಗೆ ಮಾತ್ರ ಸೂಕ್ತ ಮನ್ನಣೆ ದೊರೆತಿಲ್ಲ. ಗೃಹಾಧಾರಿತ ಕೆಲಸಗಳ ವಲಯದಿಂದ ಉದ್ಯಮಗಳತ್ತ ಅವರು ಬಂದು ತಮ್ಮ ಹಾಗೂ ತಮ್ಮ ಕುಟುಂಬಗಳ ನಿರ್ವಹಣೆಗಾಗಿ ದುಡಿಮೆಯಲ್ಲಿ ತೊಡಗಿದ್ದರೂ ಮಹಿಳೆಯರ ಕೆಲಸಕ್ಕೆ ಮಾತ್ರ ಸರ್ಕಾರಿ ನೀತಿಗಳು ಬಹು ನಿಧಾನವಾಗಿ ಸ್ಪಂದಿಸುತ್ತಿವೆ ಎಂಬುದು ಗೋಲ್ಡಿನ್ ಅವರ ವಾದ. ಅವರ ಅಧ್ಯಯನಗಳ ಮೂಲ ಸಾರವೆಂದರೆ ಮಹಿಳೆಯರು ಕೌಟುಂಬಿಕ ವಲಯದಿಂದ ಹೊರಬಂದು, ತಮ್ಮ ಹಾಗೂ ತಮ್ಮ ಕುಟುಂಬಗಳ ಬದುಕಿನಲ್ಲಿ ಬದಲಾವಣೆಗಳನ್ನು ತಂದಿರುವಂಥ ಕೆಲಸಗಳಲ್ಲಿ ತೊಡಗಿದ್ದರೂ ಆ ಕೆಲಸಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಮಾನ್ಯತೆ ದೊರೆತಿಲ್ಲ ಎನ್ನುವುದು.

> 1901 ರಿಂದ 2023 ರವರೆಗೆ 965 ವ್ಯಕ್ತಿಗಳು ಮತ್ತು 27 ಸಂಸ್ಥೆಗಳಿಗೆ ಅವರು ತಮ್ಮ- ತಮ್ಮ ಕ್ಷೇತ್ರಗಳಲ್ಲಿ ಮಾಡಿದ ಅಸಾಧಾರಣ ಕೆಲಸಕ್ಕೆ ನೊಬೆಲ್ ಪಾರಿತೋಷಕಗಳನ್ನು ನೀಡಲಾಗಿದೆ. ಈ ಕ್ಷೇತ್ರಗಳು ಭೌತಶಾಸ್ತ್ರ, ವೈದ್ಯಕೀಯ ಕ್ಷೇತ್ರ, ರಸಾಯನಶಾಸ್ತ್ರ, ಸಾಹಿತ್ಯ ಶಾಂತಿ ಸ್ಥಾಪನೆ ಮತ್ತು ಅರ್ಥಶಾಸ್ತ್ರ. ವಿಷಯವಾರು ಪ್ರಶಸ್ತಿ ವಿಜೇತರನ್ನು ಲಿಂಗಾಧಾರಿತವಾಗಿ ವರ್ಗೀಕರಿಸಿದಾಗ ಭೌತಶಾಸ್ತ್ರದಲ್ಲಿ 4, ವೈದ್ಯಕೀಯ ಕ್ಷೇತ್ರದಲ್ಲಿ 12, ರಸಾಯನಶಾಸ್ತ್ರದಲ್ಲಿ 7, ಸಾಹಿತ್ಯದಲ್ಲಿ 16, ಶಾಂತಿ ಸ್ಥಾಪನೆಗಾಗಿ 17 ಮತ್ತು ಅರ್ಥಶಾಸ್ತ್ರದಲ್ಲಿ 3 ಮಹಿಳೆಯರಿಗೆ ಮಾತ್ರ ನೊಬೆಲ್ ಇದುವರೆಗೂ ದೊರೆತಿರುವುದು.

ಗೋಲ್ಡಿನ್ ಅವರ ಅರ್ಥಶಾಸ್ತ್ರೀಯ ಚಿಂತನೆಯಲ್ಲಿ ಮೂಡಿ ಬಂದಿರುವ ಮತ್ತೊಂದು ಪ್ರಮುಖ ವಿಚಾರವೆಂದರೆ ಅವರು 'ದುರಾಸೆಯ ಕೆಲಸ' (ಗ್ರೀಡಿ ವರ್ಕ್) ಎಂದು ಗುರುತಿಸಿರುವ ಪರಿಕಲ್ಪನೆ. ನಾವು 'ಓವರ್ ಟೈಮ್' ಎಂದು ಕರೆಯುವ ಪದ್ಧತಿ, ಸರ್ಕಾರಿ ಕಚೇರಿಗಳೂ ಸೇರಿದಂತೆ ಅನೇಕ ಉದ್ಯಮಗಳಲ್ಲಿ ಜಾರಿಯಲ್ಲಿದೆ. ಉದ್ಯೋಗಿಗಳು ತಮ್ಮ ನಿಗದಿತ ಕೆಲಸದ ವೇಳೆಯನ್ನು ಮೀರಿ ಹೆಚ್ಚುವರಿ ಕೆಲಸ ಮಾಡಿದಾಗ ಅದಕ್ಕೆ ದೊರೆಯುವ ವೇತನ ದುಪ್ಪಟ್ಟು ಅಥವಾ ಅತೀ ಹೆಚ್ಚಾಗಿದ್ದು ಈ ಸಂದರ್ಭಗಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುವವರು ಪುರುಷರೇ, ಏಕೆಂದರೆ ತಮ್ಮ ಸಮಯದ ಮೇಲೆ ಅವರಿಗೆ ನಿಯಂತ್ರಣವಿರುತ್ತದೆ, ಆದರೆ ಮಹಿಳೆಯರು ಸಂಸ್ಕೃತಿ ನಿರ್ಮಿತ ಪಾತ್ರ ಸ್ಥಿರಮಾದರಿಗಳಲ್ಲಿ ಬಂಧಿತರಾಗಿರುವುದರಿಂದ ಪುರುಷರಿಗೆ ಹೋಲಿಸಿದಾಗ ಹೆಚ್ಚಿನ ವೇತನ ತರುವ ಉದ್ಯೋಗಗಳಲ್ಲಿ ಅವರ ಪ್ರವೇಶ ಸೀಮಿತವಾಗಿದೆ. ಇಂಥ ಪರಿಸ್ಥಿತಿಗಳಿಂದ ಲಿಂಗಾಧಾರಿತ ವೇತನ ಅಸಮಾನತೆ ಹೆಚ್ಚುತ್ತಾ ಹೋಗುತ್ತದೆ ಎನ್ನುತ್ತಾರೆ ಗೋಲ್ಡಿನ್.

ಕಾಲಕ್ರಮೇಣ ಸ್ತ್ರೀ ಮತ್ತು ಪುರುಷರು ಗಳಿಸುವ ವೇತನಗಳ ನಡುವಣ ಅಂತರ ಕಡಿಮೆಯಾಗುತ್ತಿದ್ದರೂ ಸಧ್ಯದಲ್ಲೇನೂ ಸಂಪೂರ್ಣ ವೇತನ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬ ನಿಲುವನ್ನು ತಳೆದಿದ್ದ ಗೋಲ್ಡಿನ್ ಆ ಲಿಂಗಾಧಾರಿತ ವೇತನ ವ್ಯತ್ಯಾಸಗಳಿಗೆ ಕಾರಣವಾಗುವ ಗೋಚರ–ಅಗೋಚರ ಸತ್ಯಗಳನ್ನು ಗುರುತಿಸಿದ್ದು ಅವರ ಅರ್ಥಶಾಸ್ತ್ರ ಸಿದ್ಧಾಂತದ ವಿಶೇಷ. ಕಾರ್ಮಿಕ ಮಾರುಕಟ್ಟೆಯ ಇತಿಹಾಸವನ್ನು ಕೂಲಂಕಷವಾಗಿ ಅಧ್ಯಯನ ಮಾಡಿರುವ ಗೋಲ್ಡಿನ್ ಮೊದಮೊದಲು ಮಹಿಳೆಯರು ಆದಾಯವನ್ನು ತರಬಲ್ಲ ಶಿಕ್ಷಣ ಹಾಗೂ ಉದ್ಯೋಗಗಳನ್ನು ಆಯ್ಕೆ ಮಾಡದಿದ್ದುದರಿಂದ ಪುರುಷರಿಗಿಂತ ಅವರ ಗಳಿಕೆಯ ಪ್ರಮಾಣ ಕಡಿಮೆಯೇ ಇತ್ತು. ಆದರೆ ಅವರ ವಿದ್ಯಾರ್ಹತೆ ಹೆಚ್ಚಾಗುತ್ತಾ ಹೋಗಿ ಅವರು ಉದ್ಯೋಗ ಶ್ರೇಣಿಯಲ್ಲಿ ಮೇಲ್ ಸ್ತರಗಳಲ್ಲಿರುವ ಉದ್ಯೋಗಗಳನ್ನು ಪ್ರವೇಶ ಮಾಡಿದಾಗಲೂ ಅವರು ಗಳಿಸುವ ವೇತನ ಪುರುಷರು ಗಳಿಸುವ ವೇತನಕ್ಕಿಂತ ಏಕೆ ಕಡಿಮೆ ಇರುತ್ತದೆಯೆಂದರೆ ಅವರು ಹೊರುವ ಶಿಶುಪಾಲನಾ ಜವಾಬ್ದಾರಿಗಳ ಕಾರಣದಿಂದ. ತಾಯ್ತನ ಮಹಿಳೆಯ ಜೈವಿಕತೆಯೊಡನೆ ತಳುಕು ಹಾಕಿಕೊಂಡಿದ್ದು ಸ್ತ್ರೀ ಮೊದಲ ಮಗುವಿಗೆ ಜನ್ಮವಿತ್ತಾಗಲೇ ಆಕೆಯ ಸೀಮಾಂತೀಕರಣ ಆರಂಭವಾಗುತ್ತದೆ ಎಂದು ಗೋಲ್ಡಿನ್ ಹೇಳುತ್ತಾರೆ.

ಗೋಲ್ಡಿನ್ ಅವರ ಅರ್ಥಶಾಸ್ತ್ರವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಚರ್ಚೆಗೆ ಒಳಪಡಿಸಿದಾಗ, ಮಹಿಳೆಯರ ವಿದ್ಯಾ ಮಟ್ಟ ಮತ್ತು ಅವರ ಉದ್ಯೋಗಾರ್ಹತೆ ಹೆಚ್ಚುತ್ತಾ ಹೋದ ಹಾಗೆಲ್ಲ ಅವರನ್ನು ಸುತ್ತುವರೆದಿರುವ ಪಾತ್ರ ಸ್ಥಿರಮಾದರಿಗಳ ಸಂಕೋಲೆಗಳು ಕಳಚಿ ಬೀಳುತ್ತವೆ ಎಂಬ ಭಾವನೆ ಒಂದು ಮಿಥ್ಯೆಯಷ್ಟೇ ಎನ್ನುವ ಸತ್ಯ ಸ್ಥಾಪಿತವಾಗುತ್ತದೆ. ಇದಕ್ಕೆ ಅವರು ಸುದೀರ್ಘ ವಿಶ್ಲೇಷಣೆಗೆ ಒಳಪಡಿಸಿರುವ ಲಿಂಗಾಧಾರಿತ ವೇತನ ವ್ಯತ್ಯಾಸಗಳೇ ಸಾಕ್ಷಿ. ಮಹಿಳೆಯರ ದುಡಿಮೆ ಕುಟುಂಬದ ಹಾಗೂ ಸಮಾಜದ ಉಳಿವು ಹಾಗೂ ಸುಸ್ಥಿರ ನಿರ್ವಹಣೆಗೆ ಎಷ್ಟೇ ಅವಶ್ಯವಾದರೂ ಇಂದಿಗೂ ಸಮಾಜ ಅದಕ್ಕೆ ದೊರೆಯಬೇಕಾದ ಮಾನ್ಯತೆಯನ್ನು ನೀಡಿಲ್ಲ. ಮಹಿಳೆಯರು ಗೃಹಾಧಾರಿತ ಬಂಧನಗಳಿಂದ ವಿಮುಕ್ತಿಯನ್ನು ಪಡೆದು ತಮ್ಮ ಸಂಪೂರ್ಣ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಬಳಸಿ ಮೇಲ್ಮುಖ ಸಾಮಾಜಿಕ ಚಲನೆಯನ್ನು ಸಾಧಿಸಲು ಪೂರಕವಾದ ನೀತಿಗಳು ಮತ್ತು ಕಾರ್ಯಕ್ರಮಗಳ ಕೊರತೆಯನ್ನೂ ನಾವು ಕಾಣಬಹುದು.

ಇದರಿಂದ ಸ್ಪಷ್ಟವಾಗಿ ಹೊರಹೊಮ್ಮುವ ಒಂದು ಸತ್ಯವೆಂದರೆ ಪುರುಷ ಪ್ರಧಾನ ಮೌಲ್ಯಾಚರಣೆಗಳು ಕಾಲ–ದೇಶಗಳ ಎಲ್ಲೆಗಳನ್ನು ಮೀರುತ್ತವೆ ಎಂಬುದು. ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಹೆಚ್ಚುತ್ತಾ ಹೋದ ಹಾಗೆಲ್ಲ ಮಹಿಳೆಯರ ಬದುಕಿನಲ್ಲಿ ಎಲ್ಲವೂ ಸರಿಯಾಗಿದೆ ಎಂದು ಅರ್ಥೈಸುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನು ಎತ್ತಿ ಲಿಂಗಾಧಾರಿತ ತಾರತಮ್ಯಗಳನ್ನು ಒಂದು ಸಮಗ್ರ ದೃಷ್ಟಿಕೋನದಿಂದ ವಿಮರ್ಶಿಸುವ ಅಗತ್ಯವನ್ನು ಗೋಲ್ಡಿನ್ ಅವರ ಅರ್ಥಶಾಸ್ತ್ರ ಎತ್ತಿ ಹಿಡಿಯುತ್ತದೆ. ಅವರ ಚಿಂತನೆಗಳನ್ನು ಸಮಾಜೋ–ಆರ್ಥಿಕ–ಐತಿಹಾಸಿಕ ಚೌಕಟ್ಟಿನಲ್ಲಿ ಅರ್ಥೈಸಿದಾಗ ಮಾತ್ರ ಅದಕ್ಕೆ ನ್ಯಾಯ ದೊರೆಯುತ್ತದೆ.

ವಿಶ್ವಕಪ್‌ನಲ್ಲಿ ತನ್ನದೇ ದಾಖಲೆ ಮುರಿದು ಇತಿಹಾಸ ನಿರ್ಮಿಸಿದ ಆಸ್ಟ್ರೇಲಿಯಾ

ನೆದರ್‌ಲೆಂಡ್ಸ್ ವಿರುದ್ಧ 309 ರನ್‌ಗಳ ಭಾರೀ ಅಂತರದ ಗೆಲುವು



ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆದ ಏಕದಿನ ವಿಶ್ವಕಪ್‌ನ 24ನೇ ಪಂದ್ಯದಲ್ಲಿ ನೆದರ್‌ಲೆಂಡ್ಸ್ ವಿರುದ್ಧ ಆಸ್ಟ್ರೇಲಿಯಾ ತಂಡ ಅಮೋಘ ಗೆಲುವು ದಾಖಲಿಸಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಮೊದಲು ಬ್ಯಾಟಿಂಗ್ ಮಾಡಿತು. ಅದರಂತೆ ಇನಿಂಗ್ಸ್ ಆರಂಭಿಸಿದ ಆರಂಭಿಕ ಆಟಗಾರ ಡೇವಿಡ್ ವಾರ್ನರ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದರು.

ಆರಂಭದಿಂದಲೇ ನೆದರ್‌ಲೆಂಡ್ಸ್ ಬೌಲರ್‌ಗಳ ಬೆಂಡೆತ್ತಿದ ಡೇವಿಡ್ ವಾರ್ನರ್ (104) ಭರ್ಜರಿ ಶತಕ ಸಿಡಿಸಿ ಮಿಂಚಿದರು. ಮತ್ತೊಂದೆಡೆ ಸ್ಟೀವ್ ಸ್ಮಿತ್ 71 ರನ್‌ಗಳನ್ನು ಬಾರಿಸಿದರೆ, ಮಾರ್ನಸ್ ಲಾಬುಶೇನ್ 62 ರನ್‌ಗಳ ಕೊಡುಗೆ ನೀಡಿದರು. ಇನ್ನು 6ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಗ್ಲೆನ್ ಮ್ಯಾಕ್ಸ್‌ವೆಲ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿ ಕೇವಲ 40 ಎಸೆತಗಳಲ್ಲಿ ಶತಕ ಪೂರೈಸಿ ವಿಶ್ವ ದಾಖಲೆ ನಿರ್ಮಿಸಿದರು. ಅಲ್ಲದೆ 44 ಎಸೆತಗಳಲ್ಲಿ 8 ಭರ್ಜರಿ ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ 106 ರನ್ ಬಾರಿಸಿದರು. ಈ ಸ್ಫೋಟಕ ಇನಿಂಗ್ಸ್ ಪರಿಣಾಮ ಆಸ್ಟ್ರೇಲಿಯಾ ತಂಡವು ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 399 ರನ್ ಕಲೆಹಾಕಿತು.

400 ರನ್‌ಗಳ ಗುರಿ ಪಡೆದ ನೆದರ್‌ಲೆಂಡ್ಸ್ ತಂಡವು ಯಾವುದೇ ಹಂತದಲ್ಲೂ ಆಸೀಸ್ ದಾಳಿಯನ್ನು ಎದುರಿಸಲು ಯಶಸ್ವಿಯಾಗಿರಲಿಲ್ಲ. ಪರಿಣಾಮ 21 ಓವರ್‌ಗಳಲ್ಲಿ ಕೇವಲ 90 ರನ್‌ಗಳಿಸಿ ಆಲೌಟ್ ಆದರು. ಈ ಮೂಲಕ ಆಸ್ಟ್ರೇಲಿಯಾ ತಂಡವು 309 ರನ್‌ಗಳ ಭರ್ಜರಿ ಜಯ ತನ್ನದಾಗಿಸಿಕೊಂಡಿತು.

ವಿಶ್ವಕಪ್ ದಾಖಲೆ ಬರೆದ ಆಸ್ಟ್ರೇಲಿಯಾ: ಈ ಗೆಲುವಿನೊಂದಿಗೆ ಏಕದಿನ ವಿಶ್ವಕಪ್‌ನಲ್ಲಿ ಬೃಹತ್ ಅಂತರದ ಜಯ ಸಾಧಿಸಿದ ವಿಶ್ವ ದಾಖಲೆಯನ್ನು ಆಸ್ಟ್ರೇಲಿಯಾ ಪುನರ್ ಸ್ಥಾಪಿಸಿದರು. ಅಂದರೆ 2015ರ ವಿಶ್ವಕಪ್‌ನಲ್ಲಿ ಅಫ್ಘಾನಿಸ್ತಾನ್ ವಿರುದ್ಧ 275 ರನ್‌ಗಳ ಗೆಲುವು ಸಾಧಿಸಿದ ದಾಖಲೆ ನಿರ್ಮಿಸಿದ್ದ ಆಸೀಸ್ ಪಡೆ ಈ ಬಾರಿ 309 ರನ್‌ಗಳ ಅಂತರದಿಂದ ನೆದರ್‌ಲೆಂಡ್ಸ್‌ಗೆ ಸೋಲುಣಿಸಿ ಹೊಸ ಇತಿಹಾಸ ನಿರ್ಮಿಸಿದೆ.

ಟೀಮ್ ಇಂಡಿಯಾ ಹೆಸರಿನಲ್ಲಿದೆ ವಿಶ್ವ ದಾಖಲೆ: ಏಕದಿನ ಕ್ರಿಕೆಟ್‌ನಲ್ಲಿ ಬೃಹತ್ ಅಂತರದ ಗೆಲುವು ದಾಖಲಿಸಿದ ವಿಶ್ವ ದಾಖಲೆ ಟೀಮ್ ಇಂಡಿಯಾ ಹೆಸರಿನಲ್ಲಿದೆ. 2023 ರಲ್ಲಿ ಭಾರತ ತಂಡವು ಶ್ರೀಲಂಕಾ ವಿರುದ್ಧ 317 ರನ್‌ಗಳ ಜಯ ಸಾಧಿಸಿ ಈ ವಿಶ್ವ ದಾಖಲೆ ನಿರ್ಮಿಸಿದೆ. ಇದೀಗ ನೆದರ್‌ಲೆಂಡ್ಸ್ ವಿರುದ್ಧ 309 ರನ್‌ಗಳ ಗೆಲುವು ದಾಖಲಿಸಿರುವ ಆಸ್ಟ್ರೇಲಿಯಾ ಈ ಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದೆ.

ಭಾರತೀಯ ಮೂಲದ ಇಬ್ಬರು ವಿಜ್ಞಾನಿಗಳಿಗೆ ಅಮೆರಿಕದ ಅತ್ಯುನ್ನತ ರಾಷ್ಟ್ರೀಯ ವಿಜ್ಞಾನ ಪ್ರಶಸ್ತಿ



ವಾಷಿಂಗ್ಟನ್, ಅ.25– ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರು ಭಾರತೀಯ ಮೂಲದ ಇಬ್ಬರು ಅಮೆರಿಕನ್ ವಿಜ್ಞಾನಿಗಳಾದ ಅಶೋಕ್ ಗಾಡ್ಗೀಲ್ ಮತ್ತು ಸುಬ್ರಾ ಸುರೇಶ್ ಅವರಿಗೆ ದೇಶದ ಅತ್ಯುನ್ನತ ರಾಷ್ಟ್ರೀಯ ವಿಜ್ಞಾನ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ತಂತ್ರಜ್ಞಾನ ಮತ್ತು ನಾವೀನ್ಯತೆಗಾಗಿ ಯುಸಿ ಬರ್ಕ್ಲಿಯಲ್ಲಿ ಸಿವಿಲ್ ಮತ್ತು ಎನ್ವಿರಾನ್ಮೆಂಟಲ್ ಇಂಜಿನಿಯರಿಂಗ್‌ನ ಪ್ರೊಫೆಸರ್ ಎಮೆರೈಟಸ್ ಅಶೋಕ್ ಗಾಡ್ಗಿಲ್ ಅವರಿಗೆ ಪ್ರತಿಷ್ಠಿತ ಶ್ವೇತಭವನ ರಾಷ್ಟ್ರೀಯ ಪದಕವನ್ನು ಬೈಡನ್ ಪ್ರದಾನ ಮಾಡಿದರು. ತಂತ್ರಜ್ಞಾನ ಮತ್ತು ನಾವೀನ್ಯತೆಗಾಗಿ ಶ್ವೇತಭವನದ ರಾಷ್ಟ್ರೀಯ ಪದಕವನ್ನು ಪಡೆದ 12 ಮಂದಿಯಲ್ಲಿ ಅಶೋಕ್ ಗಾಡ್ಗೀಲ್ ಅವರು ಒಬ್ಬರಾಗಿದ್ದಾರೆ.

ಇಂಜಿನಿಯರಿಂಗ್, ಭೌತಿಕ ವಿಜ್ಞಾನ ಮತ್ತು ಜೀವ ವಿಜ್ಞಾನದಲ್ಲಿನ ಸಂಶೋಧನೆಗಾಗಿ ಮತ್ತು ವಿಶೇಷವಾಗಿ ವಸ್ತು ವಿಜ್ಞಾನದ ಅಧ್ಯಯನಕ್ಕಾಗಿ ಬ್ರೌನ್ ಯೂನಿವರ್ಸಿಟಿಯ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಹಿರಿಯ ಪ್ರಾಧ್ಯಾಪಕರಾಗಿರುವ ಸುಬ್ರಾ ಸುರೇಶ್ ಅವರಿಗೆ ರಾಷ್ಟ್ರೀಯ ವಿಜ್ಞಾನ ಪದಕವನ್ನು ನೀಡಿ ಗೌರವಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಕೇಂದ್ರದಿಂದ 17,901 ಕೋಟಿ ರೂ. ಬರ ಪರಿಹಾರ ಕೋರಿ ರಾಜ್ಯ ಸರ್ಕಾರದ ಪ್ರಸ್ತಾವ

ನವದೆಹಲಿ: ಕರ್ನಾಟಕದಲ್ಲಿ ಬರಗಾಲದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ ರೈತರಿಗೆ ಪರಿಹಾರ ನೀಡಲು ರೂ. 17,901.73 ಕೋಟಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ.

ಕೇಂದ್ರ ಕೃಷಿ ಕಾರ್ಯದರ್ಶಿ ಮನೋಜ್ ಕುಮಾರ್ ಅಹುಜಾ, ಗೃಹ ಕಾರ್ಯದರ್ಶಿ ಅಜಯ್‌ಕುಮಾರ್ ಭಲ್ಲಾ ಅವರನ್ನು ಭೇಟಿ ಮಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಕರ್ನಾಟಕದ ಬರ ಪರಿಸ್ಥಿತಿಯ ಕುರಿತು ಮನವರಿಕೆ ಮಾಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೃಷ್ಣ ಬೈರೇಗೌಡ, 'ಎನ್‌ಡಿ ಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ರಾಜ್ಯಕ್ಕೆ ರೂ. 17,901.73 ಕೋಟಿ ಪರಿಹಾರ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಆದಷ್ಟು ಶೀಘ್ರದಲ್ಲಿ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇವೆ ಎಂದರು.

ಈ ವರ್ಷ ರಾಜ್ಯದಲ್ಲಿ ಬರ ತೀವ್ರವಾಗಿದೆ. ಜೂನ್‌ನಲ್ಲಿ ಶೇ 56 ಮಳೆ ಕೊರತೆ ಆಗಿತ್ತು. ಜುಲೈನಲ್ಲಿ ಶೇ 29, ಆಗಸ್ಟ್‌ನಲ್ಲಿ ಶೇ. 73, ಸೆಪ್ಟೆಂಬರ್‌ನಲ್ಲಿ ಶೇ. 26 ಮಳೆ ಕೊರತೆ ಉಂಟಾಗಿತ್ತು. ಅಕ್ಟೋಬರ್‌ನಲ್ಲಿ ಈವರೆಗೆ ಶೇ 63ರಷ್ಟು ಮಳೆ ಕೊರತೆಯಾಗಿದೆ. ಇದರಿಂದಾಗಿ ಖಾರಿಫ್ ಹಂಗಾಮಿನಲ್ಲಿ 45.55 ಲಕ್ಷ ಹೆಕ್ಟೇರ್‌ನಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿಯಾಗಿದೆ. ಬೆಳೆ ಹಾನಿಯಿಂದ ರೂ. 33,710 ಕೋಟಿ ನಷ್ಟ ಉಂಟಾಗಿದೆ ಎಂದರು.

ರಾಜ್ಯದಲ್ಲಿ ಇದುವರೆಗೆ 216 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ನವೆಂಬರ್ ಮೊದಲ ವಾರದಲ್ಲಿ ಸಚಿವ ಸಂಪುಟ ಉಪಸಮಿತಿಯ ಸಭೆ ನಡೆಸಿ ಇನ್ನಷ್ಟು ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗುವುದು ಎಂದು ತಿಳಿಸಿದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ, ಬರದಿಂದ ಸಂಕಷ್ಟಕ್ಕೆ ಸಿಲುಕಿದ ಕುಟುಂಬದ ಇಬ್ಬರಿಗೆ ಜೀವನೋಪಾಯಕ್ಕಾಗಿ ಪರಿಹಾರ ನೀಡಲು ಅವಕಾಶ ಇದೆ. ರಾಜ್ಯ ಸರ್ಕಾರವು ಕುಟುಂಬದ ಒಬ್ಬ ವ್ಯಕ್ತಿಗೆ 90 ದಿನಗಳ ಮಟ್ಟಿಗೆ ಪರಿಹಾರ ನೀಡಲು ಉದ್ದೇಶಿಸಿದೆ. ಅದಕ್ಕಾಗಿ ಕೇಂದ್ರ ಸರ್ಕಾರದಿಂದ ರೂ. 12,577 ಕೋಟಿ ಪರಿಹಾರ ಕೋರಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಮೊದಲ ಬಾರಿಗೆ ಕರ್ನಾಟಕ ಸರ್ಕಾರವು ಜೀವನೋಪಾಯಕ್ಕಾಗಿ ಪರಿಹಾರ ಕೋರಿಕೆಯ ಪ್ರಸ್ತಾವ ಸಲ್ಲಿಸಿದೆ ಎಂದರು.

ಚಲುವರಾಯಸ್ವಾಮಿ ಮಾತನಾಡಿ, 'ಕೇಂದ್ರದ ಫಸಲ್ ಬೀಮಾ ಯೋಜನೆಯ ಮಾರ್ಗಸೂಚಿಯ ಬಗ್ಗೆ ಅನೇಕ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರ ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡಬೇಕಿದೆ. ಈ ಸಂಬಂಧ ರಾಜ್ಯದ ನಿಲುವನ್ನು ಕೇಂದ್ರಕ್ಕೆ ವಾರದಲ್ಲಿ ತಿಳಿಸಲಾಗುವುದು' ಎಂದರು.

ಅರಮನೆ ಆವರಣ, ರಾಜಮಾರ್ಗದ ಸ್ವಚ್ಛತೆ

● ಬೃಹತ್ ಶಾಮಿಯಾನ, ಬ್ಯಾರಿಕೇಡ್‌ಗಳ ತೆರವು ● ಇಂದು ಬೆಳಗ್ಗೆ ವೇಳೆಗೆ ಸ್ವಚ್ಛತೆ ಪೂರ್ಣ





ಮೈಸೂರು, ಅ. 25(ಆರ್‌ಕೆ)– ದಸರಾ ಜಂಬೂ ಸವಾರಿ ನಂತರ ಇಂದು ಪೌರಕಾರ್ಮಿಕರು ಅರಮನೆ ಒಳ–ಹೊರ ಆವರಣ, ರಾಜಮಾರ್ಗ ಹಾಗೂ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡರು.

ವಿಜಯದಶಮಿ ಮೆರವಣಿಗೆ ವೀಕ್ಷಿಸಲು ಲಕ್ಷಾಂತರ ಮಂದಿ ಕಿಕ್ಕಿರಿದು ಸೇರಿದ್ದರಿಂದ ನೀರಿನ ಬಾಟಲಿ, ಸ್ನ್ಯಾಕ್ಸ್ ಕವರ್, ಪೇಪರ್, ಚಪ್ಪಲಿಗಳೂ ನೂಕು–ನುಗ್ಗಲಿನಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಇಂದು ಬೆಳಗ್ಗೆಯಿಂದಲೇ ಅರಮನೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಿದ್ದ ಪಾಲಿಕೆ ಪೌರಕಾರ್ಮಿಕರು, ಮಧ್ಯಾಹ್ನದ ವೇಳೆಗೆ ಟಿಪ್ಪರ್‌ಗಳ ಮೂಲಕ ಕಸ ಸಾಗಿಸಿದರು.

ಅರಮನೆ ದ್ವಾರಗಳ ಬಳಿ, ಸುತ್ತಲಿನ ರಸ್ತೆ, ಬಲರಾಮ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ, ಎಲ್‌ಐಸಿ ಸರ್ಕಲ್ ಸೇರಿದಂತೆ ಜನಜಂಗುಳಿ ಏರ್ಪಟಿದ್ದ ರಸ್ತೆಗಳಲ್ಲಿ ಸಂಜೆವರೆಗೂ ಸ್ವಚ್ಛಗೊಳಿಸಿದರು.





ವಿಜಯದಶಮಿ ಮೆರವಣಿಗೆಗೆ ಅಳವಡಿಸಲಾಗಿದ್ದ ಅರಮನೆ ಆವರಣದ ಶಾಮಿಯಾನ, ಪುಷ್ಪಾರ್ಚನೆ ವೇದಿಕೆ, ಎನ್‌ಕ್ಲೋಷರ್‌ಗಳು, ಬ್ಯಾರಿಕೇಡ್‌ಗಳು, ಆಸನಗಳ ತೆರವು ಕಾರ್ಯ ಆರಂಭವಾಗಿದ್ದು, ರಾಜಮಾರ್ಗದ ಇಕ್ಕೆಲಗಳಲ್ಲಿ ಅಳವಡಿಸಿರುವ ಮರದ ಬ್ಯಾರಿಕೇಡ್‌ಗಳನ್ನೂ ತೆರವುಗೊಳಿಸಲಾಯಿತು. ಪಾಲಿಕೆ ಆರೋಗ್ಯಾಧಿಕಾರಿಗಳು ನಿಂತು ಪೌರಕಾರ್ಮಿಕರ ಮೂಲಕ ಕ್ಷಿಪ್ರಗತಿಯಲ್ಲಿ ಸ್ವಚ್ಛಗೊಳಿಸಿ ಟಿಪ್ಪರ್ ಗಟ್ಟಲೆ ತ್ಯಾಜ್ಯವನ್ನು ವಿಲೇವಾರಿ ಮಾಡಿಸಿದರಾದರೂ, ಇನ್ನೂ ಪೂರ್ಣಗೊಂಡಿಲ್ಲ. ದಸರಾಗೆ ಬಂದಿರುವ ಪ್ರವಾಸಿಗರು ಇನ್ನೂ ಮೈಸೂರಲ್ಲೇ ಇರುವುದರಿಂದ ಹೆಚ್ಚುವರಿ ಪೌರಕಾರ್ಮಿಕರನ್ನು ಬಳಸಿಕೊಂಡು ತ್ವರಿತಗತಿಯಲ್ಲಿ ಕಸ ವಿಲೇವಾರಿ ಮಾಡುತ್ತಿದ್ದೇವೆ. ಜನರು ಬಿಟ್ಟುಹೋದ ಚಪ್ಪಲಿ ರಾಶಿ ಬಿದ್ದಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ. ಇಂದು ರಾತ್ರಿಯೂ ಹೆಲ್ತ್ ಇನ್ಸ್‌ಪೆಕ್ಟರ್‌ಗಳ ಮೇಲ್ವಿಚಾರಣೆಯಲ್ಲಿ ಸ್ವಚ್ಛತಾ ಕಾರ್ಯ ಮುಂದುವರಿಯಲಿದ್ದು, ಗುರುವಾರ ಬೆಳಗ್ಗೆ ವೇಳೆಗೆ ರಸ್ತೆಗಳು, ಸರ್ಕಲ್‌ಗಳು ಮಾಮೂಲಿಯಂತಿರಲಿವೆ ಎಂದರು.

ಆಹಾರ ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪರಿಂದ

ಅನ್ನಭಾಗ್ಯ ಯೋಜನೆ ಮಳಿಗೆ ಉದ್ಘಾಟನೆ



ಮೈಸೂರು,ಅ.25–ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ, ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಿರ್ಮಾಣ ಮಾಡಿರುವ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯ ಮಳಿಗೆಯನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಈ ಯೋಜನೆಯು ಬಡಜನರಿಗೆ ಎರಡು ಹೊತ್ತು ಊಟ ಮಾಡಿ ನೆಮ್ಮದಿ ಜೀವನ ಸಾಗಿಸಲು ನೆರವಾಗಿದೆ. ಈ ಯೋಜನೆಯನ್ನು ಹಸಿವು ಮುಕ್ತ ಕರ್ನಾಟಕ ನಿರ್ಮಾಣದ ಉದ್ದೇಶದಿಂದ ಜಾರಿಗೆ ತರಲಾಗಿದೆ. ಜನಸಾಮಾನ್ಯರ ಆಹಾರ ಭದ್ರತಾ ವಿಷಯದಲ್ಲಿ ಒಂದು ಮೈಲಿಗಲ್ಲು ಎಂದು ಭಾವಿಸಲಾಗಿದೆ. ಪ್ರತಿ ತಿಂಗಳು ಕಾರ್ಡುದಾರರಿಗೆ ನಿಶ್ಚಿತ ದಿನಾಂಕಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆ ಮಾಡಲು ಕ್ರಮವಹಿಸಲಾಗಿದೆ. ನೂತನವಾಗಿ ರಚನೆಯಾದ ಕರ್ನಾಟಕ ಸರ್ಕಾರವು ಅನ್ನಭಾಗ್ಯ ಯೋಜನೆಯನ್ನು ಜುಲೈ–2023 ರ ಮಾಹೆಯಿಂದ ಮರು ಜಾರಿ ಮಾಡಿ ಆದ್ಯತಾ ಪಡಿತರ ಚೀಟಿ ಮತ್ತು ಅಂತ್ಯೋದಯ ಪಡಿತರ ಚೀಟಿಯಲ್ಲಿರುವ ಪ್ರತಿ ಸದಸ್ಯರಿಗೆ ಪ್ರತಿ ಮಾಹೆ ತಲಾ 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಣೆ ಮಾಡಲು ಆದೇಶಿಸಿದ್ದು, ಈ ಅನ್ನಭಾಗ್ಯ ಯೋಜನೆಯಿಂದ ರಾಜ್ಯದ ಅಂದಾಜು 4.42 ಕೋಟಿ ಜನರಿಗೆ ಅನುಕೂಲವಾಗಿದೆ. ಪ್ರಸ್ತುತ ಪ್ರತಿ ಮಾಹೆ ಪ್ರತಿ ಫಲಾನುಭವಿಗೆ 5 ಕೆ.ಜಿ ಆಹಾರ ಧಾನ್ಯ ಮತ್ತು ಉಳಿದ 5 ಕೆ.ಜಿ ಗೆ ರೂ. 170/– ಹಣವನ್ನು ಅವರ ಖಾತೆಗೆ ನೇರವಾಗಿ ಪಾವತಿ ಮಾಡಲಾಗುತ್ತಿದೆ. ಈ ಯೋಜನೆಯಿಂದ ಪ್ರತಿ ಆದ್ಯತಾ ಮತ್ತು ಅಂತ್ಯೋದಯ ಕುಟುಂಬಕ್ಕೂ ನಿಶ್ಚಿತ ಆಹಾರ ಪದಾರ್ಥಗಳು ಮತ್ತು ಪೌಷ್ಟಿಕ ಆಹಾರ ದೊರಕುತ್ತಿದೆ. ಇದರಿಂದಾಗಿ ಪ್ರತಿ ಕುಟುಂಬ ಸ್ವಾಭಿಮಾನದಿಂದ ಬದುಕುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಹಾರ ನಾಗರಿಕ ಸರಬರಾಜು ಮತ್ತು ಗಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕಿ ಶ್ರೀಮತಿ ಕುಮುದಾ ಶರತ್, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಗೌಡ, ಕೆ.ಎಫ್.ಸಿ.ಎಸ್.ಸಿ ಜಿಲ್ಲಾ ವ್ಯವಸ್ಥಾಪಕ ಪ್ರೇಮ್‌ಕುಮಾರ್, ಸಹಾಯಕ ನಿಯಂತ್ರಕ ಮಹದೇವಸ್ವಾಮಿ ಹಾಗೂ ಮತ್ತಿತರರು ಹಾಜರಿದ್ದರು.



ಇತ್ತೀಚೆಗೆ ಮೈಸೂರಿನ ಪುರಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಸಿದ್ದೇಶ್ವರ ಕೃಪಾಪೋಷಿತ ನಾಟಕ ಮಂಡಳಿಯಿಂದ 'ದಕ್ಷ ಯಜ್ಞ' ಪೌರಾಣಿಕ ನಾಟಕ ಏರ್ಪಡಿಸಲಾಗಿತ್ತು. ದಕ್ಷಬ್ರಹ್ಮನ ಪಾತ್ರಧಾರಿ ಹುಯಿಲಾಳು ರಾಮಸ್ವಾಮಿ ಅದ್ಭುತ ಅಭಿನಯ ಪ್ರದರ್ಶಿಸಿದರು. ಚಂದ್ರಮನ ಪಾತ್ರದಲ್ಲಿ ಸಿದ್ಧಾರ್ಥ್, ರೋಹಿಣಿ ಪಾತ್ರದಲ್ಲಿ ಕೃಷ್ಣವೇಣಿ ಅಭಿನಯಿಸಿದ್ದರು.

ವಯನಾಡಿನ ಬಾವಲಿಗಳಲ್ಲಿ ನಿಫಾ ವೈರಸ್ ಇರುವುದನ್ನು ಐಸಿಎಂಆರ್ ದೃಢಪಡಿಸಿದೆ



ತಿರುವನಂತಪುರಂ: ವಯನಾಡಿನಲ್ಲಿ ಬಾವಲಿಗಳಿಂದ ಸಂಗ್ರಹಿಸಿದ ಮಾದರಿಯಲ್ಲಿ ನಿಫಾ ವೈರಸ್ ಇರುವುದನ್ನು ಐಸಿಎಂಆರ್ ದೃಢಪಡಿಸಿದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಕಟ್ಟೆಚ್ಚರ ವಹಿಸಿದೆ. ಬತ್ತೇರಿ ಮತ್ತು ಮಾನಂದವಾಡಿಯಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಆತಂಕಪಡುವ ಅಗತ್ಯವಿಲ್ಲ. ಆದರೆ, ಆದರೆ ಜಾಗೃತಿ ಮೂಡಿಸಲು ಈ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ನಾವು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮತ್ತು ವಯನಾಡಿನಲ್ಲಿ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಲು ನಿರ್ಧರಿಸಿದ್ದೇವೆ. ನಿರಂತರ ಮೇಲ್ವಿಚಾರಣೆಯಿಂದಾಗಿ ನಾವು ನಿಫಾ ವೈರಸ್ ಇರುವಿಕೆಯನ್ನು ಗುರುತಿಸಲು ಸಾಧ್ಯವಾಗಿದೆ. ಎಲ್ಲಿಂದ ಬೇಕಾದರೂ ಪ್ರಕರಣಗಳು ವರದಿಯಾಗ ಬಹುದು ಎಂದು ವೀಣಾ ಹೇಳಿದರು.

ಇತರ ಜಿಲ್ಲೆಗಳಲ್ಲಿಯೂ ನಿಪಾ ವೈರಸ್ ಇರುವಿಕೆಯನ್ನು ಖಚಿತಪಡಿಸಿಕೊಳ್ಳಲು ಇದೇ ರೀತಿಯ ಅಧ್ಯಯನಗಳು ನಡೆಯುತ್ತಿವೆ. ಐಸಿಎಂಆರ್ ರಾಜ್ಯದ ವಿವಿಧ ಭಾಗಗಳಿಂದ ಮಾದರಿ ಸಂಗ್ರಹಿಸಿ ಸಂಶೋಧನೆಗಳನ್ನು ಮಾಡಿದೆ ಎಂದು ಹೇಳಿದರು. ಪಕ್ಷಿ ತಿಂದಿರುವ ಹಣ್ಣುಗಳನ್ನು ತಿನ್ನದಂತೆ ಮತ್ತು ಯಾವುದೇ ರೋಗಲಕ್ಷಣಗಳನ್ನು ನಿರ್ಲಕ್ಷ್ಯಿಸದಂತೆ ಆರೋಗ್ಯ ಸಚಿವೆ ವೀಣಾ ಜಾರ್ಜ್ ಜನರಿಗೆ ಒತ್ತಾಯಿಸಿದ್ದಾರೆ.

INDIA ಬೇಡ, ಈಗ ಭಾರತ ಎಂದು ಬರೆಯಿರಿ

ಶಾಲಾ ಪುಸ್ತಕಗಳಲ್ಲಿ ಹೆಸರು ಬದಲಾವಣೆಗೆ NCERT ಸಮಿತಿ ಶಿಫಾರಸು

ನವದೆಹಲಿ, ಅ.25– ಜಿ20 ಶೃಂಗಸಭೆ 2023ರ ಸಂದರ್ಭದಲ್ಲಿ ದೇಶದ ಹೆಸರನ್ನು ಬದಲಾಯಿಸುವ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿತ್ತು. INDIA ಬದಲು 'ಭಾರತ' ಎಂದು ಬರೆಯಲಾಗುವುದು ಎಂದು ಹೇಳಲಾಗಿತ್ತು. ಜಿ20 ರಾಷ್ಟ್ರಪತಿಗಳ ಭೋಜನ ಕೂಟದ ಆಹ್ವಾನ ಪತ್ರದಲ್ಲೂ INDIA ಬದಲಿಗೆ ಭಾರತ ಎಂದು ಬರೆಯಲಾಗಿತ್ತು. ನಂತರ ಜಿ20 ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಾಮಫಲಕದಲ್ಲೂ 'ಭಾರತ' ಎಂದು ಬರೆಯಲಾಗಿತ್ತು. ಸಂಸತ್ತಿನ ವಿಶೇಷ ಅಧಿವೇಶನ ಕರೆಯಲಾಯಿತು ಮತ್ತು ನಂತರ ಚರ್ಚೆ ವೇಗ ಪಡೆಯಿತು. ಆದರೆ, ಅಂತಹದ್ದೇನೂ ಆಗಲಿಲ್ಲ.

ಈಗ ಶಾಲಾ ಪುಸ್ತಕಗಳಲ್ಲಿ ದೇಶದ ಹೆಸರನ್ನು ಬದಲಾಯಿಸಲು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಉನ್ನತ ಮಟ್ಟದ ಸಮಿತಿಯು ಶಿಫಾರಸು ಮಾಡಿದೆ. ಸಮಿತಿಯ ಅಧ್ಯಕ್ಷ ಸಿಐ ಐಸಾಕ್ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿದ್ದು INDIA ಹೆಸರನ್ನು ಶಾಲಾ ಪಠ್ಯಕ್ರಮದಿಂದ ತೆಗೆದು ಹಾಕಿ, 'ಭಾರತ' ಎಂದು ಬರೆಯಬೇಕು ಎಂದು ಹೇಳಿದ್ದಾರೆ. ಪಠ್ಯಕ್ರಮದಿಂದ ಪ್ರಾಚೀನ ಇತಿಹಾಸವನ್ನು ತೆಗೆದುಹಾಕಿ ಅದರ ಬದಲಿಗೆ 'ಶಾಸ್ತ್ರೀಯ ಇತಿಹಾಸ'ವನ್ನು ಕಲಿಸುವುದು ಎಂದು ಮತ್ತೊಂದು ಶಿಫಾರಸು ಮಾಡಿದ್ದಾರೆ.

'ಬ್ರಿಟಿಷರು ಕೊಟ್ಟ ಹೆಸರು INDIA, ಭಾರತ ದೇಶದ ಪ್ರಾಚೀನ ಹೆಸರು: ಏಳು ಸದಸ್ಯರ ಸಮಿತಿಯು ಸರ್ವಾನುಮತದಿಂದ ಈ ಶಿಫಾರಸು ಮಾಡಿದೆ ಎಂದು ಐಸಾಕ್ ಹೇಳಿದರು. ಭಾರತವು ಹಳೆಯ ಹೆಸರು ಎಂದು ಅವರು ಹೇಳಿದರು. 7,000 ವರ್ಷಗಳಷ್ಟು ಹಳೆಯದಾದ ವಿಷ್ಣು ಪುರಾಣದಂತಹ ಪ್ರಾಚೀನ ಗ್ರಂಥಗಳಲ್ಲಿ ಭಾರತ ಎಂಬ ಹೆಸರನ್ನು ಬಳಸಲಾಗಿದೆ. 'ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆ, 1757ರಲ್ಲಿ ಪ್ಲಾಸಿ ಕದನದ ನಂತರವೇ INDIA ಎಂಬ ಪದವು ಬಳಕೆಗೆ ಬಂತು. ಆದ್ದರಿಂದ ಎಲ್ಲ ವರ್ಗದ ಪುಸ್ತಕಗಳಲ್ಲಿ INDIA ಬದಲಿಗೆ ಭಾರತ ಎಂಬ ಹೆಸರನ್ನು ಬಳಸಬೇಕು ಎಂದು ಸಮಿತಿ ಒಮ್ಮತದಿಂದ ಸೂಚಿಸಿದೆ ಎಂದರು.

ಸಮಿತಿಯು ತನ್ನ ದಾರಿ ಹಿಡಿದರೆ, ಇತಿಹಾಸ ಕಲಿಸುವ ಶೈಲಿಯೂ ಬದಲಾವಣೆ: 2021ರಲ್ಲಿ ವಿವಿಧ ವಿಷಯಗಳ ಕುರಿತು ಪೇಪರ್‌ಗಳನ್ನು ತಯಾರಿಸಲು ಎನ್‌ಸಿಇಆರ್‌ಟಿ 25 ಸಮಿತಿಗಳನ್ನು ರಚಿಸಿದೆ ಎಂದ ಐಸಾಕ್, ಇದರಲ್ಲಿ ತಮ್ಮ ಸಮಿತಿಯೂ ಒಂದಾಗಿದ್ದು, ಈ ಸಮಿತಿಯು ಪಠ್ಯಪುಸ್ತಕಗಳಲ್ಲಿ 'ಪ್ರಾಚೀನ ಇತಿಹಾಸ' ಬದಲಿಗೆ 'ಶಾಸ್ತ್ರೀಯ ಇತಿಹಾಸ'ವನ್ನು ಸೇರಿಸಲು ಶಿಫಾರಸು ಮಾಡಿದೆ. ಬ್ರಿಟಿಷರು ಭಾರತೀಯ ಇತಿಹಾಸವನ್ನು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ. ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಇದರಲ್ಲಿ ಭಾರತವನ್ನು ಕತ್ತಲೆಯಲ್ಲಿ ತೋರಿಸಲಾಗಿದೆ. ವೈಜ್ಞಾನಿಕ ಜ್ಞಾನ ಮತ್ತು ಪ್ರಗತಿಯ ಅಜ್ಞಾನ. ಆದಾಗ್ಯೂ, ಆ ಯುಗದಲ್ಲಿ ಭಾರತದ ಸಾಧನೆಗಳ ಅನೇಕ ಉದಾ ಹರಣೆಗಳು ಸೌರವ್ಯೂಹದ ಮಾದರಿಯಲ್ಲಿ ಆರ್ಯಭಟನ ಕೆಲಸವನ್ನು ಒಳಗೊಂಡಿವೆ ಎಂದರು.

ಹಾಗಾಗಿ ಭಾರತೀಯ ಇತಿಹಾಸದ ಶಾಸ್ತ್ರೀಯ ಅವಧಿಯನ್ನು ಶಾಲೆಗಳಲ್ಲಿ ಮಧ್ಯಕಾಲೀನ ಮತ್ತು ಆಧುನಿಕ ಅವಧಿಗಳೊಂದಿಗೆ ಕಲಿಸಬೇಕೆಂದು ನಾವು ಸೂಚಿಸಿದ್ದೇವೆ. ಸಮಿತಿಯು ಪಠ್ಯಪುಸ್ತಕಗಳಲ್ಲಿ 'ಹಿಂದೂ ವಿಜಯಗಳನ್ನು' ಹೈಲೈಟ್ ಮಾಡಲು ಶಿಫಾರಸು ಮಾಡಿದೆ ಎಂದು ಹೇಳಿದರು. ಐಸಾಕ್ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್(ICHR)ನ ಸದಸ್ಯರೂ ಆಗಿದ್ದಾರೆ. ಇದಲ್ಲದೆ, ಸಮಿತಿಯು ಎಲ್ಲಾ ವಿಷಯಗಳ ಪಠ್ಯಕ್ರಮದಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಯನ್ನು ಸೇರಿಸಲು ಶಿಫಾರಸು ಮಾಡಿದೆ.

ಶಿಬಿರಾರ್ಥಿಗಳಿಗೆ ಶುಭ ಹಾರೈಕೆ; ಅಧ್ಯಯನ ಪುಸ್ತಕ ಬಿಡುಗಡೆ ನಾಳೆ



ಅಮರ್‌ನಾಥ್

ಮೈಸೂರು,ಅ.25(ಪಿಎಂ)–ಕರ್ನಾಟಕ ರಾಜ್ಯ ಮುಕ್ತ ವಿವಿಯ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ 55 ದಿನಗಳ ತರಬೇತಿ ಶಿಬಿರದ ಪ್ರಯುಕ್ತ ಅ.27ರಂದು ಶಿಬಿರಾರ್ಥಿಗಳಿಗೆ ಶುಭ ಹಾರೈಕೆ ಮತ್ತು 'ಮುಕ್ತ ಭಂಡಾರ' ಅಧ್ಯಯನ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿವಿಯ ಕಾವೇರಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 10ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಅರುಣಾಚಲ ಪ್ರದೇಶ ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಅಮರ್‌ನಾಥ್ ಆರ್.ತಲವಾಡೆ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ, ಮುಖ್ಯ ಭಾಷಣ ಮಾಡಲಿದ್ದಾರೆ. ಮೈಸೂರು ನಗರ ಪೊಲೀಸ್ ಆಯುಕ್ತರೂ ಆದ ಹಿರಿಯ ಐಪಿಎಸ್ ಅಧಿಕಾರಿ ಬಿ.ರಮೇಶ್ ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ, ಶಿಬಿರಾರ್ಥಿಗಳಿಗೆ ಶುಭ ಹಾರೈಸಲಿದ್ದಾರೆ.

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿರಲಿದ್ದಾರೆ. ಶಿಬಿರವು ಸೆ.2ರಂದು ಪ್ರಾರಂಭವಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ 460 ಮಂದಿ ತರಬೇತಿ ಪಡೆದಿದ್ದಾರೆ ಎಂದು ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್‌ಟಿಟಿ ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು, ಅ. 25– ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ವಿಭಾಗವು ರಾಷ್ಟ್ರೀಯ ಶಿಕ್ಷಣ ಸಮಿತಿಯ ಸಹಯೋಗದೊಂದಿಗೆ 2023–24ನೇ ಸಾಲಿನ ಪೂರ್ವ ಪ್ರಾಥಮಿಕ ಶಿಕ್ಷಕರ ಪ್ರಶಿಕ್ಷಣ ತರಬೇತಿ, ನರ್ಸರಿ ಟೀಚರ್ ಟ್ರೈನಿಂಗ್ ತರಬೇತಿಯ (ಎನ್‌ಟಿಟಿ) ಡಿಪ್ಲೋಮಾ ಕೋರ್ಸ್‌ಗಳಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. ಸಂ. 8310306882, 9964790442 ಸಂಪರ್ಕಿಸಬಹುದು.

ನಮ್ಮಿಬ್ಬರದ್ದೂ ಒಂದೇ ಜೀವ–ಎರಡು ದೇಹವಿದ್ದಂತೆ



ಮೈಸೂರು, ಅ.25(ಎಂಟಿವೈ)– ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊತ್ತಿದ್ದ ಅಭಿಮನ್ಯು ಇನ್ನು 4–5 ಕಿ.ಮಿ ದೂರ ಸರಾಗವಾಗಿ ಸಾಗುವ ಮನೋಭಾವ ಹೊಂದಿದ್ದ ಎಂದು ಮಾವುತ ವಸಂತ್ ಪ್ರತಿಕ್ರಿಯಿಸಿದ್ದಾರೆ.

ಲಕ್ಷಾಂತರ ಜನರ ನಡುವೆ ಅಂಬಾರಿ ಹೊತ್ತಿದ್ದ ಅಭಿಮನ್ಯು ಆನೆಯನ್ನು ಯಶಸ್ವಿಯಾಗಿ ಮುನ್ನಡೆಸಿ ಮಾವುತ ವಸಂತ್ ಇಂದು ಬೆಳಗ್ಗೆ ಪತ್ರಕರ್ತರೊಂದಿಗೆ ಮಾತನಾಡಿ ತಮ್ಮ ಅನುಭವವನ್ನು ಹಂಚಿಕೊಂಡರು. ಅಭಿಮನ್ಯು ನನ್ನ ಜೀವನಾಡಿ ಇದ್ದಂತೆ. ಈ ಹಿಂದೆ ನನ್ನ ತಂದೆ ಸಣ್ಣಪ್ಪ ಅಭಿಮನ್ಯು ಆನೆಯನ್ನು ನೋಡಿಕೊಳ್ಳುತ್ತಿದ್ದರು. ಅವರೊಂದಿಗೆ ನಾನು ಚಿಕ್ಕಂದಿನಿಂದಲೂ ಅಭಿಮನ್ಯುವಿನೊಂದಿಗೆ ಒಡನಾಟ ಇಟ್ಟುಕೊಂಡಿದ್ದೆ. ಒಟ್ಟು ಅಭಿಮನ್ಯುವಿನೊಂದಿಗೆ 25 ವರ್ಷದಿಂದ ದಸರಾ ಮಹೋತ್ಸವಕ್ಕೆ ಆಗಮಿಸುತ್ತಿದ್ದೇನೆ. ಅದರಲ್ಲಿ 4 ವರ್ಷ ಅಂಬಾರಿ ಹೊತ್ತಿದ್ದ ಅಭಿಮನ್ಯುವನ್ನು ಮುನ್ನಡೆಸಿದ್ದೇನೆ. ನಮ್ಮಿಬ್ಬರದ್ದು ಒಂದೇ ಜೀವ–ಎರಡು ದೇಹವಿದ್ದಂತೆ ಎಂದು ಬಣ್ಣಿಸಿದರು.


ಅಭಿಮನ್ಯು ಬಗ್ಗೆ ಮಾವುತ ವಸಂತ್ ಅಭಿಮಾನದ ನುಡಿ

ನಾಡದೇವಿ ಚಾಮುಂಡೇಶ್ವರಿ ತಾಯಿಯ ಆಶೀರ್ವಾದದಿಂದಾಗಿ ಸುಸೂತ್ರವಾಗಿ ಜಂಬೂಸವಾರಿ ನೆರವೇರಿದೆ. ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಜನಸ್ತೋಮ ಅಂಬಾರಿ ಕಂಡು ಜೈಕಾರ ಹಾಕುತ್ತಿದ್ದರು. ಜನ ಹಾಗೂ ಜಾನಪದ ಕಲಾತಂಡಗಳ ಶಬ್ದ, ಸ್ತಬ್ಧಚಿತ್ರಗಳ ಸಂಚಾರ ಸೇರಿದಂತೆ ಯಾವುದೇ ಶಬ್ದಕ್ಕೂ ಅಭಿಮನ್ಯು ಜಗ್ಗಲೇ ಇಲ್ಲ. ಚಿನ್ನದ ಅಂಬಾರಿ ಹೊತ್ತಿದ್ದರೂ ಸರಾಗವಾಗಿ ಸಾಗಿತು. ಯಾವುದೇ ಸಂದರ್ಭದಲ್ಲೂ ಅಭಿಮನ್ಯುವಿನ ವರ್ತನೆಯಲ್ಲಿ ಬದಲಾವಣೆ ಕಂಡು ಬರಲಿಲ್ಲ. ಶಾಂತ ನಡೆಯಿಂದಲೇ ಸಾಗಿತು. ನಾವು ಸುಮ್ಮನಿದ್ದರೆ ಇನ್ನು 4–5 ಕಿಮೀ ದೂರ ಅಂಬಾರಿಯನ್ನು ಹೊತ್ತು ಸಾಗುವ ಮನಸ್ಥಿತಿ ಹೊಂದಿತ್ತು ಎಂದು ವಸಂತ್ ವಿವರಿಸಿದರು.

ಇದುವರೆಗೆ ನಾನು ನಾಲ್ಕು ವರ್ಷ ಅಂಬಾರಿ ಹೊತ್ತಿದ್ದ ಅಭಿಮನ್ಯುವನ್ನು ಮುನ್ನಡೆಸಿದ್ದೇನೆ. ಆದರೆ 2020ರಲ್ಲಿ ಕೊರೊನಾ ಸಂದರ್ಭದಲ್ಲಿ ಅರಮನೆ ಆವರಣಕ್ಕೆ ಸೀಮಿತವಾಗಿದ್ದ ದಸರಾದಲ್ಲಿ ಭಯವಾಗಿರಲಿಲ್ಲ. ಕಳೆದ ವರ್ಷ ಮೆರವಣಿಗೆಯಲ್ಲಿ ಭಯವಾಗಿತ್ತು ಈ ವರ್ಷ ಭಯವಾಗಲಿಲ್ಲ ಎಂದು ಅಭಿಮನ್ಯು ಆನೆ ಮಾವುತ ವಸಂತ ಸಂತಸ ವ್ಯಕ್ತಪಡಿಸಿದರು.

ವಿಶೇಷ ಗುಣ: ಅಭಿಮನ್ಯುಗೆ ವಿಶೇಷ ಗುಣವಿದೆ. ಕಾಡಾನೆ ಸೆರೆ, ಹುಲಿ ಸೆರೆ ಕಾರ್ಯಾಚರಣೆಗೆ ಕರೆದೊಯ್ದಾಗ ಅದಕ್ಕೆ ನಾನು ಬಂದಿರುವ ಉದ್ದೇಶ ತಿಳಿದು ಸಜ್ಜಾಗುತ್ತದೆ. ದಸರೆಗೆ ಬಂದಾಗ ನಗರ ವಾತಾವರಣಕ್ಕೂ ಒಗ್ಗಿಕೊಳ್ಳುತ್ತದೆ. ಅರಮನೆಯಲ್ಲಿ ಅಂಬಾರಿ ಕಟ್ಟುತ್ತಿದ್ದಂತೆಯೇ ಮೆರವಣಿಗೆಯಲ್ಲಿ ಸಾಗಲು ಸಜ್ಜಾಗುತ್ತದೆ. ಅಂಬಾರಿ ಹೊರಲು ಮಾನಸಿಕವಾಗಿ ಸಿದ್ಧವಾಗಿತ್ತು. ಚಾಮುಂಡೇಶ್ವರಿ ಜತೆಯಲ್ಲಿ ಇರುವ ತನಕ ಯಾವುದೇ ತೊಂದರೆ ಇಲ್ಲ ಎಂದರು.

ಹೊಸ ಅನುಭವ: ಡಿಸಿಎಫ್ ಸೌರಭ್ ಕುಮಾರ್ ಮಾತನಾಡಿ, ಅಭಿಮನ್ಯು ಆನೆ ನೇತೃತ್ವದಲ್ಲಿ ಯಶಸ್ವಿಯಾಗಿದ್ದೇವೆ. ಕಲ್ಪನೆಗೂ ಮೀರಿದ ಜನರಿದ್ದರು. ಅಂಬಾರಿ ಆನೆ ಸಾಗಿದ ಹಾದಿಯಲ್ಲಿ ಜನಸ್ತೋಮವೂ ಹುರಿದುಂಬಿಸಿದ್ದು ಸಂತಸ ತಂದಿದೆ. ಈ ದಸರೆಗೆ ಈ ಬಾರಿ 14 ಆನೆಗಳನ್ನು ಕರೆತರಲಾಗಿತ್ತು. ಇವುಗಳಲ್ಲಿ 4 ಹೊಸ ಆನೆಗಳಿದ್ದವು. ಎಲ್ಲ ತಾಲೀಮು ಪೂರ್ಣಗೊಳಿಸಿ ವಿಜಯದಶಮಿಗೆ ಸಜ್ಜುಗೊಂಡಿದ್ದವು. ಅಭಿಮನ್ಯು ಆನೆ ಪೂರ್ಣ ಆತ್ಮವಿಶ್ವಾಸದಲ್ಲಿತ್ತು. ಹಾಗಾಗಿ ಯಾವುದೇ ತೊಂದರೆ ಇಲ್ಲದೇ ಮೆರವಣಿಗೆ ಪೂರ್ಣಗೊಂಡಿತು ಎಂದರು.



❝ ದಾರಿಯುದ್ದಕ್ಕೂ ಚಿನ್ನದ ಅಂಬಾರಿಯಲ್ಲಿರುವ ನಾಡದೇವತೆ ಚಾಮುಂಡೇಶ್ವರಿಯನ್ನು ಕಂಡು ಕೈ ಮುಗಿದು ಜೈಕಾರ ಹಾಕುತ್ತಿದ್ದರು. ಇದರಿಂದ ನಾಡದೇವಿಯನ್ನು ಕಣ್ತುಂಬಿಕೊಳ್ಳಲೆಂದು ಅಭಿಮನ್ಯುವಿಗೆ ನಿಧಾನವಾಗಿ ಸಾಗುವಂತೆ ಸೂಚನೆ ನೀಡುತ್ತಿದ್ದೆ. ಇದರಿಂದ ಮೆರವಣಿಗೆ ವೀಕ್ಷಿಸುತ್ತಿದ್ದ ಜನ ಹೆಚ್ಚು ಸಮಯ ಅಂಬಾರಿಯನ್ನು ನೋಡುವ ಅವಕಾಶ ಸಿಕ್ಕಂತಾಯಿತು. ಅಂಬಾರಿ ಕಟ್ಟುವುದರಲ್ಲಿ ಏರುಪೇರಾದರೆ ವಾಲಾಡುತ್ತದೆ. ಮೆರವಣಿಗೆಯಲ್ಲಿ ಸ್ವಲ್ಪ ಮುಂದಕ್ಕೆ ಹೋದ ಬಳಿಕ ಅಭಿಮನ್ಯು ಸರಿಪಡಿಸಿಕೊಂಡಿತು. ಆನೆಗೆ ಆಯಾಸವಾಗಲಿಲ್ಲ. ಇನ್ನೆರಡು ಕಿಲೋ ಮೀಟರ್ ಹೋಗಲು ಸಿದ್ಧವಿತ್ತು.

–ಮಾವುತ ವಸಂತ್

ನನಗೆ ಇದು ಮೊದಲನೇ ದಸರವಾದ್ದರಿಂದ ಸವಾಲಿನಿಂದ ಕೂಡಿತ್ತು. ಮರಳು ಮೂಟೆ ಯಾಕೇ ಹೊರಿಸಲಾಗುತ್ತದೆ ಎಂಬುದೂ ತಿಳಿದಿರಲಿಲ್ಲ. ಐಎಫ್‌ಎಸ್ ತರಬೇತಿ ವೇಳೆ ಮಾನವ–ವನ್ಯಜೀವಿ ಸಂಘರ್ಷ, ನೆಡುತೋಪು ಬಗ್ಗೆ ತಿಳಿಸುತ್ತಾರೆ. ದಸರಾ ಬಗ್ಗೆ ಏನನ್ನೂ ಕಲಿಸುವುದಿಲ್ಲ. ಇದು ಹೊಸ ಅನುಭವ. ಮತ್ತೊಮ್ಮೆ ಅವಕಾಶ ದೊರೆತರೆ ಉತ್ತಮವಾಗಿ ಸಂಘಟಿಸಬಹುದು. ಈ ಬಾರಿ ದಸರಾ ಯಶಸ್ವಿಗೆ ಇಲಾಖಾ ಸಿಬ್ಬಂದಿ, ಪೊಲೀಸ್, ಸಾರ್ವಜನಿಕರು, ಪ್ರವಾಸಿಗರು, ಮೈಸೂರಿಗರು ಸೇರಿದಂತೆ ಎಲ್ಲರೂ ಸಹಕಾರ ನೀಡಿದರು ಎಂದು ತಿಳಿಸಿದರು.

ನಿಶಾನೆ ಆನೆ ಅರಮನೆ ಮುಂಭಾಗದಿಂದ ಹೊರಟವು. ಸಾಲು ಆನೆಗಳು ಜಯಮಾರ್ತಂಡ ದ್ವಾರದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡವು. ಯಾವುದೇ ತೊಂದರೆಯಾಗಿಲ್ಲ. ಈ ವರ್ಷ ತಾಂತ್ರಿಕವಾಗಿ ಕೆಲವು ಉಪಕರಣ ಬಳಸಿಕೊಂಡಿದ್ದು, ಮುಂದಿನ ವರ್ಷದಿಂದ ಅನುಕೂಲಕ್ಕೆ ಬರಲಿದೆ ಎಂದು ಹೇಳಿದರು.

ಸಾಮೂಹಿಕ ಪ್ರಯತ್ನ: ಸಿಎಫ್ ಡಾ.ಮಾಲತಿ ಪ್ರಿಯಾ ಮಾತನಾಡಿ, ಈ ದಸರೆಯಲ್ಲಿ ಗಜಪಡೆ ಅದ್ಭುತವಾಗಿ ಕೆಲಸ ಮಾಡಿದವು. ಡಿಸಿಎಫ್ ಸೌರಭ್, ಆನೆಗಳ ವೈದ್ಯ ಡಾ.ಮುಜೀಬ್, ಅಕ್ರಮ್, ಅಭಿಮನ್ಯು ಆನೆ, ಮಾವುತ ವಸಂತ ಎಲ್ಲರೂ ತಂಡವಾಗಿ ಕೆಲಸ ಮಾಡಿದರು. ಯಾವುದೇ ಒತ್ತಡವಿಲ್ಲದೇ ನಿರಾತಂಕವಾಗಿ ದಸರಾ ಪೂರ್ಣಗೊಳಿಸಿದ್ದೇವೆ. ಪ್ರತಿ ದಸರೆಯಲ್ಲೂ ಸವಾಲುಗಳಿರುತ್ತವೆ. ಈ ಬಾರಿ ಐದು ಹೊಸ ಆನೆಗಳನ್ನು ಕರೆತಂದಿದ್ದೆವು. 4ನೇ ಬಾರಿ ಅಂಬಾರಿ ಹೊತ್ತ ಅಭಿಮನ್ಯು ಆನೆಯು ಸಾವಧಾನ ಮತ್ತು ಶಾಂತಿಯುತವಾಗಿತ್ತು. ಯಾವುದೇ ಕೊರತೆಯಾಗದಂತೆ ಎಲ್ಲರೂ ಸಂಪೂರ್ಣ ಸಹಕಾರ ನೀಡಿದ್ದಾರೆ ಎಂದರು.

ಮೇಲುಕೋಟೆಯಲ್ಲಿ ವಿಜೃಂಭಣೆಯ ವಿಜಯದಶಮಿ ಉತ್ಸವ



ಮೇಲುಕೋಟೆ, ಅ.25– ಭಕ್ತರ ಇಷ್ಟಾರ್ಥ ಕರುಣಿಸಲು ಧರೆಗಿಳಿದ ಚಕ್ರವರ್ತಿಯಂತೆ ರಾಜಾಲಂಕಾರದಲ್ಲಿ ಕಂಗೊಳಿಸಿದ ಮೈಸೂರು ಯದುವಂಶದ ಅದಿದೈವ ಮೇಲುಕೋಟೆ ಶ್ರೀಚೆಲುವನಾರಾಯಣ ಸ್ವಾಮಿಯ ವಿಜಯದಶಮಿ ಉತ್ಸವ ಮಂಗಳವಾರ ವೈಭವದಿಂದ ನೆರವೇರಿತು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಸಹಸ್ರಾರು ಭಕ್ತರು ಉತ್ಸವದಲ್ಲಿ ಭಾಗಿಯಾಗಿದ್ದರು.

ಸಂಜೆ 5–30ಕ್ಕೆ ಚೆಲುವನಾರಾಯಣ ಸ್ವಾಮಿ ಅಶ್ವವಾಹನ ಆರಂಭವಾಗಿ ಬನ್ನಿ ಮಂಟಪಕ್ಕೆ ತೆರಳಿತು. ಅಲ್ಲಿ ಬನ್ನೀ ವೃಕ್ಷಕ್ಕೆ ವಿಶೇಷಪೂಜೆ ಮಾಡಿ, ಅಷ್ಟ ದಿಕ್ಕುಗಳಿಗೂ ಬಾಣ ಪ್ರಯೋಗ ಮಾಡಿ ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಲಾಯಿತು. ಭಕ್ತರು ಬನ್ನಿ ಪ್ರಸಾದ ಸ್ವೀಕರಿಸಿದ ನಂತರ ಸ್ವಾಮಿಯ ವಿಜಯೋತ್ಸವ ಮೆರವಣಿಗೆ ಬ್ಯಾಂಡ್ ಬಜಂತ್ರಿಯೊಂದಿಗೆ ಅಂಗಡಿ ಬೀದಿ ವೃತ್ತ ತಲುಪಿತು. ಈ ವೇಳೆ ಶ್ವೇತವಸ್ತ್ರಧಾರಿಯಾಗಿ ದೊಡ್ಡ ಶೇಷವಾಹನದಲ್ಲಿ ವಿರಾಜಮಾನಳಾದ ಮಹಾಲಕ್ಷ್ಮಿ ಕಲ್ಯಾಣನಾಯಕಿ ಎದುರುಗೊಂಡು ಸ್ವಾಮಿಯನ್ನು ಭವ್ಯವಾಗಿ ಸ್ವಾಗತಿಸುವ ಸಂಪ್ರದಾಯ ನೆರವೇರಿಸಲಾಯಿತು. ರಾತ್ರಿ 7.30ರ ವೇಳೆಗೆ ಚೆಲುವ ನಾರಾಯಣನ ಅಶ್ವವಾಹನ ಮತ್ತು ಕಲ್ಯಾಣನಾಯಕಿಯ ಶೇಷ ವಾಹನೋತ್ಸವದ ಎದುರುಸೇವೆಯು ಮೆರವಣಿಗೆ ಚತುರ್ವೀದಿಗಳಲ್ಲಿ ನೆರವೇರಿ, ರಾತ್ರಿ 8 ಗಂಟೆಗೆ ವಿಜಯದಶಮಿ ಉತ್ಸವದ ಕಾರ್ಯಕ್ರಮಗಳು ಮುಕ್ತಾಯವಾದವು.

ಇದೇ ಪ್ರಥಮ ಸಲ ಶಾಸಕ ದರ್ಶನ್ ಪುಟ್ಟಣ್ಣಯ್ಯ ಆಸಕ್ತಿ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜುರವರ ಮಾರ್ಗದರ್ಶನ ಮತ್ತು ದರ್ಶನ್ ಟೀಂ ಮುಖ್ಯಸ್ಥೆ ಡಾ.ಪ್ರೀತಿ ಮಹದೇವ್ ಪರಿಶ್ರಮದಲ್ಲಿ ದೇವಾಲಯದ ರಾಜಗೋಪುರ ಹಾಗೂ ರಾಜಬೀದಿಗೆ ದೀಪಾಲಂಕಾರ ಮಾಡಿ, ಸ್ಥಾನೀಕಂ ನಾಗರಾಜ ಅಯ್ಯಂಗಾರ್ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ 4 ದಿನ ನವರಾತ್ರಿ–ಸಂಗೀತ ನೃತ್ಯೋತ್ಸವ



ಸೇವೆ ಹಾಗೂ ರಂಗವಲ್ಲಿ, ಚಿತ್ರಕಲಾ ಸ್ಪರ್ಧೆ ಏರ್ಪಡಿಸಿದ್ದು ಉತ್ಸವಕ್ಕೆ ಮತ್ತಷ್ಟು ಉತ್ಸಾಹ ತುಂಬಿದಂತಿತ್ತು.

ವಿಜಯದಶಮಿಯಂದು ಶಂಖ, ಚಕ್ರ, ಗದಾ, ಪದ್ಮ ಕತ್ತಿ, ಬಿಲ್ಲುಬಾಣ ಮುಂತಾದ ದಿವ್ಯಾಯುಧಗಳನ್ನು ಧರಿಸಿ ಮೈಸೂರು ಪೇಟ, ಜರತಾರಿ ರೇಷ್ಮೆ ಪಂಚೆಯೊಂದಿಗೆ ಭವ್ಯವಾಗಿ ಅಲಂಕೃತನಾದ ಮೂಲ ಮೂರ್ತಿ ಚೆಲುವತಿರುನಾರಾಯಣಸ್ವಾಮಿ ದಿವ್ಯಸುಂದರ ರೂಪವನ್ನು, ಜಯ ಘೋಷ ಹಾಕುತ್ತಾ ಭಕ್ತರು ಕಣ್ತುಂಬಿಕೊಂಡರು. ಬೆಳಗ್ಗೆಯಿಂದಲೇ ಸಹಸ್ರಾರು ಸಂಖ್ಯೆಯ ಭಕ್ತರು ತಂಡೋಪತಂಡವಾಗಿ ದೇವಾಲಯಗಳಿಗೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ಚೆಲುವನ ದರ್ಶನ ನಡೆಯುತ್ತಿದ್ದ ದೃಶ್ಯ ಇಡೀ ದಿನ ಕಂಡು ಬಂತು. ಮಹಾ ವಿಷ್ಣುವಿನ ಅವತಾರ ರೂಪಿಯಾದ ಬೆಟ್ಟದೊಡೆಯ ಕುಂತ ಸಿಂಗ್ರಿ, ಯೋಗ ನರಸಿಂಹಸ್ವಾಮಿಗೂ ಪಾರಂಪರಿಕವಾದ ಮಹಾರಾಜರ ಅಲಂಕಾರ ಮಾಡಲಾಯಿತು.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಎಸ್.ಮಹೇಶ್, ಪಾರುಪತ್ತೇದಾರ ಸ್ಥಾನಾಚಾರ್ಯ ಶ್ರೀನಿವಾಸ ನರಸಿಂಹನ್ ಗುರೂಜಿ, ಎಂ.ಎನ್ ಪಾರ್ಥಸಾರಥಿ, ಉತ್ಸವಕ್ಕೆ ಬೇಕಾದ ಸಿದ್ಧತೆ ಮಾಡಿದ್ದರೆ, ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದಪ್ಪ ಉತ್ಸವಕ್ಕೆ ಪೊಲೀಸ್ ಭದ್ರತೆ ನೀಡಿದ್ದರು.

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



ಮಂಡ್ಯ,ಅ.25– ಅನಧಿಕೃತ ಲೋಡ್ ಶೆಡ್ಡಿಂಗ್ ಜಾರಿಗೊಳಿಸಿ ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸದ ರಾಜ್ಯ ಸರ್ಕಾರದ ವಿರುದ್ಧ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ನಗರದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಇಂಜಿನಿಯರ್ ಕಚೇರಿ ಎದುರು ಬುಧವಾರ ರೈತರು ಧರಣಿ ನಡೆಸಿದರು.

ಮಳೆ ಕೊರತೆ ಹಾಗೂ ಬರ ಪರಿಸ್ಥಿತಿಯಿಂದ ಈಗಾಗಲೇ ರೈತರ ಬದುಕು ಸಂಕಷ್ಟದಲ್ಲಿದ್ದು ಸರ್ಕಾರ ಅನಿಯಮಿತವಾಗಿ ವಿದ್ಯುತ್ ಕಡಿತ ಮಾಡುತ್ತಿರುವುದರಿಂದ ಬೆಳೆದು ನಿಂತಿರುವ ಬೆಳೆಗಳಿಗೆ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ, ರಾತ್ರಿ ವೇಳೆ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ರೈತರು ಜಮೀನಿನತ್ತ ಹೋಗಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕಬ್ಬು ಮತ್ತು ಭತ್ತದ ಬೆಳೆ ಒಣಗುತ್ತಿವೆ ಎಂದರು.

ಪ್ರತಿನಿತ್ಯ ಏಳು ತಾಸು ತ್ರೀ ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುತ್ತಿತ್ತು, ಆದರೆ ಕಾಂಗ್ರೆಸ್ ಸರ್ಕಾರ ಐದು ತಾಸಿಗೆ ಇಳಿಕೆ ಮಾಡಿದೆ. ಹಗಲು ಸರಬರಾಜು ಮಾಡುತ್ತಿದ್ದ ವಿದ್ಯುತ್ ಅನ್ನು ರಾತ್ರಿ ಪಾಳಿಗೆ ವರ್ಗಾಯಿಸಿದೆ ಇದರಿಂದ ರೈತರಿಗೆ ಮತ್ತಷ್ಟು ತೊಂದರೆಯಾಗಿದೆ, ಪ್ರತಿನಿತ್ಯ ಎರಡು ತಾಸು ಕೂಡ ವಿದ್ಯುತ್ ನೀಡುತ್ತಿಲ್ಲ ಎಂದು ಆರೋಪಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿನಿತ್ಯ ಹತ್ತು ತಾಸು ತ್ರೀ ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು, ಹಗಲು ಹೊತ್ತು ಹೆಚ್ಚಿನ ತಾಸು ವಿದ್ಯುತ್ ಸರಬರಾಜು ಮಾಡಬೇಕು ಎಂದು ಒತ್ತಾಯಿಸಿದರು.ರೈತ ಮುಖಂಡರಾದ ಶಿವಳ್ಳಿ ಚಂದ್ರು, ಜವರೇಗೌಡ, ಚಿಕ್ಕ ಮಂಡ್ಯ ನಾಗರಾಜು, ರಾಮಲಿಂಗೇಗೌಡ, ಸಣ್ಣಪ್ಪ, ಕರುನಾಡ ಸೇವಕರು ಸಂಘಟನೆಯ ಎಂ.ಬಿ.ನಾಗಣ್ಣಗೌಡ ಭಾಗವಹಿಸಿದ್ದರು.

ಕಾವೇರಿ ಹೋರಾಟಕ್ಕೆ ಅಲ್ಪಸಂಖ್ಯಾತ ಮುಖಂಡರ ಸಾಥ್



ಮಂಡ್ಯ,ಅ.25– ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ಕಾವೇರಿ ನೀರಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಹಮದ್ ಜಫ್ರುಲ್ಲಾ ಖಾನ್ ಸೇರಿದಂತೆ ಹಲವು ಮುಸ್ಲಿಂ ಸಮುದಾಯದ ಮುಖಂಡರು ಬುಧವಾರ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ನಿರಂತರ ಧರಣಿಯಲ್ಲಿ ಜೆಡಿಎಸ್ ಪಕ್ಷದ ಅಲ್ಪಸಂಖ್ಯಾತ ಮುಖಂಡರು, ಸ್ತ್ರೀ ಶಕ್ತಿ ಮಹಿಳಾ ಸಂಘಟನೆಗಳ ಕಾರ್ಯಕರ್ತೆಯರು ಭಾಗಿಯಾಗಿ ಬೆಂಬಲ ಸೂಚಿಸಿ, ಬಳಿಕ ನೀರು ಬಿಡುಗಡೆ ಖಂಡಿಸಿ ನಡೆದ ಸಾಂಕೇತಿಕ ರಸ್ತೆತಡೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹಮದ್ ಜಫ್ರುಲ್ಲಾಖಾನ್, ಕಾವೇರಿ ಸಮಸ್ಯೆ ನಿನ್ನೆ ಮೊನ್ನೆಯ ಸಮಸ್ಯೆಯಲ್ಲ. ಯಾವುದೇ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರು, ಕಾವೇರಿ ಸಮಸ್ಯೆಯನ್ನು ಬಗೆಹರಿಸುವಲ್ಲಿ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ಮತ್ತು ಮದ್ರಾಸ್ ಸರ್ಕಾರಗಳ ನಡುವೆ ಆದ ಒಪ್ಪಂದವನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಲಾಗಿದೆ. ಹಾಗಾಗಿ ಇಂದಿನ ಜನಸಂಖ್ಯೆ ಮತ್ತು ನೀರಿನ ಅವಶ್ಯಕತೆ ಬಗ್ಗೆ ನ್ಯಾಯಾಲಯ ಸುಪ್ರೀಂಕೋರ್ಟಿಗೆ ಮನವರಿಕೆ ಮಾಡಿಕೊಡಬೇಕು. ಕಾವೇರಿ ವಿಚಾರದ ಬಗ್ಗೆ ವಿಶೇಷ ಆಸಕ್ತಿ ತೋರಿಸಬೇಕು ಎಂದರು.

ರೈತರು ಮತ್ತು ಮುಸ್ಲಿಂ ಸಮುದಾಯ ವ್ಯಾಪಾರ ವಹಿವಾಟಿನಲ್ಲಿ ಸಂಬಂಧ ಹೊಂದಿದ್ದಾರೆ. ಭತ್ತ, ಬೆಲ್ಲ ಮಾರಾಟ ಮಾಡುವುದರಿಂದ ಹಿಡಿದು ಎತ್ತುಗಳಿಗೆ ಲಾಳ ಹೊಡೆಯುವುದರಿಂದಲೂ ಸಂಬಂಧ ಹೊಂದಿದ್ದಾರೆ ಹಾಗಾಗಿ ಮುಸ್ಲಿಂ ಸಮುದಾಯದವರು ರೈತರೊಂದಿಗೆ ಕಾವೇರಿ ಚಳವಳಿಯಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಕಾವೇರಿ ಹೋರಾಟಕ್ಕೆ ಜಫ್ರುಲ್ಲಾ ಖಾನ್ 50 ಸಾವಿರ ರೂ. ದೇಣಿಗೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆಬೋರಯ್ಯ, ಕನ್ನಡಸೇನೆ ಮಂಜು ನಾಥ್, ದಸಂಸ ಕೃಷ್ಣ, ಇಂಡುವಾಳು ಬಸವರಾಜು, ಜೆಡಿಎಸ್ ನಗರಸಭಾ ಸದಸ್ಯರಾದ ನಾಗೇಶ್, ಮೀನಾಕ್ಷಿ ಪುಟ್ಟಸ್ವಾಮಿ, ಮನ್‌ಮುಲ್ ಮಾಜಿ ನಿರ್ದೇಶಕಿ ನೀನಾ ಪಟೇಲ್, ಮಾಜಿ ಸದಸ್ಯ ಮುಜಾಯಿದ್, ಅಲ್ಪಸಂಖ್ಯಾತ ಮುಖಂಡರಾದ ಮಹಮ್ಮದ್, ಅಫ್ರೋಜ್‌ಖಾನ್, ಅಫ್ಜಲ್, ಫೈರೋಜ್, ಮುಜಾಸಿರ್, ಸ್ತ್ರೀ ಶಕ್ತಿ ಸಂಘಟನೆಯ ಸುಜಾತ ಸಿದ್ದಯ್ಯ, ಅನುಪಮಾ, ಸೌಭಾಗ್ಯ, ಶಿವರತ್ನಮ್ಮ, ವೀಣಾ, ತಾಯಮ್ಮ, ಸುಶೀಲಮ್ಮ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಅ.25– ಚಿಕ್ಕ ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಅಕ್ಟೋಬರ್ 26 ರಂದು ಚಿಕ್ಕ ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಒಳಪಡುವ ನಗರ ಪ್ರದೇಶಗಳಾದ ಶಂಕರಪುರ , ಜೈನ ಸ್ಟ್ರೀಟ್, ಬೀಡಿ ಕಾಲೋನಿ, ಜಬರ್ ಸರ್ಕಲ್, ವಿನಾಯಕನಂದ ಬಡಾವಣೆ, ಗ್ರಾಮಾಂತರ ಪ್ರದೇಶಗಳಾದ ಗೋಪಾಲಪುರ, ಚಿಕ್ಕಮಂಡ್ಯ ಸಾತನೂರು, ಕೊಮ್ಮೇರಹಳ್ಳಿ, ಹುಲಿವಾನ, ಕೆ.ಗೌಡಗೆರೆ. ಹೆಚ್. ಮಲ್ಲಿಗೆರೆ, ಎಸ್.ಐ.ಕೋಡಿಹಳ್ಳಿ, ಹೆಚ್. ಕೋಡಿಹಳ್ಳಿ, ಸಂಪಹಳ್ಳಿ, ಗೊರವಾಲೆ, ಬಿ. ಹೊಸಹಳ್ಳಿ, ಬೀರಗೌಡನಹಳ್ಳಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾ ಗಲಿದೆ ಎಂದು ಮಂಡ್ಯ ವಿಭಾಗದ ಸೆಸ್ಕ್ ಪ್ರಕಟಣೆ ತಿಳಿಸಿದೆ.

ರಂಗಭೂಮಿ ಕಲಾವಿದ ನಂಜಪ್ಪಾಚಾರ್ ನಿಧನ

ಕೆ.ಆರ್.ಪೇಟೆ, ಅ.25– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ವಿಶ್ವಕರ್ಮ ಸಮಾಜದ ಹಿರಿಯ ಮುಖಂಡರೂ ಆದ ರಂಗಭೂಮಿ ಕಲಾವಿದ ನಂಜಪ್ಪಾಚಾರ್ (82) ಅವರು



ಇಂದು ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನೆರವೇರಿತು.

ಇವರ ನಿಧನಕ್ಕೆ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಅಧ್ಯಕ್ಷ ಕೆಪಿ.ನಂಜುಂಡಿ, ತಾಲೂಕು ವಿಶ್ವಕರ್ಮ ಸಮಾಜದ ಹಿರಿಯ ಮುಖಂಡ ಈಶ್ವರಾಚಾರ್, ತಾಲೂಕು ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಕುಮಾರಸ್ವಾಮಿ, ತಾಲೂಕು ಜೈಭುವನೇಶ್ವರಿ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಡಾ.ಎನ್.ತಮ್ಮಯ್ಯ, ಉಪಾಧ್ಯಕ್ಷ ಚಟ್ಟೇನಹಳ್ಳಿ ನಾಗರಾಜು, ಹೆಚ್.ಕೆ.ಸಿದ್ದರಾಜು, ಅಗ್ರಹಾರಬಾಚಹಳ್ಳಿ ಗ್ರಾ.ಪಂ.ಅಧ್ಯಕ್ಷ ಎ.ಸಿ.ದಿವಿಕುಮಾರ್, ಉಪಾಧ್ಯಕ್ಷೆ ಸುನಿತಾ ದ್ಯಾವಯ್ಯ, ಪಿಡಿಓ ಹರ್ಷವರ್ಧನ್, ಗ್ರಾ.ಪಂ.ಸದಸ್ಯ ಆರ್.ಶ್ರೀನಿವಾಸ್ ಹಾಗೂ ಅಗ್ರಹಾರಬಾಚಹಳ್ಳಿ ಗ್ರಾಮದ ಮುಖಂಡರು ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಭಯೋತ್ಪಾದನೆ ನಿಗ್ರಹ ಉನ್ನತ ಮಟ್ಟದ ಸಲಹಾ ಸಮಿತಿಗೆ ಸಂಸದೆ ಸುಮಲತಾ ನೇಮಕ

ಮಂಡ್ಯ, ಅ.25– ಭಯೋತ್ಪಾದನೆ ನಿಗ್ರಹಿಸುವ ಉನ್ನತ ಮಟ್ಟದ ಸಲಹಾ ಸಮಿತಿಯ ಸದಸ್ಯರಾಗಿ ಮಂಡ್ಯ ಸಂಸದೆ ಸುಮಲತಾರನ್ನು ನೇಮಕ ಮಾಡಲಾಗಿದೆ.

ಈ ಸಮಿತಿಯು ಭಯೋತ್ಪಾದನೆ ನಿಗ್ರಹ ಪ್ರಯತ್ನಗಳಿಗೆ ಸಂಬಂಧಿಸಿದ ಸಂಸದೀಯ ಚಟುವಟಿಕೆಗಳಿಗೆ ಜಾಗತಿಕ ಕೇಂದ್ರ ಬಿಂದುವಾಗಿ ಮತ್ತು ವಿವಿಧ ದೇಶಗಳ ಸಂಸತ್ತಿನ ಸದಸ್ಯರಿಂದ ಕೂಡಿದೆ. ಇದರ ಜೊತೆಗೆ, ಹವಾಮಾನ ಬದಲಾವಣೆ, ಸಮಾಜದಲ್ಲಿ ಮತ್ತು ಸಂಸತ್ತಿನಲ್ಲಿ ಮಹಿಳಾ ಸಬಲೀಕರಣ ಮತ್ತು ಅನಾಥ ಮಕ್ಕಳ ಕಳ್ಳಸಾಗಣೆ ತಡೆಗಟ್ಟುವಿಕೆ ಸಂಬಂಧದ ಚರ್ಚೆಗಳಲ್ಲಿ ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ.

ಸುಮಲತಾ ಈ ಉನ್ನತ ಮಟ್ಟದ ಸಮಿತಿಗೆ ನಾಮನಿರ್ದೇಶನಗೊಂಡ ಭಾರತೀಯ ಸಂಸತ್ತಿನ ಮೊದಲ ಸದಸ್ಯರಾಗಿದ್ದು, ಐದು ವರ್ಷಗಳ ಅವಧಿಗೆ ಸದಸ್ಯರಾಗಿರುತ್ತಾರೆ. ಭಾರತದ ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಮತ್ತು 'ವಸುದೈವ ಕುಟುಂಬಕಂ' ವಿಶ್ವಾದ್ಯಂತ ಪ್ರತಿಧ್ವನಿಸುತ್ತಿರುವ ಈ ಸಮಯದಲ್ಲಿ ನೇಮಕವಾಗಿದೆ ಎಂದು ಸುಮಲತಾ ಅಂಬರೀಷ್ ಸಂತಸ ವ್ಯಕ್ತಪಡಿಸಿದ್ದಾರೆ.

ಅ.23ರಿಂದ 27ರವರೆಗೆ ಅಂಗೋಲಾದ ಲುವಾಂಡಾದಲ್ಲಿ ನಡೆಯುತ್ತಿರುವ ಇಂಟರ್ ಪಾರ್ಲಿಮೆಂಟರಿ



ಅಂಗೋಲಾದ ಲುವಾಂಡಾದಲ್ಲಿ ನಡೆದ ಇಂಟರ್ ಪಾರ್ಲಿಮೆಂಟರಿ ಯೂನಿಯನ್ ಶೃಂಗಸಭೆಯಲ್ಲಿ ಸಂಸದೆ ಸುಮಲತಾ ಮಾತನಾಡಿದರು.

ಯೂನಿಯನ್ ಶೃಂಗಸಭೆಗೆ ಸ್ಪೀಕರ್ ಜೊತೆಗಿನ ನಿಯೋಗದ ಭಾಗವಾಗಿ ಇವರು ಭಾಗವಹಿಸಿದ್ದಾರೆ.

ಶೃಂಗಸಭೆಯ ಭಾಗವಾಗಿ ಹಲವಾರು ಇತರ ದೇಶಗಳ ಸಂಸದರೊಂದಿಗೆ ಹಲವಾರು ವಿಷಯಗಳ ಕುರಿತು ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದು, ಜಾಗತಿಕ ಸಂಸದರ ನಡುವಿನ ಇಂತಹ ಸಂವಾದವು ಜಗತ್ತು ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ ಮತ್ತು ಪ್ರಧಾನಮಂತ್ರಿಗಳ ಕನಸಿನ ಯೋಜನೆಯಾದ ವಿಕ್ಷಿತ್ ಭಾರತ್ 2047ರ ದೃಷ್ಟಿಕೋನವನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ ಎಂದು ಅವರು ತಿಳಿಸಿದ್ದಾರೆ.

ಬಂಡೀಪುರ ಬಳಿ ಉರುಳಿ ಬಿದ್ದ ಬಸ್





ಪ.ಬಂಗಾಳದ 25 ಮಂದಿಗೆ ಗಾಯ

ಚಾಮರಾಜನಗರ, ಅ. 25– ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಉರುಳಿ ಬಿದ್ದ ಪರಿಣಾಮ ಪಶ್ಚಿಮ ಬಂಗಾಳದ 25 ಪ್ರಯಾಣಿಕರು ಗಾಯಗೊಂಡ ಘಟನೆ ಬಂಡೀಪುರ ಬಳಿ ಸಂಭವಿಸಿದೆ.

ತಮಿಳುನಾಡಿನ ಊಟಿಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಈ ಬಸ್‌ನಲ್ಲಿ 72 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಬಂಡೀಪುರ ಬಳಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆಬದಿಗೆ ಬಸ್ ಉರುಳಿಬಿದ್ದ ಪರಿಣಾಮ 25 ಮಂದಿ ಪ್ರಯಾಣಿಕರು ಗಾಯಗೊಂಡಿದ್ದರೆ, ಉಳಿದವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. 25 ಮಂದಿಯನ್ನೂ ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದವರಿಗೆ ಜಿಲ್ಲಾಡಳಿತದಿಂದ ಗುಂಡ್ಲುಪೇಟೆಯ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಊಟ ಹಾಗೂ ವಸತಿ ಕಲ್ಪಿಸಲಾಗಿದ್ದು, ಇವರನ್ನು ಸುರಕ್ಷಿತವಾಗಿ ಕಳುಹಿಸಲು ಜಿಲ್ಲಾಡಳಿತವು ಪಶ್ಚಿಮ ಬಂಗಾಳ ಸರ್ಕಾರದೊಂದಿಗೆ ಸಂಪರ್ಕದಲ್ಲಿದೆ.

ಚಾಮರಾಜನಗರದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಭೇಟಿ ಮಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಆರೋಗ್ಯ ವಿಚಾರಿಸಿದ್ದಲ್ಲದೇ, ಗಾಯಾಳುಗಳಿಗೆ ನೀಡಲಾಗುತ್ತಿರುವ ಚಿಕಿತ್ಸೆ ಸಂಬಂಧ ವೈದ್ಯರೊಂದಿಗೆ ಚರ್ಚೆ ನಡೆಸಿದರು.

ಮುಂದುವರೆದ 'ಕಾವೇರಿ' ಪ್ರತಿಭಟನೆ



ಚಾಮರಾಜನಗರ, ಅ.25 – ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 43 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ಒಣಸೋಗು ಪ್ರದರ್ಶಿಸಿ ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಖ್ಯ ದ್ವಾರದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಒಣಸೋಗು ಹಿಡಿದು ಪ್ರದರ್ಶಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪಣ್ಯದಹುಂಡಿ ರಾಜು, ಮಹೇಶ್ ಗೌಡ, ಲಿಂಗರಾಜು, ತಾಂಡವಮೂರ್ತಿ, ಗು. ಪುರುಷೋತ್ತಮ್, ವೀರಭದ್ರ, ಮೂಡ್ಲಪುರ ಪ್ರಕಾಶ್, ಮಿಮಿಕ್ರಿ ಮಲ್ಲಣ್ಣ ನಂಜುಂಡಸ್ವಾಮಿ ಭಾಗವಹಿಸಿದ್ದರು.

ಡಿ.9, ಜಿಲ್ಲೆಯಾದ್ಯಂತ ಮೆಗಾ ಲೋಕ್ ಅದಾಲತ್

ಚಾಮರಾಜನಗರ, ಅ.25– ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದನ್ವಯ ಡಿ.9ರಂದು ಚಾಮರಾಜನಗರ ಜಿಲ್ಲೆಯಾದ್ಯಂತ ಲೋಕ್ ಅದಾಲತ್ ಅನ್ನು ಏರ್ಪಡಿಸಲಾಗಿದೆ.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲದ ನ್ಯಾಯಾಲಯಗಳಲ್ಲಿ ಬೈಟೆಕ್‌ಗಳನ್ನು ಏರ್ಪಡಿಸಿ, ಸಂಧಾನಕಾರರನ್ನು ನೇಮಿಸಿ ಲೋಕ್ ಅದಾಲತ್‌ನ್ನು ಆಯಾ ನ್ಯಾಯಾಲಯಗಳಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಮೆಗಾ ಲೋಕ್ ಅದಾಲತ್‌ಗೆ ಸಂಬಂಧಿಸಿದ ವಕೀಲರು, ಕಕ್ಷಿದಾರರು ಸಹಕಾರ ನೀಡಿ ಸಂಧಾನಕಾರರು ನೀಡುವ ಸಲಹೆಗಳನ್ನು ಆಲಿಸಿ, ಪರಸ್ಪರ ಒಪ್ಪಿಗೆಯಾದಲ್ಲಿ ಪ್ರಕರಣವನ್ನು ಲೋಕ್ ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಬಹುದು. ಇದರಿಂದ ಕಕ್ಷಿದಾರರ ಸಮಯ ಮತ್ತು ಹಣ ಉಳಿತಾಯವಾಗಲಿದೆ. ಅಲ್ಲದೇ ಪಕ್ಷಕಾರರ ನಡುವೆ ಬಾಂಧವ್ಯ ವೃದ್ಧಿಸುತ್ತದೆ.

ಮಾಹಿತಿಗಾಗಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಸಹಾಯವಾಣಿ ಸಂ–15100, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಹಾಯವಾಣಿ ಸಂಖ್ಯೆ–1800–425–90900, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಚಾಮರಾಜನಗರ ಸಹಾಯವಾಣಿ ಸಂಖ್ಯೆ–08226–226022, ಯಳಂದೂರು ತಾಲೂಕು ಕಾನೂನು ಸೇವಾ ಸಮಿತಿ ಸಹಾಯವಾಣಿ ಸಂಖ್ಯೆ–08226–240229, ಕೊಳ್ಳೇಗಾಲ ತಾಲ್ಲೂಕು ಕಾನೂನು ಸೇವಾ ಸಮಿತಿ ಸಹಾಯವಾಣಿ ಸಂಖ್ಯೆ–08224–256788, ಗುಂಡ್ಲುಪೇಟೆ ತಾಲೂಕು ಕಾನೂನು ಸೇವಾ ಸಮಿತಿ ಸಹಾಯವಾಣಿ ಸಂಖ್ಯೆ–08229–223279 ಅಥವಾ ಇ-ಮೇಲ್ dlsachnagar2017@gmail.com ಹಾಗೂ dlsachnagar2021@gmail.com ಪ್ರಾಧಿಕಾರದ Face Book ಖಾತೆ : Dlsa Chamarajanagara ಸಂಪರ್ಕಿಸುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಧರ. ಎಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನನ್ನ ಮಣ್ಣು-ನನ್ನ ದೇಶ' ಅಮೃತ ಕಳಶ ಯಾತ್ರೆಗೆ ಶುಭ ಕೋರಿದ ಡಿಸಿ

ಚಾಮರಾಜನಗರ, ಅ.25– ನನ್ನ ಮಣ್ಣು ನನ್ನ ದೇಶ ಕುರಿತ ಅಮೃತ ಕಳಶ ಯಾತ್ರೆಯ ಅಂಗವಾಗಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಜಿಲ್ಲೆಯ ಐದು ತಾಲೂಕುಗಳ ಪ್ರತಿನಿಧಿಗಳಿಗೆ ಅಮೃತ ಕಳಶ ನೀಡುವ ಮೂಲಕ ಶುಭ ಕೋರಿದರು.



ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ನನ್ನ ಮಣ್ಣು ನನ್ನ ದೇಶ ಅಮೃತ ಕಳಶ ಯಾತ್ರೆಯ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಅಮೃತ ಕಳಸಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಯಾತ್ರೆಗೆ ಚಾಲನೆ ನೀಡಿದರು.

ಇದೇ ವೇಳೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸರ್ವರಿಗೂ ಪಂಚ ಪ್ರಾಣ್ ಬೋಧಿಸಿದರು. ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಕಿರಣ್ ಪಡ್ನೇಕರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನನ್ನ ಮಣ್ಣು ನನ್ನ ದೇಶ ಅಮೃತ ಕಳಶ ಯಾತ್ರೆಯ ಕಾರ್ಯಕ್ರಮವು ದೇಶದ ಸ್ವಾತಂತ್ರ, ಸಮಾನತೆ, ವಿವಿಧತೆಯಲ್ಲಿ ಏಕತೆ ಸಾರುವ ಭಾರತ ಸರ್ಕಾರದ ವಿಶಿಷ್ಟ, ವಿನೂತನ ಹಾಗೂ ವಿಭಿನ್ನ ಕಾರ್ಯಕ್ರಮವಾಗಿದೆ. ಯಾತ್ರೆಗಾಗಿ ಜಿಲ್ಲೆಯ 5 ತಾಲೂಕುಗಳಲ್ಲಿನ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಿಂದ ಮಣ್ಣನ್ನು ಸಂಗ್ರಹಣೆ ಮಾಡಲಾಗಿದೆ ಎಂದರು.

ಪ್ರತಿ ತಾಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮಣ್ಣನ್ನು ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಣ್ಣನ್ನು ಅಮೃತ ಕಳಸ ಯಾತ್ರೆ ಮೂಲಕ ದೆಹಲಿಗೆ ತಲುಪಿಸಲಾಗುವುದು. ಆಜಾದಿ ಕಾ ಅಮೃತ ಮಹೋತ್ಸವದಲ್ಲಿ ಅಮೃತ ಕಳಶ ಯಾತ್ರೆಯ ಮೂಲಕ ದೇಶದ ಎಲ್ಲಾ ಭಾಗದ ಮಣ್ಣುಗಳನ್ನು ಸಂಗ್ರಹಿಸಿ ದೆಹಲಿಯ ಇಂಡಿಯಾ ಗೇಟ್‌ನಲ್ಲಿ ಸ್ಮಾರಕ ನಿರ್ಮಿಸಲಾಗುತ್ತಿದೆ. ಅಲ್ಲಿಗೆ ಜಿಲ್ಲೆಯ 5 ತಾಲೂಕುಗಳ ಪ್ರತಿನಿಧಿಗಳು ಯಾತ್ರೆ ಸಾಗಿ ಮಣ್ಣನ್ನು ಸಮರ್ಪಿಸಲಿದ್ದಾರೆ ಎಂದು ಕಿರಣ್ ಪಡ್ನೇಕರ್ ತಿಳಿಸಿದರು. ಬಳಿಕ ಅಮೃತ ಕಳಶ ಯಾತ್ರೆಯು ಜಿಲ್ಲಾ ಪಂಚಾಯಿತಿ ಸಭಾಂಗಣದಿಂದ ಸಾಗಿ ಜಿಲ್ಲಾಡಳಿತ ಭವನದ ಆವರಣದ ಮುಖ್ಯ ದ್ವಾರದಲ್ಲಿ ಮುಕ್ತಾಯಗೊಂಡಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ನೆಹರು ಯುವ ಕೇಂದ್ರದ ಅಧಿಕಾರಿಗಳು, ವಿವಿಧ ಸ್ವಸಹಾಯ ಗುಂಪುಗಳ ಸದಸ್ಯರು, ಎನ್.ಆರ್.ಎಲ್.ಎಂ, ಎಂ.ಬಿ.ಕೆ, ಎಲ್.ಸಿ.ಆರ್.ಪಿ, ಕೃಷಿ ಸಖಿ, ಪಶು ಸಖಿ ವ್ಯಾಪ್ತಿಗೆ ಒಳಪಡುವ ಸಿಬ್ಬಂದಿಗಳು ಯಾತ್ರೆಯಲ್ಲಿ ಭಾಗಿಯಾಗಿದ್ದರು.

ಆದಿಜಾಂಬವ ಸಮುದಾಯದವರಿಗೆ ಸೂಕ್ತ ಸ್ಥಾನಮಾನಕ್ಕೆ ಆಗ್ರಹ



ಚಾಮರಾಜನಗರ, ಅ.25– ಕಳೆದ 25 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಪ್ರಾಮಾಣಿಕವಾಗಿ ಪಕ್ಷದ ಅಭಿವೃದ್ಧಿಗೆ ಶ್ರಮಿಸಿಕೊಂಡು ಬಂದಿರುವ ಜಿಲ್ಲೆಯ ಆದಿಜಾಂಬವ ಸಮುದಾಯದ ಮುಖಂಡರುಗಳನ್ನು ಪಕ್ಷದ ವರಿಷ್ಠರು ಪರಿಗಣಿಸಿ ನಿಗಮ ಮಂಡಳಿ, ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಅವಕಾಶ ಕಲ್ಪಿಸಿಕೊಡುವ ಕೆಲಸ ಆಗಬೇಕು ಎಂದು ಸಭೆಯಲ್ಲಿ ಮುಖಂಡರು ಚರ್ಚಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎಂ.ಶಿವಮೂರ್ತಿ ಅವರ ನೇತೃತ್ವದಲ್ಲಿ ನಡೆದ ಜಿಲ್ಲಾ ಆದಿಜಾಂಬವ ಸಮುದಾಯದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಆದಿಜಾಂಬವ ಕಾಂಗ್ರೆಸ್ ಮುಖಂಡರುಗಳಿಗೆ ಸರ್ಕಾರದ ನಿಗಮ ಮಂಡಳಿಗಳಲ್ಲಿ ಸೂಕ್ತಸ್ಥಾನ ದೊರೆತಿಲ್ಲ. ಪ್ರತಿ ಚುನಾವಣೆಯಲ್ಲಿ ಆದಿಜಾಂಬವ ಮುಖಂಡರು ಪಕ್ಷದ ಗೆಲುವಿಗೆ ಶ್ರಮಿಸಿದ್ದಾರೆ. ಸರ್ಕಾರ ಸಮುದಾಯವನ್ನು ಪರಿಗಣಿಸಿ ಸೂಕ್ತಸ್ಥಾನ ಮಾನ ನೀಡುವ ಮೂಲಕ ಸಮುದಾಯ ಅಭಿವೃದ್ಧಿಗೆ ಒತ್ತು ನೀಡಿ ಮುಂಬರುವ ಚುನಾವಣೆಯಲ್ಲಿ ಸಮುದಾಯದ ಮತಗಳು ಕಾಂಗ್ರೆಸ್‌ಗೆ ಹೆಚ್ಚು ಬರುವಂತೆ ಮಾಡಬೇಕು. ಹಾಗಾಗಿ ಮುಂದಿನ ದಿನಗಳಲ್ಲಿ ಸಮುದಾಯದ ಮುಖಂಡರುಗಳಿಗೆ ಸೂಕ್ತಸ್ಥಾನಮಾನ ನೀಡುವ ಮೂಲಕ ಪಕ್ಷದ ಬೆಳವಣಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಕೆಲಸ ಮಾಡುವಂತಾಗಬೇಕು ಎಂದು ಸುದೀರ್ಘವಾಗಿ ಚರ್ಚಿಸಲಾಯಿತು.

ಜಿಲ್ಲೆಯ ಸಮುದಾಯದ ಅಭಿವೃದ್ಧಿ ಹಿತದೃಷ್ಟಿಯಿಂದ ಸಮುದಾಯದ ಮುಖಂಡರುಗಳಿಗೆ ಪಕ್ಷ ಮುಂದಿನ ದಿನಗಳಲ್ಲಿ ನಿಗಮ ಮಂಡಳಿಗಳಲ್ಲಿ, ಜಿ.ಪಂ., ತಾ.ಪಂ, ನಗರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಅವಕಾಶ ಮಾಡಿಕೊಡುವ ಕೆಲಸ ಆಗಬೇಕಿದೆ ಎಂದರು.

ಸಭೆಯಲ್ಲಿ ಹರವೆ ಮಹದೇವಯ್ಯ, ಉಗನೇದಹುಂಡಿ ರಾಚಯ್ಯ, ಶಿವಯ್ಯ, ಬಿ.ಲಿಂಗಯ್ಯ, ರಾಚಯ್ಯ, ಆರ್.ಕೆ.ಶಿವಕುಮಾರ್,ಕೊಳ್ಳೇಗಾಲ ಬಾಲರಾಜು, ನಂಜುಂಡಯ್ಯ, ಗ್ರಾ.ಪಂ.ಸದಸ್ಯ ಗೋವಿಂದಯ್ಯ, ಹನೂರು ಬೂದುಬಾಳು ಮಹದೇವು, ಪಾಳ್ಯ ರಾಚಪ್ಪ, ರಾಜಣ್ಣ, ಪಟ್ಟಣ್ಣ ಪಂಚಾಯಿತಿ ಸದಸ್ಯ ಸುದೇಶ್, ರಾಚಯ್ಯ, ಎಲ್ಲೇಮಾಳ ಮಹದೇವು, ಯಳಂದೂರು ನಾಗರಾಜು,ವ ಗುಂಡ್ಲುಪೇಟೆ ಸೋಮಶೇಖರ್, ಎಸ್ ಸಿ ಘಟಕದ ತಾಲೂಕು ಅಧ್ಯಕ್ಷ ಸಿದ್ದಯ್ಯ ಅಂಕಹಳ್ಳಿ, ವಕೀಲರಾದ ರಾಜೇಶ್, ಪುಟ್ಟಸ್ವಾಮಿ ಇತರರು ಭಾಗವಹಿಸಿದ್ದರು.

ಶ್ರೀ ಕಾಳಿಕಾಂಬ, ಬಸವೇಶ್ವರ ಸ್ವಾಮಿಯ ಅದ್ಧೂರಿ ಉತ್ಸವ



ಗುಂಡ್ಲುಪೇಟೆ, ಅ.25– ತಾಲೂಕಿನ ಮೂಡಗೂರು ಗ್ರಾಮದಲ್ಲಿ ವಿಜಯದಶಮಿ ಪ್ರಯುಕ್ತ ಶ್ರೀ ಕಾಳಿಕಾಂಬ ಮತ್ತು ಬಸವೇಶ್ವರ ಸ್ವಾಮಿಯ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿರುವ ಶ್ರೀ ಕಾಳಿಕಾಂಬ ದೇವಾಲಯದಲ್ಲಿ ವಿಜಯದಶಮಿಯ ಪ್ರಯುಕ್ತ ವಿಶೇಷ ಪೂಜೆ ಮತ್ತು ಬಸವೇಶ್ವರ ಮೂರ್ತಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಕಲಾ ಮೇಳಗಳೊಂದಿಗೆ ಮತ್ತು ಮಂಗಳವಾದ್ಯಗಳೊಂದಿಗೆ ಸಾಗಿತು. ನಂತರ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಈ ಪೂಜಾ ಕಾರ್ಯಕ್ರಮದಲ್ಲಿ ಮೂಡಗೂರು ಮಠದ ಅಧ್ಯಕ್ಷ ಶ್ರೀ ಉದ್ಯಾನ ಸ್ವಾಮಿಗಳು ಭಾಗವಹಿಸಲಿದ್ದಾರೆ. ಗ್ರಾಮಸ್ಥರು, ಮುಖಂಡರು, ಮಹಿಳೆಯರು ಉತ್ಸವದಲ್ಲಿ ಪಾಲ್ಗೊಂಡಿದ್ದರು. ಸಹಸ್ರಾರು ಮಂದಿಗೆ ಅನ್ನ ಸಂತರ್ಪಣೆ ಮಾಡಲಾಯಿತು

ಸ್ನಾತಕೋತ್ತರ ಸಂಗೀತ ಗಾಯನ ವಿಭಾಗದಲ್ಲಿ ಲಕ್ಷ್ಮೀಗೆ ಎರಡು ಚಿನ್ನದ ಪದಕ



ಮೈಸೂರು, ಅ. 25– ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿನಿ ಮೈಸೂರಿನ ಅಗ್ರಹಾರದ ನಿವಾಸಿ ಆರ್.ಸಿ.ಲಕ್ಷ್ಮೀ ಅವರು ಕರ್ನಾಟಕ ಸಂಗೀತ ಗಾಯನ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಎರಡು ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾರೆ.

ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ಪದವಿ ಮತ್ತು ಚಿನ್ನದ ಪದಕಗಳನ್ನು ಸ್ವೀಕರಿಸಿದ ಲಕ್ಷ್ಮೀ ಅವರು ತಮ್ಮ ಈ ಸಾಧನೆಗೆ ಸ್ಫೂರ್ತಿಯಾದ ವಿವಿಯ ಪ್ರಾಧ್ಯಾಪಕರು ಮತ್ತು ಕುಲಪತಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

28ರಂದು ಪ್ರಕೃತಿ ಭಾರದ್ವಾಜ್ ಭರತನಾಟ್ಯ ರಂಗಪ್ರವೇಶ

ಮೈಸೂರು, ಅ. 25– ನಗರದ ಪ್ರಕೃತಿ ಭಾರದ್ವಾಜ್ ಅವರ ಭರತನಾಟ್ಯ ರಂಗ ಪ್ರವೇಶ ಕಾರ್ಯಕ್ರಮವನ್ನು ಅ.28ರಂದು ಸಂಜೆ 6 ಗಂಟೆಗೆ ವಿಶ್ವೇಶ್ವರನಗರದ ಅಕ್ಕಮಹಾದೇವಿ ರಸ್ತೆಯ ಗಣಪತಿ ದೇವಾಲಯ ಹತ್ತಿರದ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ.

ಅಂದು ನಟುವಾಂಗದಲ್ಲಿ ವಿದುಷಿ ಸುಹಾಸಿನಿ ಕೌಲಗಿ, ಗಾಯನದಲ್ಲಿ ವಿದುಷಿ ಭೂಮಿಕಾ ಕೌಂಡಿನ್ಯ, ಮೃದಂಗದಲ್ಲಿ ವಿದ್ವಾನ್ ವೆಂಕಟ್ ಸುಬ್ರಹ್ಮಣ್ಯನ್, ಪಿಟೀಲಿನಲ್ಲಿ ವಿದ್ವಾನ್ ಎಚ್.ಎಸ್.ತಾಂಡವಮೂರ್ತಿ ಹಾಗೂ ಕೊಳಲಿನಲ್ಲಿ ವಿದ್ವಾನ್ ಅಭಿಷೇಕ್ ಭಾಗವಹಿಸುವರು.

ಮುಖ್ಯ ಅತಿಥಿಗಳಾಗಿ ನಾಟ್ಯಾಚಾರ್ಯ, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟಿನ ನಿರ್ದೇಶಕರಾದ ಪ್ರೊ.ಕೆ.ರಾಮಮೂರ್ತಿ ರಾವ್ ಹಾಗೂ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ. ನರಹರಿ ಬಾಬು ಪಾಲ್ಗೊಳ್ಳುತ್ತಾರೆ.



ಲಕ್ಷ್ಮೀಶಾಸ್ತ್ರಿ ಹಾಗೂ ಫಣೀಶ್ ಭಾರದ್ವಾಜ್ ಅವರ ಪುತ್ರಿ ಪ್ರಕೃತಿ ಭಾರದ್ವಾಜ್ ಅವರು ವಿಶ್ಯುವಲ್ ಮೀಡಿಯಾದಲ್ಲಿ ಬಿಎಸ್ಸಿ ಪದವಿ ಪಡೆದು, ಎಸ್‌ಡಿಎಂಐಎಂಡಿ ಕಾಲೇಜಿನಲ್ಲಿ ಎಂಬಿಎ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಸದ್ಯ ಬೆಂಗಳೂರಿನ ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಲೀಡ್ ಮಾರ್ಕೆಟಿಂಗ್ ಎಕ್ಸಿಕ್ಯುಟಿವ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಭರತನಾಟ್ಯದಲ್ಲಿ ಸೀನಿಯರ್ ಪದವಿ ಹಾಗೂ ಗಂಧರ್ವ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಪ್ರಕೃತಿ, ಪ್ರಸ್ತುತ ಅಭಿವ್ಯಕ್ತಿ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ವಿದುಷಿ ಸುಹಾಸಿನಿ ಕೌಲಗಿ ಅವರ ಬಳಿ ನಾಟ್ಯಾಭ್ಯಾಸವನ್ನು ಮುಂದುವರೆಸಿದ್ದಾರೆ.

ಮೈಸೂರು ಈಶ್ವರೀಯ ವಿಶ್ವ ವಿದ್ಯಾಲಯದ 57ನೇ ಸೇವಾ ವಾರ್ಷಿಕೋತ್ಸವ ಆಚರಣೆ



ಮೈಸೂರು–(ಯಾದವಗಿರಿ) ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ 57ನೇ ಸೇವಾ ವಾರ್ಷಿಕೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹನೂರಿನ ಶಾಸಕ ಎಮ್.ಆರ್. ಮಂಜುನಾಥ್, ಬಡತನದ ರೇಖೆಗಿಂತ ಕೆಳಗೆ ಇರುವಂತಹ ಕಟ್ಟ ಕಡೆಯ ವ್ಯಕ್ತಿಗೂ ಆಧ್ಯಾತ್ಮಿಕ ಜ್ಞಾನ ಲಭಿಸಲಿ. ಈ ನಿಟ್ಟಿನಲ್ಲಿ 1966ರಲ್ಲಿ ಆರಂಭವಾದ ಆಧ್ಯಾತ್ಮಿಕ ಜ್ಞಾನದ ಸೇವೆ 10 ಜಿಲ್ಲೆಗಳಲ್ಲಿ ವಟವೃಕ್ಷದಂತೆ ಬೆಳೆದು ಎಲ್ಲಾ ವರ್ಗದವರಿಗೂ ಲಭಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಪ್ರಶಂಸಿಸಿದರು.

ವಿಶೇಷ ಆಹ್ವಾನಿತರಾಗಿ ಹರಿಯಾಣ ಪಾನಿಪತ್ ಉಪವಲಯದ ಮುಖ್ಯ ಸಂಚಾಲಕರಾದ ಬಿ.ಕೆ. ಭರತ್ ಭೂಷಣ ಭಾಯೀಜೀ ಮಾತನಾಡಿ, ಎಂಎಲ್ಎ ಎಂದರೆ ಮೆಂಬರ್ ಆಫ್ ಲವ್ ಅಂಡ್ ಲಾ ಆಫ್ ಪಾರ್ಲಿಮೆಂಟ್. ಅಂತಹ ಪ್ರೀತಿಯ ಪಾಲನೆ ಎಂದರು. ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜೀ ಮಾತನಾಡಿ, ತಮ್ಮೆಲ್ಲರ ಸಕಾರಾತ್ಮಕ ಸಂಕಲ್ಪ ವಿಶ್ವಕಲ್ಯಾಣಕ್ಕೆ ನಾಂದಿಯಾಗುತ್ತದೆ ಎಂದು ಆಶೀರ್ವದಿಸಿದರು. ನಂತರ ಶಾಸಕರು ಹಾಗೂ ಭರತ್ ಭೂಷಣರವರನ್ನು ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು. ಚಾಮರಾಜನಗರ ಜಿಲ್ಲಾ ಸೇವಾ ವರದಿಯನ್ನು ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಮಂಡಿಸಿದರು. ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಪ್ರಭಾಮಣೀಜೀ, ಬ್ರಹ್ಮಾಕುಮಾರ ರಂಗನಾಥಶಾಸ್ತ್ರೀಜೀ, ಓಂ ಶಾಂತಿ ನ್ಯೂಸ್ ಸರ್ವೀಸನ ಬಿಕೆ ಆರಾಧ್ಯ, ರಾಮಚಂದ್ರ, ಶಿವಲೀಲ, ಸಂಧ್ಯಾ, ಮಂಜುಳ, ರತ್ನಾಜೀ, ಶಾರದಾಜೀ, ಮಣಿ, ಕುಮಾರ್, ಕೃಷ್ಣಮೂರ್ತಿ, ಗೀತಾ, ವಿಜಯಕುಮಾರ್, ಯಮುನಾ, ನಾಗರಾಜ್ ಹಾಜರಿದ್ದರು.

ಶರನ್ನವರಾತ್ರಿ ಪೂಜಾ ಮಹೋತ್ಸವ ಸಂಪನ್ನ



ಮೈಸೂರು, ಅ. 25– ವಿಶ್ವ ವಿಖ್ಯಾತ ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ ವತಿಯಿಂದ ನಡೆದ 9 ದಿನಗಳ ಶರನ್ನವರಾತ್ರಿ ಪೂಜಾ ಮಹೋತ್ಸವ ಮೈಸೂರಿನ ಜಯನಗರದ ಶ್ರೀರಾಮ ಮಂದಿರದಲ್ಲಿ ಅತ್ಯಂತ ಶ್ರದ್ಧಾ–ಭಕ್ತಿಯಿಂದ ವೈಭವಯುತವಾಗಿ ಸಂಪನ್ನಗೊಂಡಿತು.

ಶ್ರೀ ವೆಂಕಟಾಚಲ ಅವಧೂತ ಗುರು ಮಹಾರಾಜರ ಆಶೀರ್ವಾದ ಮತ್ತು ಶ್ರೀ ಅರ್ಜುನ ಅವಧೂತರ ಉಪಸ್ಥಿತಿಯಲ್ಲಿ ಹೋಮ–ಹವನಗಳ ಮೂಲಕ ಆರಂಭಗೊಂಡ ಕಾರ್ಯಕ್ರಮದಲ್ಲಿ ಅಪಾರ ಭಕ್ತರು ಮತ್ತು ಸಾರ್ವಜನಿಕರು ಪಾಲ್ಗೊಂಡು ಪುನೀತರಾದರು.

ಪ್ರತಿದಿನ ಬೆಳಗ್ಗೆ ಶ್ರೀ ದುರ್ಗಾ ಸಪ್ತಶತಿ ಪಾರಾಯಣ ಮತ್ತು ಹೋಮ ನಡೆಯಿತು. ಈ ವೇಳೆ ಶ್ರೀ ಅರ್ಜುನ ಅವಧೂತರು ಲೋಕ ಕಲ್ಯಾಣಕ್ಕಾಗಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ಮೊದಲ ದಿನ ಬೆಳಗ್ಗೆ ಗಣಪತಿ ಹೋಮ ಮತ್ತು ನವಗ್ರಹ ಹೋಮ ನಡೆಯಿತು. ಎರಡನೇ ದಿನವಾದ ಸೋಮವಾರ ರುದ್ರ ಹೋಮ ಮತ್ತು ಮೂರನೇ ದಿನವಾದ ಮಂಗಳವಾರ ಸುಬ್ರಹ್ಮಣ್ಯ ಹೋಮ ನಡೆಯಿತು. ಋತ್ವಿಕರು ಹೋಮ ಮತ್ತು ಹವನವನ್ನು ನೆರವೇರಿಸಿಕೊಟ್ಟರು. ಇದರೊಂದಿಗೆ ರಾಮ ಮಂದಿರದಲ್ಲಿ ಅಪರೂಪದ ಬೊಂಬೆ ಪ್ರದರ್ಶನವನ್ನು ಏರ್ಪಡಿಸಲಾಗಿದ್ದು , ಭಕ್ತರು ಮತ್ತು ಸಾರ್ವಜನಿಕರು ಕಣ್ತುಂಬಿಕೊಂಡು ಭಾವಪರವಶವಾದರಲ್ಲದೆ ಟ್ರಸ್ಟ್‌ನ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನೆರೆದ ಭಕ್ತರಿಗೆ ಅವಧೂತರು ಆಶೀರ್ವಚನ ನೀಡಿ ಆಶೀರ್ವದಿಸಿದರು.ಟ್ರಸ್ಟ್ ವತಿಯಿಂದ ಭಕ್ತರಿಗೆ ಮಹಾ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಪ್ರತಿ ದಿನ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಪೂಜೆಗಳು ಮತ್ತು ಸಂಜೆ ಗುರುಗಳ ನಿವಾಸದಲ್ಲಿ ಸಂಗೀತ ಕಾರ್ಯಕ್ರಮಗಳು ನಡೆದವು. ಚಲನಚಿತ್ರ ನಟ–ನಟಿಯರು, ಕಿರುತೆರೆ ನಟ–ನಟಿಯರು, ಸಂಗೀತ ನಿರ್ದೇಶಕರು, ಚಲನಚಿತ್ರ ಸಾಹಿತಿಗಳು ಹಾಗೂ ರಾಜಕಾರಣಿಗಳು, ಗಣ್ಯಾತಿ ಗಣ್ಯರು ಭಾಗವಹಿಸಿದ್ದರು.

'ತೋಟಗಾರಿಕಾ ಪಿತಾಮಹ' ಡಾ.ಮರಿಗೌಡರ ಕಂಚಿನ ಪ್ರತಿಮೆ ಅನಾವರಣ

12 ಅಡಿ ಎತ್ತರದ ಒಂದು ಟನ್ ತೂಕದ ಪ್ರತಿಮೆ ಸಿಎಂ ಉದ್ಘಾಟನೆ



ಮೈಸೂರು, ಅ.25(ಬಿಎಲ್‌ಯು)– ಮೈಸೂರು ಅರಮನೆ ಬಳಿಯ ಕರ್ಜನ್ ಪಾರ್ಕ್‌ನಲ್ಲಿ ನಿರ್ಮಾಣ ಮಾಡಿರುವ ತೋಟಗಾರಿಕೆ ಪಿತಾಮಹ ಡಾ.ಎಂ.ಹೆಚ್. ಮರಿಗೌಡರ ಕಂಚಿನ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಅನಾವರಣಗೊಳಿಸಿದರು.

ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲೂಕು ಕೇಂದ್ರದಲ್ಲಿ ಫಾರ್ಮ್ ಹಾಗೂ ರೈತ ಮಳಿಗೆ ನಿರ್ಮಾಣ ಮಾಡಲು ಬುನಾದಿ ಹಾಕಿ ತೋಟಗಾರಿಕೆ ಕ್ಷೇತ್ರ ಅಭಿವೃದ್ಧಿಯ ಸ್ಮರಣೀಯ ಕಾರ್ಯಕ್ಕೆ ಡಾ. ಮರಿಗೌಡರು 'ತೋಟಗಾರಿಕೆ ಪಿತಾಮಹ' ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

1951ರಲ್ಲಿ ಮೈಸೂರಿನಲ್ಲಿ ತೋಟಗಾರಿಕೆ ಇಲಾಖೆಯ ಅಧೀಕ್ಷಕರಾಗಿ ಸಾಧನೀಯ ಕಾರ್ಯ ನಿರ್ವಹಿಸಿದ ಸ್ಮರಣಾರ್ಥ ಕರ್ಜನ್ ಪಾರ್ಕ್‌ನಲ್ಲಿ ಅವರ ಕಂಚಿನ ಪ್ರತಿಮೆ ನಿರ್ಮಾಣ ಮಾಡಲಾಗಿದೆ. 12 ಅಡಿ ಎತ್ತರವಿರುವ, ಒಂದು ಟನ್ ತೂಕದ ಈ ಕಂಚಿನ ಪ್ರತಿಮೆ ಮೂಲಕ ಅವರ ಆದರ್ಶವನ್ನು ಶಾಶ್ವತವಾಗಿಸಲಾಗಿದೆ.

ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಸಿದ್ದರಾಮಯ್ಯ, ತೋಟಗಾರಿಕೆ ಪಿತಾಮಹ ಡಾ. ಮರಿಗೌಡರ ಸಾಧನೆ ಎಲ್ಲರಿಗೂ ಸ್ಫೂರ್ತಿಯಾಗಿದೆ. ಕರ್ನಾಟಕದಲ್ಲಿ ತೋಟಗಾರಿಕಾ ಕ್ಷೇತ್ರದ ಅಭಿವೃದ್ಧಿಯ ರೂವಾರಿಯಾಗಿದ್ದ ಅವರು, ಸರ್ಕಾರಿ ಅಧಿಕಾರಿಯಾಗಿ ನಿಷ್ಠೆ ಹಾಗೂ ಬದ್ಧತೆಯಿಂದ ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಮೈಸೂರಿನ ಕೇಂದ್ರ ಸ್ಥಳದಲ್ಲಿರುವ ಕರ್ಜನ್ ಪಾರ್ಕ್‌ನಲ್ಲಿ ಮರಿಗೌಡರ ಕಂಚಿನ ಪ್ರತಿಮೆ ಅನಾವರಣಗೊಳಿಸಿರುವುದು ನನಗೆ ಸಂತಸ ತಂದಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಮೇಯರ್ ಶಿವಕುಮಾರ್, ಶಾಸಕರಾದ ಕೆ.ಹರೀಶ್ ಗೌಡ, ಡಿ.ರವಿಶಂಕರ್, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಈ ವೇಳೆ ಹಾಜರಿದ್ದರು.

ಜನರು ಬಯಸಿದರೆ ಮೈಸೂರು ದಸರಾದಲ್ಲಿ ಬದಲಾವಣೆ

ಮೈಸೂರು, ಅ.25(ಬಿಎಲ್‌ಯು)– ನಾಡಹಬ್ಬ ಮೈಸೂರು ದಸರಾಗೆ ಮತ್ತಷ್ಟು ಮೆರಗು ನೀಡುವ ನಿಟ್ಟಿನಲ್ಲಿ ಬದಲಾವಣೆ ತರಲು ಮೈಸೂರು ನಗರದ ಜನರ ಅಭಿಪ್ರಾಯ ಕೇಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನ ಟಿ.ಕೆ.ಲೇಔಟ್‌ನ ತಮ್ಮ ನಿವಾಸದ ಬಳಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು ದಸರಾ ನಾಡಹಬ್ಬ ಮಾತ್ರವಲ್ಲದೆ, ಜನರ ಹಬ್ಬ ಕೂಡ ಆಗಿದೆ ಎಂದರು. ನಾಡಹಬ್ಬ ಮೈಸೂರು ದಸರಾಗೆ ಮತ್ತಷ್ಟು ಮೆರಗು ನೀಡುವ ನಿಟ್ಟಿನಲ್ಲಿ ಮೈಸೂರು ನಗರದ ನಾಗರಿಕರ ಅಭಿಪ್ರಾಯ ಕೇಳುತ್ತೇವೆ. ಬದಲಾವಣೆ ಮಾಡಿ ಎಂದು ಅವರು ಬಯಸಿದರೆ ಬದಲಾವಣೆ ಮಾಡೋಣ ಎಂದು ತಿಳಿಸಿದರು.

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಚೆನ್ನಾಗಿ ನೆರವೇರಿದೆ. ಯಾವುದೇ ಅಡ್ಡಿ ಆತಂಕ, ಗಲಾಟೆಗಳಿಲ್ಲದೆ ಬಹಳ ಸುಗಮವಾಗಿ ನಡೆದಿದೆ. ಅಧಿಕಾರಿಗಳು ಒಗ್ಗಟ್ಟಾಗಿ ಕೆಲಸ ಮಾಡಿದ್ದು, ಜನಪ್ರತಿನಿಧಿಗಳು ಕೂಡ ಸಹಕಾರ ನೀಡಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಮರಿಗೌಡರು...

ತೋಟಗಾರಿಕೆ ಪಿತಾಮಹ ಡಾ.ಎಂ.ಹೆಚ್.ಮರಿಗೌಡರು ಮೂಲತಃ ಮೈಸೂರು ಜಿಲ್ಲೆಯವರು. ತಿ.ನರಸೀಪುರ ತಾಲೂಕು ಮಾರಗೌಡನಹಳ್ಳಿ ಹೊಂಬೇಗೌಡರ ಮಗ. ಬನ್ನೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದಿದ್ದರು. ತರುವಾಯ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿಜ್ಞಾನ ಪದವಿ ಪಡೆದ ಡಾ.ಮರಿಗೌಡರು, ಲಖ್ನೋ ವಿಶ್ವ ವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅಮೇರಿಕಾದ ಹಾರ್ವರ್ಡ್ ವಿಶ್ವ ವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪಡೆದಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1942ರಲ್ಲೇ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಸಹಾಯಕ ಸೂಪರಿಂಟೆಂಡೆಂಟ್ ಆಗಿ ಸೇವೆ ಆರಂಭಿಸಿದ ಡಾ.ಮರಿಗೌಡರು, 1951ರಲ್ಲಿ ಮೈಸೂರಿನ ತೋಟಗಾರಿಕೆ ಇಲಾಖೆಯ ಅಧೀಕ್ಷಕರಾಗಿ ಕಾರ್ಯನಿರ್ವಹಿಸಿದ್ದರು. ಮೈಸೂರು ಜಿಲ್ಲೆಯಿಂದಲೇ ಹಲವು ರೀತಿಯ ಪ್ರಯೋಗಾತ್ಮಕ ಯೋಜನೆಗಳನ್ನು ರೂಪಿಸಿ, ಅದರಲ್ಲಿ ಯಶಸ್ವಿಯಾದ ಅವರು ತಮಗೆ ದೊರೆತ ಉನ್ನತ ಪದವಿಯಲ್ಲಿ ಇನ್ನು ಹಲವು ಸ್ಮರಣೀಯ ಕಾರ್ಯಗಳನ್ನು ಮಾಡಿದ್ದಾರೆ. ಕೇವಲ ಉದ್ಯಾನವನಗಳ ನಿರ್ವಹಣೆಗೆ ಸೀಮಿತವಾಗಿದ್ದ ತೋಟಗಾರಿಕೆ ಇಲಾಖೆಯನ್ನು ರೈತರ ಬಳಿಗೆ ಕೊಂಡೊಯ್ದ ಕೀರ್ತಿ ಡಾ.ಮರಿಗೌಡರದ್ದಾಗಿತ್ತು. ತೋಟಗಾರಿಕೆ ಬೆಳೆಗಳ ಮೂಲಕ ರೈತರ ಬದುಕು ಹಸನಾಗಿಸುವಲ್ಲಿ ಅವರು ಹಲವು ಯೋಜನೆಗಳನ್ನು ರೂಪಿಸಿ, ಅನುಷ್ಠಾನ ಮಾಡಿದ್ದರು.

ಸ್ವಸ್ಥಾನಗಳಿಗೆ ಮರಳಿದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ

ಮೈಸೂರು, ಅ.25(ಆರ್‌ಕೆ)– ದಸರಾ ಮಹೋತ್ಸವದ ಬಂದೋಬಸ್ತ್ ಕರ್ತವ್ಯಕ್ಕೆ ಆಗಮಿಸಿದ್ದ ಹೊರ ಜಿಲ್ಲೆಗಳ ಹೆಚ್ಚುವರಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಇಂದು ಬೆಳಗ್ಗೆ ಮೈಸೂರಿಂದ ತಮ್ಮ ಸ್ವಸ್ಥಾನಗಳಿಗೆ ಹಿಂದಿರುಗಿದರು. ಅ.12ರಿಂದ ಹಂತ ಹಂತವಾಗಿ ಸುಮಾರು 6 ಸಾವಿರ ಪೊಲೀಸರು ಮೈಸೂರಿಗೆ ಆಗಮಿಸಿ ದಸರಾ ಉದ್ಘಾಟನೆ ದಿನದಿಂದ ಅ.24ರ ವಿಜಯದಶಮಿ ಮೆರವಣಿಗೆ ಮುಕ್ತಾಯದವರೆಗೆ ನಡೆದ ಎಲ್ಲಾ ಕಾರ್ಯಕ್ರಮಗಳಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸಿದ್ದರು. ಅರಮನೆ ಆವರಣದ ಸಾಂಸ್ಕೃತಿಕ ಕಾರ್ಯಕ್ರಮ, ದಸರಾ ವಸ್ತುಪ್ರದರ್ಶನ, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ಕ್ರೀಡಾಕೂಟ, ವಿದ್ಯುತ್ ದೀಪಾಲಂಕಾರ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು, ವಿಜಯದಶಮಿ ಮೆರವಣಿಗೆ, ಪಂಜಿನ ಕವಾಯತು ಪ್ರದರ್ಶನಗಳಲ್ಲಿ ಭದ್ರತಾ ಕರ್ತವ್ಯ ನಿರ್ವಹಿಸಿದ್ದ ಹೆಚ್ಚುವರಿ ಪೊಲೀಸರಿಗೆ ಮೈಸೂರು ನಗರ ಪೊಲೀಸ್ ಘಟಕದ ವತಿಯಿಂದ ಊಟ–ವಸತಿ ಸೌಲಭ್ಯ ಕಲ್ಪಿಸಲಾಗಿತ್ತು. ಇಂದು ಬೆಳಗ್ಗೆ ಡಿಸಿಪಿ ಎಂ.ಮುತ್ತುರಾಜ್, ಈ ಪೊಲೀಸರ ಯಶಸ್ವಿ ಕಾರ್ಯ ನಿರ್ವಹಣೆ ಪ್ರಶಂಸಿಸಿ ಅವರವರ ಜಿಲ್ಲಾ ಕೇಂದ್ರ ಸ್ಥಾನಗಳಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಕಳುಹಿಸಿಕೊಟ್ಟರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸಹ ಈ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಕಾರ್ಯವನ್ನು ಶ್ಲಾಘಿಸಿದ್ದಾರೆ.



ಡಾ.ಸಿಪಿಕೆ ಕಾವ್ಯ ಪ್ರಶಸ್ತಿಗೆ 10 ಮಂದಿ ಕವಿಗಳ ಆಯ್ಕೆ



ಮೈಸೂರು, ಅ. 25– ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ 'ಪಂಪ ಪ್ರಶಸ್ತಿ' ಪುರಸ್ಕೃತ, ಬಹುಶ್ರುತ ಖ್ಯಾತ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಗೌರವಾರ್ಥ ಕೊಡಮಾಡುವ ಚೊಚ್ಚಲ ವರ್ಷದ ಡಾ. ಸಿಪಿಕೆ ಕಾವ್ಯ ಪ್ರಶಸ್ತಿಗೆ ಹೊಸ ತಲೆಮಾರಿನ ಹತ್ತು ಮಂದಿ ಪ್ರತಿಭಾನ್ವಿತ ಕವಿಗಳು ಆಯ್ಕೆಯಾಗಿದ್ದಾರೆ ಎಂದು ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ. ನಾಡಿನ ವಿವಿಧ ಜಿಲ್ಲೆಗಳಿಗೆ ಸೇರಿದ ಕವಯಿತ್ರಿಯರಾದ ಧಾರವಾಡದ ಕವಿತಾ ಹೆಗಡೆ ಅಭಯಂ, ಬೆಂಗಳೂರಿನ ವಿಜಯಲಕ್ಷ್ಮಿ ನುಗ್ಗೇಹಳ್ಳಿ, ವಿಜಯಪುರದ ಹೇಮಲತಾ ವಸ್ತ್ರದ್, ಕೊಡಗಿನ ಸಂಗೀತ ರವಿರಾಜ್ ಹಾಗೂ ಕವಿಗಳಾದ ಚಾಮರಾಜನಗರದ ಡಾ.ಎನ್.ಕೆ. ದಿಲೀಪ್, ಶಿವಮೊಗ್ಗದ ಶಿ.ಜು. ಪಾಶ, ಹಾಸನದ ಕೊಟ್ರೇಶ್ ಎಸ್. ಉಪ್ಪಾರ್, ಗದಗದ ಚಂದ್ರಶೇಖರ ಮಾಡಲಗೇರಿ, ಮೈಸೂರಿನ ನಾಗರಾಜ್ ತಲಕಾಡು, ಮಂಡ್ಯದ ದಿನೇಶ್ ಹೆರಗನಹಳ್ಳಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸದ್ಯದಲ್ಲೇ ನಗರದ ಕೆ.ಜಿ. ಕೊಪ್ಪಲಿನ ನೇಗಿಲ ಯೋಗಿ ಮರುಳೇಶ್ವರ ಸೇವಾಭವನದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ದಸರಾ ಕವಿ–ಕಾವ್ಯ ಸಂಭ್ರಮದಲ್ಲಿ ಡಾ. ಸಿಪಿಕೆ ಅವರ ಗಣ್ಯ ಉಪಸ್ಥಿತಿಯಲ್ಲಿ ಖ್ಯಾತ ಹಿರಿಯ ಕವಯಿತ್ರಿ ಶಶಿಕಲಾ ವಸ್ತ್ರದ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ನರೆಡ್ಕೋ ಸಂಸ್ಥಾಪನಾ ದಿನಾಚರಣೆ



ಮೈಸೂರು, ಅ.25(ಜಿಎ)–ಅ.27ರಂದು ನರೆಡ್ಕೋ(ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್ಮೆಂಟ್ ಕೌನ್ಸಿಲ್) ಸಂಸ್ಥಾಪನಾ ದಿನ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಆದಿಶೇಷನ್ ಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5.30ಕ್ಕೆ ನಗರದ ರ್‍ಯಾಡಿಸನ್ ಬ್ಲೂ ಹೋಟೇಲ್‌ನಲ್ಲಿ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ನರೆಡ್ಕೋ ರಾಷ್ಟ್ರೀಯ ಅಧ್ಯಕ್ಷ ಡಾ.ಜಿ. ಹರಿಬಾಬು, ರಾಜ್ಯಾಧ್ಯಕ್ಷ ಶಾ.ಮಾ. ರೆಡ್ಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿರುವರು.

ಪ್ರತಿ ಎರಡು ವರ್ಷಕ್ಕೊಮ್ಮೆ ನರೆಡ್ಕೋದ ನೂತನ ಪದಾಧಿಕಾರಿಗಳು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಆದರೆ, ಕೊರೊನಾ ಹಿನ್ನೆಲೆಯಲ್ಲಿ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕಾರ ಮಾಡಲು ಸಾಧ್ಯವಾಗಿರಲಿಲ್ಲ ಎಂದರು. ನರೆಡ್ಕೋ ವತಿಯಿಂದ ಸರ್ಕಾರದ ಜೊತೆಗೂಡಿ ಹಲವಾರು ಕಾರ್ಯಕ್ರಮಗಳನ್ನು ನಡೆಸಿದ್ದು, ಅದರಂತೆ ಈ ಸಮಾರಂಭದಲ್ಲಿ ಬ್ರಾಂಡ್ ಮೈಸೂರು ಮತ್ತು ನಗರದ ಅಭಿವೃದ್ಧಿ ಕುರಿತಂತೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನೂತನ ಅಧ್ಯಕ್ಷ ವಿ.ಸಿ. ರವಿಕುಮಾರ್, ಕಾರ್ಯದರ್ಶಿ ವಿನಯ್ ಶಂಕರ್, ಖಜಾಂಚಿ ಎ.ಷಿನಾಗೇಶ್, ಜಂಟಿ ಕಾರ್ಯದರ್ಶಿ ಗಗನ್ ಹಾಗೂ ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ದಸರಾ ಮುಗಿದರೂ ಮೈಸೂರಲ್ಲೇ ಬೀಡು ಬಿಟ್ಟಿರುವ ಪ್ರವಾಸಿಗರು

ಮೈಸೂರು, ಅ.25(ಆರ್‌ಕೆ)– ವಿಶ್ವ ವಿಖ್ಯಾತ ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆ ಮುಗಿದರೂ ಪ್ರವಾಸಿಗರು ಮಾತ್ರ ಇನ್ನೂ ಸಾಂಸ್ಕೃತಿಕ ನಗರಿಯಲ್ಲೇ ಬೀಡು ಬಿಟ್ಟಿದ್ದಾರೆ.



ದಸರಾ ನೋಡಲೆಂದು ಕುಟುಂಬ ಸಮೇತ ಆಗಮಿಸಿ ಹೋಟೆಲ್, ಲಾಡ್ಜ್‌ಗಳಲ್ಲಿ ವಾಸ್ತವ್ಯ ಹೂಡಿರುವವರು ಮಂಗಳವಾರ ಆಕರ್ಷಕ ಜಂಬೂಸವಾರಿ ಮೆರವಣಿಗೆ ಮತ್ತು ಪಂಜಿನ ಕವಾಯಿತು ಪ್ರದರ್ಶನ ವೀಕ್ಷಿಸಿದ ಬಳಿಕ ಇಂದು ಚಾಮುಂಡಿಬೆಟ್ಟ, ಮೃಗಾಲಯ, ಅರಮನೆ, ಜಗನ್ಮೋಹನ ಅರಮನೆ, ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನಗಳಿಗೆ ಭೇಟಿ ನೀಡಿದ್ದರು.

ಸಂಜೆ 7 ಗಂಟೆ ನಂತರ ಕೆಎಸ್‌ಟಿಡಿಸಿಯ ಅಂಬಾರಿ ಡಬಲ್ ಡಕ್ಕರ್ ಬಸ್ಸಿನಲ್ಲಿ ಪ್ರಯಾಣಿಸಿ ಮೈಸೂರಲ್ಲಿ ವಿದ್ಯುದ್ದೀಪಾಲಂಕಾರ ವೀಕ್ಷಿಸಿದ ಪ್ರವಾಸಿಗರು, ಇಲ್ಲೇ ವಾಸ್ತವ್ಯ ಹೂಡಿದ್ದಾರೆ. ನಾಳೆ (ಅ.26) ಕೆಆರ್‌ಎಸ್, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ, ಟಿಪ್ಪು ಸುಲ್ತಾನ್ ದರಿಯಾ ದೌಲತ್, ಶ್ರೀ ನಿಮಿಷಾಂಬ ದೇವಾಲಯಗಳಿಗೆ ಭೇಟಿ ನೀಡಲಿರುವ ಪ್ರವಾಸಿಗರು, ಸಂಜೆ ವೇಳೆಗೆ ಹಿಂದಿರುಗುವ ನಿರೀಕ್ಷೆ ಇದೆ ಎಂದು ಹೋಟೆಲ್ ಮಾಲೀಕರು ತಿಳಿಸಿದ್ದಾರೆ.



ಅಕ್ಟೋಬರ್ 22ರಿಂದ ಮೈಸೂರಿನ ಹೋಟೆಲ್‌ಗಳ ಎಲ್ಲಾ ರೂಂಗಳೂ ಭರ್ತಿಯಾಗಿದ್ದವು. ಆ ಅವಧಿಯಲ್ಲಿ ಕೊಠಡಿಗಳಿಗೆ ಭಾರಿ ಬೇಡಿಕೆ ಇತ್ತು. ಅಕ್ಟೋಬರ್ 24ರಂದು ವಿಜಯದಶಮಿಯ ಮೆರವಣಿಗೆ ಮುಗಿದ ನಂತರ ಇಂದು ಕೆಲವೇ ಮಂದಿ ಖಾಲಿ ಮಾಡಿದ್ದರಾದರೂ, ಇನ್ನೂ ಬಹುತೇಕ ಮಂದಿ ಮೈಸೂರಲ್ಲಿ ಬೀಡು ಬಿಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಈ ಬಾರಿ ದಸರಾದಲ್ಲಿ ನಾಲ್ಕೈದು ದಿನ ಪ್ರವಾಸಿಗರು ಹೋಟೆಲ್ ಕೊಠಡಿಗಳಲ್ಲಿ ವಾಸ್ತವ್ಯ ಹೂಡಿದ್ದರು. ಎಲ್ಲಾ ರೂಂಗಳೂ ಬುಕ್ ಆಗಿದ್ದವು. ಜಂಬೂಸವಾರಿ ಮುಗಿದ ಬಳಿಕ ಈಗ ಕೆಲವರು ಖಾಲಿ ಮಾಡಿದ್ದು, ಇನ್ನೂ ನಾಲ್ಕೈದು ದಿನಗಳವರೆಗೆ ಪ್ರವಾಸಿಗರು ಇರಬಹುದು ಎಂದರು.

ಮೈಸೂರು ನಗರ ಮತ್ತು ಸುತ್ತಲಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ಬಳಿಕ ತಮ್ಮ ಊರುಗಳಿಗೆ ಹಿಂದಿರುಗುತ್ತಾರೆ. ಈ ಮಧ್ಯೆ ಮೈಸೂರು ಸುತ್ತಮುತ್ತಲ ಜನರು ಕುತೂಹಲದಿಂದ ಮೈಸೂರಿಗೆ ಭೇಟಿ ನೀಡುತ್ತಿದ್ದು, ಅವರು ತಿಂಡಿ–ಊಟಕ್ಕೆ ಹೋಟೆಲುಗಳಿಗೆ ಮುಗಿ ಬೀಳುತ್ತಿದ್ದಾರೆ ಎಂದು ಅವರು ತಿಳಿಸಿದರು.

ಇಂದು ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ, ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಭೇಟಿ ನೀಡಿದ್ದರು. ತಮ್ಮ ಸಂಬಂಧಿಕರ ಮನೆಗಳಲ್ಲಿ ವಾಸ್ತವ್ಯ ಹೂಡಿರುವವರೂ ಮೈಸೂರು ಮತ್ತು ಸುತ್ತಮುತ್ತಲಿನ ಪ್ರವಾಸಿ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಸಂಜೆ ವೇಳೆ ವಿದ್ಯುತ್ ದೀಪಾಲಂಕಾರ ವೀಕ್ಷಿಸುತ್ತಿದ್ದಾರೆ. ದಸರಾಗೆ ಬಂದಿದ್ದವರಲ್ಲಿ ಮತ್ತೆ ಕೆಲವರು ಇಂದು ಬೆಳಗ್ಗೆ ಕೆಎಸ್‌ಆರ್‌ಟಿಸಿ ಬಸ್ಸು, ರೈಲುಗಳು, ವಿಮಾನಗಳಲ್ಲಿ ವಾಪಸ್ಸಾಗುವುದು ಕಂಡು ಬಂದಿತು.

ಮೈಸೂರು ಮಿತ್ರ

ಗೋಣಿಕೊಪ್ಪದಲ್ಲಿ ಅದ್ಧೂರಿ ದಸರಾ ಜನೋತ್ಸವ



ಅತ್ಯಾಕರ್ಷಕ ದಶ ಮಂಟಪಗಳ ಮೆರವಣಿಗೆ, ಸಾವಿರಾರು ಮಂದಿ ಭಾಗಿ, ಡಿಜೆಗಿಂತ ಕೊಡವ ವಾಲಗಕ್ಕೆ ಡಿಮ್ಯಾಂಡ್



ಗೋಣಿಕೊಪ್ಪ, ಅ.25– 45 ನೇ ವರ್ಷದ ಗೋಣಿಕೊಪ್ಪ ದಸರಾ ಜನೋತ್ಸವಕ್ಕೆ ತೆರೆ ಬಿದ್ದಿದ್ದು, ದಶ ಮಂಟಪಗಳ ಕಲಾಕೃತಿ, ಸಹಸ್ರಾರು ಸಂಖ್ಯೆಯ ಕಲಾಭಿಮಾನಿಗಳು ಈ ಅದ್ದೂರಿ ಜನೋತ್ಸವಕ್ಕೆ ಸಾಕ್ಷಿಯಾದರು. ಸುಮಾರು 25 ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡು ಸಂಭ್ರಮಿಸಿದರು.

ದಶಮಂಟಪಗಳು ಮುಖ್ಯ ಬೀದಿಗಳಲ್ಲಿ ನೆರೆದಿದ್ದ ಸಹಸ್ರಾರು ಜನಸ್ತೋಮದ ನಡುವೆ ಸಾಗಿ ಕತ್ತಲಲ್ಲಿ ಮಳಕಗೊಳ್ಳುವಂತೆ ಮಾಡಿದವು. ವಿಜಯದಶಮಿಯ ರಾತ್ರಿಯಿಂದ ಮುಂಜಾನೆವರೆಗೂ ಮಂಟಪಗಳಲ್ಲಿ ದೇವರುಗಳ ಮೂರ್ತಿಗಳು ನರ್ತಿಸಿದವು. ತಮ್ಮದೇ ಆದ ವಿಶೇಷ ಚಿಂತನೆಯಲ್ಲಿ ಮಂಟಪ ಸಮಿತಿಗಳು ಕಥೆ, ಕಲಾಕೃತಿ ಮೂಲಕ ಗಮನ ಸೆಳೆದವು. ಪೌರುಷದ ಶಬ್ದ, ವಧೆ, ಕಣ್ಮನ ಸೆಳೆಯುವ ಕಲಾಕೃತಿ, ಪ್ರಭಾವಳಿಗಳು ಆಕರ್ಷಿಸಿದವು.

ಕಾಡ್ಲಾಯ್ಯಪ್ಪ ದಸರಾ ಸಮಿತಿ ಎರಡು ಕೃತಕ ಬೃಹತ್ ಆನೆಗಳ ರೂಪವನ್ನು ಹೊತ್ತು ಕಲಾಭಿಮಾನಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಯಜ್ಞ ಕಥೆಯೊಂದಿಗೆ ಕಾಲಭೈರವ ಹಾಗೂ ಅರ್ಧನಾರೀಶ್ವರನ ಬೃಹತ್ ಚಲನಯುಕ್ತ ಮಂಟಪ ಹೊತ್ತು ಸಾಗಿ ಬಂತು. ಕೊಪ್ಪ ಸ್ನೇಹಿತರ ಬಳಗ ವತಿಯಿಂದ ಗಣೇಶ ಪುರಾಣದಲ್ಲಿ ಸಿಂಧೂರ ಗಣಪತಿಯ ಎಂಟನೇ ಅಧ್ಯಾಯವನ್ನು ಅತ್ಯಂತ ಉತ್ತಮವಾಗಿ ಪ್ರಸ್ತುತಪಡಿಸಿದರು. ಹೆಚ್ಚು ಎತ್ತರದ ಮಂಟಪ ನಿರ್ಮಿಸಿ ಮುಗಿಲಿನತ್ತ ಕಲಾಭಿಮಾನಿಗಳನ್ನು ಸೆಳೆಯುವಂತೆ ಮಾಡಿತು.

ಹರಿಶ್ಚಂದ್ರಪುರದ ನಮ್ಮ ದಸರಾ ಸಮಿತಿಯು ಸಪ್ತ ದುರ್ಗೆಯರು ತಾರಕಾಸುರರ ವಧೆ ಚಿತ್ರಣವನ್ನು ಪ್ರಸ್ತುತಪಡಿಸಿತು. ಕೈಕೇರಿ ಶ್ರೀ ಭಗವತಿ ದಸರಾ ಸಮಿತಿ ವತಿಯಿಂದ ಮೂಕಾಸುರನ ವಧೆಯ ನಂತರ ಮೂಕಾಂಬಿಕೆಯು ನೆಲೆ ನಿಂತ ಬಗ್ಗೆ ಮತ್ತು ಶಂಕರಾಚಾರ್ಯರ ಸ್ಥಾಪಿತ ಕೊಲ್ಲೂರಿನ ಕಥೆಯನ್ನು ಪ್ರಸ್ತುತಪಡಿಸಿ ಗಮನ ಸೆಳೆದವು.

ನವಚೇತನ ದಸರಾ ಸಮಿತಿ ಕೃಷ್ಣನ ಅವತಾರವನ್ನು, ಶಿವನು ತನ್ನ ಎರಡು ಹಸ್ತಗಳಲ್ಲಿ ಮಕ್ಕಳನ್ನು ಸ್ಥಾಪಿಸಿಕೊಂಡಿರುವ ದೃಶ್ಯವನ್ನು, ಹಾಗೂ ಸುಬ್ರಹ್ಮಣ್ಯ ನವಿಲಿನ ಮೇಲೆ ಕುಳಿತು ನರ್ತಿಸುವುದನ್ನು ಪ್ರಸ್ತುತಪಡಿಸಿದರು.

ಯುವ ದಸರಾ ಸಮಿತಿ ಅಸುರರ ಆತ್ಮ, ನಿರಾಕಾರ ಕಾಲಾಂಶನು ಶಿವನಿಂದ ವರ ಪಡೆದು, ಶಿವನ ಆಕಾರವನ್ನು ಪಡೆದು ಬಲಿಷ್ಠನಾಗಿ ಮತ್ತೆ ಎಲ್ಲರಿಗೂ ಕಂಟಕನಾದಾಗ ಶಿವನಿಂದಲೇ ಸಂಹರಿಸಲ್ಪಡುವ ಕಥಾಹಂದರದಲ್ಲಿ ಮೂಡಿ ಬಂತು.

ಸರ್ವರ ದಸರಾ ಸಮಿತಿಯು ತಾಯಿ ಜಗನ್ಮಾತೆಯು ಗಜಾಸುರನನ್ನು ಸಂಹರಿಸುವ ಕಥೆಯ ಮಂಟಪ ಪ್ರಸ್ತುತ ಪಡಿಸಿದರು. ಅರ್ವತೊಕ್ಲು ಶ್ರೀ ಶಾರದಾಂಬ ದಸರಾ ಸಮಿತಿಯು ಶಾಖಾಂಬರಿಯೂ ದುರ್ಗಮಾಸುರನನ್ನು ಸಂಹರಿಸುವ ಕಥೆಯನ್ನು ಅದ್ಭುತವಾಗಿ ಮಂಟಪಗಳಲ್ಲಿ ತೋರಿಸಿದರು. ಶ್ರೀ ಕಾವೇರಿ ದಸರಾ ಸಮಿತಿ ವತಿಯಿಂದ ಚಾಮುಂಡೇಶ್ವರಿ ದೇವಿಯನ್ನು ಹೊತ್ತು ಮುಂದೆ ಸಾಗಿತು. ನಾಡಹಬ್ಬದ ಸಮಿತಿ ವತಿಯಿಂದ ಭಾರತಾಂಬೆ ಚಿತ್ರ ಮೂಡಿಬಂತು. ಡಿಜೆ ಬಳಕೆ ಬದಲು ಕೊಡವ ವಾಲಗವನ್ನು ಮಂಟಪ ಸಮಿತಿಗಳು ಹೆಚ್ಚಾಗಿ ಬಳಸಿಕೊಂಡವು. ವಾಲಗಕ್ಕೆ ಕುಣಿಯುವವರ ಸಂಖ್ಯೆ ಕೂಡ ಹೆಚ್ಚಾಗಿತ್ತು.

ಹರಿಶ್ಚಂದ್ರಪುರ ನಮ್ಮ ದಸರಾ ಸಮಿತಿ ಮತ್ತು ಕೊಪ್ಪ ಸ್ನೇಹಿತರ ಬಳಗ ಕೊಪ್ಪ ಸಮಿತಿ ಪ್ರಥಮ ಬಹುಮಾನವನ್ನು ಗಿಟ್ಟಿಸಿಕೊಂಡವು. ಅರ್ವತೊಕ್ಲು ಶಾರದಾಂಬ ದಸರಾ ಸಮಿತಿ ದ್ವಿತೀಯ, ಯುವ ದಸರಾ ಸಮಿತಿ ತೃತೀಯ ಸ್ಥಾನ ಪಡೆದುಕೊಂಡಿತು. ಮಂಪಟಗಳ ಕಥೆ, ಪ್ರದರ್ಶನ, ಬೆಳಕು ಮತ್ತು ಪ್ರಭಾವಳಿ, ಕಲಾ ಕೃತಿಗಳ ಬಾಹ್ಯ ಮೇಲ್ನೋಟದ ಅಂಶಗಳು ಬಹುಮಾನ ಗೆಲ್ಲುವಲ್ಲಿ ಮುಖ್ಯ ಪಾತ್ರವಹಿಸಿದವು.

ಅನ್ನದಾನ ; ನಾಡಹಬ್ಬ ದಸರಾ ಸಮಿತಿ ವತಿಯಿಂದ ಮಧ್ಯಾಹ್ನ ಆಯೋಜಿಸಿದ್ದ ಅನ್ನದಾನ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡರು. ವಿಜೇತ ಮೂರು ಸ್ತಬ್ಧಚಿತ್ರಗಳಿಗೆ 40 ಸಾವಿರ, 30, 20 ಸಾವಿರ ನಗದು ಬಹುಮಾನ, ಪಾಲ್ಗೊಂಡ ತಂಡಕ್ಕೆ ತಲಾ 2 ಸಾವಿರ ಪ್ರೋತ್ಸಾಹ ಧನ ನೀಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ಸ್ತಬ್ಧಚಿತ್ರ ಪಾಲ್ಗೊಳ್ಳಲು ತಂಡಗಳಿಗೆ ಆರ್ಥಿಕ ಪ್ರೋತ್ಸಾಹ ನೀಡಲು ಕಾವೇರಿ ದಸರಾ ಸಮಿತಿ ವಿಶೇಷ ಅನುದಾನ ನೀಡಬೇಕಿದೆ. 5 ಲಕ್ಷ ರೂ. ಅನುದಾನವನ್ನು ಸಮಿತಿಗೆ ನೀಡುವುದರ ಮೂಲಕ ಬೆಂಬಲ ನೀಡಬೇಕು ಎಂದು ಸಮಿತಿ ಅಧ್ಯಕ್ಷ ಕಂಜಿತಂಡ ಪ್ರವೀಣ್ ಒತ್ತಾಯಿಸಿದರು.

ಗೋಣಿಕೊಪ್ಪ ಆಟೋ ಚಾಲಕರ ಮತ್ತು ಮಾಲೀಕರ ಸಂಘ ಆಯೋಜಿಸಿದ್ದ ಗ್ರೀಸ್ ಕಂಬ ಹತ್ತುವ ಸ್ಪರ್ಧೆಯನ್ನು ಅತ್ತೂರು ಗ್ರಾಮದ ರಮೇಶ್ ಗೆದ್ದುಕೊಂಡರು. ಸಂಜೆಯವರೆಗೂ ನಡೆದ ಸ್ಪರ್ಧೆಯಲ್ಲಿ ಕಂಬವೇರಿ ನಗದು ಬಹುಮಾನ ಪಡೆದುಕೊಂಡರು.



ಡಾರ್ಜಿಲಿಂಗ್ ಗೂರ್ಖಾಲ್ಯಾಂಡ್ ಮಾದರಿ ಕೊಡವರಿಗೂ ರಾಜಕೀಯ ಸ್ವಾಯತ್ತತೆ ಬೇಕು

ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಆಗ್ರಹ



ಮಡಿಕೇರಿ, ಅ.25– ಡಾರ್ಜಿಲಿಂಗ್ ಗೂರ್ಖಾಲ್ಯಾಂಡ್ ಮತ್ತು ಬೋಡೋ ಲ್ಯಾಂಡ್ ಮಾದರಿಯಲ್ಲಿ ಸಂವಿಧಾನದ ಆರ್ಟಿಕಲ್ 244 ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆ ನೀಡಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದ್ದಾರೆ.

ಕೊಡವ ಲ್ಯಾಂಡ್‌ಗಾಗಿ ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಬಿಟ್ಟಂಗಾಲ ಜಂಕ್ಷನ್ ಬಳಿಯಿಂದ ಪಾದಯಾತ್ರೆ ನಡೆಯಿತು. ನಂತರ ಪಟ್ಟಿಬಾಣೆ ಮಂದ್ ಪೆರವನಾಡ್‌ನಲ್ಲಿ ಕೊಡವ ಜಾಗೃತಿ ಸಭೆ ನಡೆಸಿದ ನಾಚಪ್ಪ ಅವರು, ಕೊಡವರ ಸಾಂವಿಧಾನಿಕ ಭದ್ರತೆಗಾಗಿ 9 ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಜಿಲ್ಲೆಯಾದ್ಯಂತ ಪಾದಯಾತ್ರೆ ನಡೆಸುತ್ತಿದ್ದು, ಸರ್ಕಾರದ ಗಮನ ಸೆಳೆಯಲಾಗುತ್ತಿದೆ ಎಂದರು.

ಕೊಡವಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕು ಎನ್ನುವುದು ಮುಖ್ಯ ಬೇಡಿಕೆಯಾಗಿದ್ದು, ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಹೈಕೋರ್ಟ್‌ನಲ್ಲಿ ಈ ಕುರಿತು ಅರ್ಜಿ ಸಲ್ಲಿಸಿ ನಮ್ಮ ಪರವಾಗಿ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಹಿರಿಯರಾದ ಸ್ವಾಮಿ ಅವರು ನಮಗೆ ಸ್ಫೂರ್ತಿಯಾಗಿದ್ದು, ಅವರಿಂದ ಪ್ರೇರಣೆಗೊಂಡು ಅವರ ಜನ್ಮದಿನದಿಂದ ಪಾದಯಾತ್ರೆಯನ್ನು ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಕೊಡವರನ್ನು ಎಸ್.ಟಿ ಪಟ್ಟಿಗೆ ಸೇರಿಸಬೇಕು, ಕೊಡವ ಜನಾಂಗದ ಸಮಗ್ರ ಕುಲಶಾಸ್ತ್ರ ಅಧ್ಯಯನ ಆರಂಭಿಸಬೇಕು, ಕೊಡವ ಕಸ್ಟಮರಿ ಜನಾಂಗೀಯ 'ಸಂಸ್ಕಾರ ಗನ್' ಹಕ್ಕುಗಳನ್ನು ಸಿಖ್ಖರ 'ಕಿರ್ಪಾನ್'ಗೆ ಸಮಾನವಾಗಿ ನಮ್ಮ ಸಂವಿಧಾನದ 25 ಮತ್ತು 26ನೇ ವಿಧಿಗಳ ಅಡಿಯಲ್ಲಿ ಕೊಡವರ 'ಧಾರ್ಮಿಕ ಸಂಸ್ಕಾರ'ವೆಂದು ರಕ್ಷಿಸಬೇಕು, ಮಾತೃಭಾಷೆ ಕೊಡವ ತಕ್ಕ್ ಅನ್ನು 8ನೇ ಶೆಡ್ಯೂಲ್‌ಗೆ ಸೇರಿಸಬೇಕು. ಸಂವಿಧಾನದ 347, 350, 350ಎ ಮತ್ತು 350ಬಿ ವಿಧಿಗಳ ಅಡಿಯಲ್ಲಿ ಪಠ್ಯಕ್ರಮ ಮತ್ತು ಆಡಳಿತದಲ್ಲಿ ಕೊಡವ ತಕ್ಕ್ ಅನ್ನು ಪರಿಚಯಿಸಬೇಕು. ಕೊಡವ ತಕ್ಕ್ ಅನ್ನು ರಾಜ್ಯದ 3ನೇ ಆಡಳಿತ ಭಾಷೆಯನ್ನಾಗಿ ಪರಿಗಣಿಸಬೇಕು, ಕೊಡವ ಜಾನಪದ ಪರಂಪರೆಯನ್ನು ಯುನೆಸ್ಕೋದ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸಬೇಕು. ಕೊಡವ ಜಾನಪದ ಪರಂಪರೆಯನ್ನು ಜೀವಂತಗೊಳಿಸಲು, ವಿಶ್ವ ಕೊಡವಾಲಜಿ (ಕೊಡವ ಶಾಸ್ತ್ರದ ಜಾಗತಿಕ ಸಂಶೋಧನಾ ಅಧ್ಯಯನ ಕೇಂದ್ರ) ಸಂಶೋಧನಾ ಕೇಂದ್ರ ಮತ್ತು ಕೊಡವ ಸುಧಾರಿತ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ನಮಗೆ ಭೂಮಿಯನ್ನು ನೀಡಬೇಕು. ಜೀವನದಿ ಕಾವೇರಿಗೆ 'ಕಾನೂನು ವ್ಯಕ್ತಿ' ಸ್ಥಿತಿಯೊಂದಿಗೆ ಜೀವಂತ ಘಟಕವನ್ನು ಸ್ಥಾಪಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಪೆರವನಾಡಿನ ಹಿರಿಯರಾದ ಮಾಚೇಟಿರ ಚೋಟು ಕಾವೇರಪ್ಪ, ಕಾಳೆಂಗಡ ರಮೇಶ್ ಕಾರ್ಯಪ್ಪ, ಚೇಂದಂಡ ವಸಂತ್, ಮಾಚೇಟಿರ ರಮೇಶ್, ಮಾಚೇಟಿರ ಸುನಿಲ್, ಚೇಂದಂಡ ಗೌರಿ ವಸಂತ್, ಚೇಂದಂಡ ಮೀನಾ ಸನ್ನಿ, ಚೇಂದಂಡ ಪೊನ್ನಮ್ಮ ಕಾವೇರಪ್ಪ, ಮಾಚೇಟಿರ ಲತಾ ಕಾವೇರಪ್ಪ, ಮಾಚೇಟಿರ ಚೋಂದಮ್ಮ, ಮಾಚೇಟಿರ ದೇವಕಿ ಅಪ್ಪಯ್ಯ, ಮಾಚೇಟಿರ ರುಕ್ಮಿಣಿ, ಮಾಚೇಟಿರ ನಿರ್ಮಲಾ ಕಾವೇರಪ್ಪ, ಗುಡ್ಡಂಡ ಪೂಣಚ್ಚ ಮತ್ತಿತರರು ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಕೋವಿಯೊಂದಿಗೆ ಪಾದಯಾತ್ರೆ ಹಾಗೂ ಜಾಗೃತಿ ಸಭೆಯಲ್ಲಿ ಪಾಲ್ಗೊಂಡರು.

ನಾಳೆ ಪಾಡಿಯಲ್ಲಿ ಪತ್ತಲೋದಿ ಉತ್ಸವ

ನಾಪೋಕ್ಲು, ಅ.25– ಸಮೀಪದ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ವರ್ಷಂಪ್ರತಿ ಆಚರಿಸಿಕೊಂಡು ಬರಲಾಗುತ್ತಿರುವ ತುಲ್ಯಾರು ಹತ್ತರ ಆರಾಧನೋತ್ಸವ (ಪತ್ತಲೋದಿ ಉತ್ಸವ) ಅ.27 ರಂದು ನಡೆಯಲಿದೆ. ಅಂದು ತುಲಾಭಾರ ಸೇವೆಗಳು ಮತ್ತು ಪೂಜಾ ಸೇವೆಗಳು ಎಂದಿನಂತೆ ನಡೆಯಲಿವೆ. ಈ ಉತ್ಸವಕ್ಕೆ ಅಧಿಕ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಪಾಲ್ಗೊಳ್ಳಬೇಕೆಂದು ದೇವತಕ್ಕರಾದ ಪರದಂಡ ಕುಟುಂಬಸ್ಥರ ಪರವಾಗಿ ಪರದಂಡ ಸುಬ್ರಮಣಿ ಕಾವೇರಪ್ಪ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆಯ ಬದಿಗೆ ಸರಿದ ಬಸ್, ತಪ್ಪಿದ ಅನಾಹುತ

ನಾಪೋಕ್ಲು, ಅ.25– ಇಲ್ಲಿಗೆ ಸಮೀಪದ ಮರದೋಡ ಗ್ರಾಮದಲ್ಲಿ ಬಸ್ಸೊಂದು ರಸ್ತೆಯ ಬದಿಗೆ ಸರಿದು ಭಾರಿ ಅನಾಹುತದಿಂದ ಪಾರಾದ ಘಟನೆ ಜರುಗಿದೆ.



ವಿರಾಜಪೇಟೆಯಿಂದ ಮರದೋಡ, ಕಕ್ಕಬೆ, ನಾಪೋಕ್ಲಿಗೆ ಸಂಚರಿಸುವ ಖಾಸಗಿ ಬಸ್ಸು ಸೋಮವಾರ ಮಧ್ಯಾಹ್ನ ಮರದೋಡ ಗ್ರಾಮದ ಮೇರಿಯಂಡ ಮೊಟ್ಟೆ ಎಂಬಲ್ಲಿ ವಾಹನ ಒಂದಕ್ಕೆ ಸೈಡ್ ಕೊಡುವ ಸಂದರ್ಭ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಸರಿದು ವಾಲಿ ಕೂದಲೆಳೆ ಅಂತರದಲ್ಲಿ ಪ್ರಯಾಣಿಕರು ಜೀವ ಅಪಾಯದಿಂದ ಪಾರಾಗಿದ್ದಾರೆ.

ಬಸ್ಸಲ್ಲಿದ್ದ ಪ್ರಯಾಣಿಕ ಒಬ್ಬರಿಗೆ ಗಾಯಗಳಾಗಿ ವಿರಾಜಪೇಟೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳಿಕ ಪ್ರಯಾಣಿಕರು, ಗ್ರಾಮಸ್ಥರು ಸೇರಿ ವಾಲಿದ ಬಸ್ಸನ್ನು ಎಳೆದು ಯಥಾ ಸ್ಥಿತಿಗೆ ತಂದ ಬಳಿಕ ಯಾವುದೇ ತೊಂದರೆ ಇಲ್ಲದೆ ಬಸ್ ಕಕ್ಕಬೆ ಕಡೆ ತೆರಳಿತು.

ಶ್ರದ್ಧಾಭಕ್ತಿಯಿಂದ ಜರುಗಿದ ನವರಾತ್ರಿ ಪೂಜೆ

ಗುಡ್ಡೆಹೊಸೂರು, ಅ.25– ಇಲ್ಲಿನ ಬೊಳ್ಳೂರು ಗ್ರಾಮದ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ 9 ದಿನಗಳಲ್ಲಿ ಪ್ರತಿ ದಿನ ರಾತ್ರಿ 7 ಗಂಟೆಯಿಂದ ದೇವಿಗೆ ವಿವಿಧ ಅಲಂಕಾರ ಮಾಡಿ ಪೂಜೆ ನೆರವೇರಿಸಲಾಯಿತು. ಪ್ರತಿನಿತ್ಯ ಗ್ರಾಮದ ಒಬ್ಬರಂತೆ ಪೂಜೆಯನ್ನು ನೆರವೇರಿಸಲಾಯಿತು.ಈ ಪೂಜಾಕಾರ್ಯವನ್ನು ಇಲ್ಲಿನ ಸಾರ್ವಜನಿಕ ಭಕ್ತರಿಂದ ಮತ್ತು ಗುಡ್ಡೆಹೊಸೂರು ಗೌಡ ಸಮಾಜದ ವತಿಯಿಂದ ನೆರವೇರಿಸಲಾಯಿತು.

ಪೂಜಾ ಕಾರ್ಯದಲ್ಲಿ ಪ್ರತಿನಿತ್ಯ ಭಜನೆ ಕಾರ್ಯಕ್ರಮ ನಡೆಯಿತು. ಅಲ್ಲದೆ ಪ್ರತಿನಿತ್ಯ ಪ್ರಸಾದ ವಿತರಣೆ ಕಾರ್ಯ ನಡೆಯಿತು. ಕೊನೆಯ ದಿನ ಗುಡ್ಡೆಹೊಸೂರು ಗೌಡ ಸಮಾಜದ ಸದಸ್ಯರಾದ ಕುಂಬನ ಬೆಳ್ಯಪ್ಪ ಅವರಿಂದ ಅನ್ನಸಂತರ್ಪಣೆ ಕಾರ್ಯ ನಡೆಯಿತು. ಈ ಪೂಜಾ ಕಾರ್ಯದಲ್ಲಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಬಿ.ಪಿ.ಗುರುಬಸಪ್ಪ ಮತ್ತು ಮಂಡೆಪಂಡ ಸೋಮಯ್ಯ(ರಘು) ಮತ್ತು ಸಮಾಜದ ಅಧ್ಯಕ್ಷ ಗುಡ್ಡೆಮನೆ ವಿಶ್ವಕುಮಾರ್ ಮತ್ತು ಸಮಾಜದ ಆಡಳಿತ ಮಂಡಳಿ ಮತ್ತು ಸದಸ್ಯರು ಹಾಗೂ ಸಾರ್ವಜನಿಕ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಪೂಜಾ ಕಾರ್ಯವನ್ನು ದೇವಸ್ಥಾನದ ಅರ್ಚಕ ನಡುಮನೆ ಸತ್ಯ ಅವರು ನಡೆಸಿದರು.

ನ.19ಕ್ಕೆ, 'ಕೊಡವ ನಮ್ಮೆ' ಸಾಂಸ್ಕೃತಿಕ ಸ್ಪರ್ಧೆ

ವಿರಾಜಪೇಟೆ, ಅ.25– ಕೊಡವ ಸಮಾಜ ಒಕ್ಕೂಟ ಬಾಳುಗೋಡುವಿನಲ್ಲಿ ಅಂತರ ಕೊಡವ ಸಮಾಜಗಳ 'ಕೊಡವ ನಮ್ಮೆ' ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮ ನ.19 ರಂದು ನಡೆಯಲಿದೆ ಎಂದು ಒಕ್ಕೂಟದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕಾಳಿಮಾಡ ಎಂ.ಮೋಟಯ್ಯ ತಿಳಿಸಿದ್ದಾರೆ.

ಕೊಡವ ಸಮಾಜ ಒಕ್ಕೂಟದ ವತಿಯಿಂದ ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯ ಮಟ್ಟದ ಕೊಡವ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಕೋಲಾಟ್, ಕತ್ತಯಾಟ್, ಉಮ್ಮತ್ತಾಟ್, ಪರಿಯಕಳಿ, ಬಾಳೋ ಪಾಟ್, ತಾಲಿಪಾಟ್, ಬೊಳಕಾಟ್ ಸ್ಪರ್ಧೆಗಳು ಕೊಡವ ಸಮಾಜಗಳ ಮಧ್ಯೆ ನಡೆಯಲಿರುವುದರಿಂದ ಪ್ರತಿ ಕೊಡವ ಸಮಾಜಗಳಿಂದ ಒಂದೊಂದು ತಂಡ ಭಾಗವಹಿಸುವಂತೆ ತಿಳಿಸಿದರು.

ಸ್ಪರ್ಧೆಯಲ್ಲಿ ಭಾಗವಹಿಸುವ ಕೊಡವ ಸಮಾಜಗಳು ತಮ್ಮ ತಂಡದ ಹೆಸರು ಮತ್ತು ವಿವರಗಳನ್ನು ನ,10 ರೊಳಗಾಗಿ ಪೊನ್ನಂಪೇಟೆ ಕೊಡವ ಸಮಾಜದ ಕಚೇರಿಯಲ್ಲಿ ನೋಂದಾಯಿಸಿಕೊಳ್ಳುವಂತೆ ಅವರು ಕೋರಿದರು.

ಈ ಸಂಬಂಧ ಎಲ್ಲಾ ಕೊಡವ ಸಮಾಜಗಳಿಗೆ ಮನವಿ ಪತ್ರ ಕಳುಹಿಸಲಾಗಿದ್ದು, ತಲುಪದೇ ಇದ್ದವರು ಸ್ಪಂದಿಸಿ ಇದನ್ನೇ ಮನವಿ ಎಂದು ಭಾವಿಸಿ ಹೆಚ್ಚಿನ ವಿವರಗಳಿಗೆ 9845308228–9483836115 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ. ಗೋಷ್ಠಿಯಲ್ಲಿ ಕೊಡವ ಸಮಾಜ ಸಾಂಸ್ಕೃತಿಕ ಸಮಿತಿಯ ಸಂಚಾಲಕ ಹಂಚೆಟ್ಟಿರ ಮನು ಮುದ್ದಪ್ಪ, ಬಾಚೀರ ಜಗದೀಶ್ ಉಪಸ್ಥಿತರಿದ್ದರು.

ಮಡಿಕೇರಿ ದಸರಾ ಉತ್ಸವಕ್ಕೆ ವೈಭವದ ತೆರೆ



ಶ್ರೀ ಕೋದಂಡರಾಮ ದೇವಾಲಯ ಮಂಟಪಕ್ಕೆ ಪ್ರಥಮ ಬಹುಮಾನ

'ಮಣಿಕಂಠನಿಂದ ಮಹಿಷಿಯ ಶಾಪ ವಿಮೋಚನೆ' ಸಂದೇಶ ಸಾರಿದ ಮಂಟಪ

● ದ್ವಿತೀಯ ಬಹುಮಾನ ಹಂಚಿಕೊಂಡ ಶ್ರೀ ಕೋಟೆ ಮಾರಿಯಮ್ಮ ದೇವಾಲಯ, ಶ್ರೀಕೋಟೆ ಮಹಾಗಣಪತಿ ದೇವಾಲಯ ಮಂಟಪ ● 3ನೇ ಬಹುಮಾನ ಪಡೆದ ಶ್ರೀಕರವಲೆ ಭಗವತಿ ಮಹಿಷ ಮರ್ಧಿನಿ ದೇವಾಲಯದ ಮಂಟಪ



ಮಡಿಕೇರಿ,ಅ.25– ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾ ಉತ್ಸವ ವೈಭವದಿಂದ ಮುಕ್ತಾಯ ಕಂಡಿದೆ. ಈ ಬಾರಿ ಶ್ರೀ ಕೋದಂಡರಾಮ ದೇವಾಲಯ ಪ್ರಥಮ ಬಹುಮಾನಕ್ಕೆ ಪಾತ್ರವಾಗಿದೆ. 'ಮಣಿಕಂಠನಿಂದ ಮಹಿಷಿಯ ಶಾಪ ವಿಮೋಚನೆ' ಎಂಬ ಸಾರಾಂಶ ಹೊಂದಿದ್ದ ಮಂಟಪ ಜನಾಕರ್ಷಣೆ ಪಡೆದಿದ್ದು, ಒಟ್ಟು 89.5 ಅಂಕಗಳಿಸಿ ಪ್ರಥಮ ಸ್ಥಾನ ಅಲಂಕರಿಸಿದೆ.

ಈ ಬಾರಿ ದ್ವಿತೀಯ ಸ್ಥಾನವನ್ನು 2 ಮಂಟಪಗಳು ಹಂಚಿಕೊಂಡಿವೆ. ಶ್ರೀ ಕೋಟೆ ಮಾರಿಯಮ್ಮ ದೇವಾಲಯ 'ಪಂಚಮುಖಿ ಆಂಜನೇಯನಿಂದ ಅಹಿರಾವಣ–ಮಹಿರಾವಣ ವಧೆ' ಎಂಬ ಪೌರಾಣಿಕ ಹಿನ್ನೆಲೆಯ ಮಂಟಪ ಮತ್ತು ಶ್ರೀಕೋಟೆ ಮಹಾಗಣಪತಿ ದೇವಾಲಯದ 'ಮಹಾ ಗಣಪತಿಯಿಂದ ಶತಮಹಿಷಿಯ ಸಂಹಾರ' ಎಂಬ ಕಥಾ ಸಾರಾಂಶದ ಮಂಟಪಗಳು ಕ್ರಮವಾಗಿ 88.5 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದವು. ಶ್ರೀಕರವಲೆ ಭಗವತಿ ಮಹಿಷ ಮರ್ಧಿನಿ ದೇವಾಲಯದ 'ಉಗ್ರ ನರಸಿಂಹನಿಂದ ಹಿರಣ್ಯಕಶ್ಯಪ ಸಂಹಾರ' ಎಂಬ ಮಂಟಪ ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಈ ಮಂಟಪ 84.5 ಅಂಕ ಗಳಿಸಲು ಮಾತ್ರವೇ ಸಾಧ್ಯವಾಯಿತು.



ಬಹುಮಾನ ವಿತರಣೆ: ಅ.25ರ ಬೆಳಗಿನ 7 ಗಂಟೆಗೆ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಮಡಿಕೇರಿ ನಗರ ದಸರಾ ಸಮಿತಿಯ ಮೂಲಕ ಮೊದಲ ಬಹುಮಾನ ಪಡೆದ ಮಂಟಪಕ್ಕೆ 24 ಗ್ರಾಂ ಚಿನ್ನ, ದ್ವಿತೀಯ ಸ್ಥಾನ ಪಡೆದ ಮಂಟಪಕ್ಕೆ 16 ಗ್ರಾಂ ಚಿನ್ನ ಮತ್ತು ತೃತೀಯ ಸ್ಥಾನದ ಮಂಟಪಕ್ಕೆ 10 ಗ್ರಾಂ ಚಿನ್ನ ನೀಡಿ ಗೌರವಿಸಲಾಯಿತು. ಇನ್ನುಳಿದ ಮಂಟಪಗಳಿಗೆ ಸಮಾಧಾನಕರ ಬಹುಮಾನವಾಗಿ ಬೆಳ್ಳಿಯ ಬಟ್ಟಲು, 4 ಶಕ್ತಿ ದೇವತೆಗಳ ಕರಗಗಳಿಗೆ ಬೆಳ್ಳಿಯ ದೀಪಗಳನ್ನು ನೀಡಿ ಗೌರವಿಸಲಾಯಿತು. ಮಾತ್ರವಲ್ಲದೇ ದಸರಾ ಸಮಿತಿ ಮಾಜಿ ಕಾರ್ಯಾಧ್ಯಕ್ಷ ದಿವಂಗತ ಎಸ್.ಸಿ. ಸುನೀಲ್ ಸುಬ್ರಮಣಿ ಸ್ಮರಣಾರ್ಥ ಅವರ ಕುಟುಂಬಸ್ಥರು ಸ್ಥಾನಗಳನ್ನು ಪಡೆದ ಮಂಟಪಗಳಿಗೆ ಮೊದಲ ಬಹುಮಾನವಾಗಿ 10 ಸಾವಿರ ನಗದು, ದ್ವಿತೀಯ ಸ್ಥಾನ ಪಡೆದ ಮಂಟಪಕ್ಕೆ 7 ಸಾವಿರ ಮತ್ತು ತೃತೀಯ ಸ್ಥಾನದ ಮಂಟಪಕ್ಕೆ 5 ಸಾವಿರ ನಗದನ್ನು ಬಹುಮಾನವಾಗಿ ನೀಡಿದರು.

ಮಂಟಪಗಳ ತೀರ್ಪಿಗೆ ಅಸಮಾಧಾನ: ಮಂಟಪಗಳ ಬಹುಮಾನ ಘೋಷಣೆಯಾಗುತ್ತಿದ್ದಂತೆಯೇ ತೀರ್ಪುಗಾರರ ವಿರುದ್ಧ ಮಂಟಪ ಸಮಿತಿಗಳು ಅಸಮಾಧಾನ ವ್ಯಕ್ತಪಡಿಸಿದವು. ದ್ವಿತೀಯ ಸ್ಥಾನವನ್ನು ಹಂಚಿಕೊಂಡ ಶ್ರೀ ಕೋಟೆ ಗಣಪತಿ ಮಂಟಪ ಸಮಿತಿ ಯಾವುದೇ ಬಹುಮಾನವನ್ನು ಸ್ವೀಕರಿಸದೇ ವೇದಿಕೆಯ ಮೇಲೆ ತೀರ್ಪುಗಾರಿಕೆಗೆ ಆಕ್ಷೇಪ ವ್ಯಕ್ತಪಡಿಸಿ ಹೊರ ನಡೆಯಿತು. ಇನ್ನು ಶ್ರೀ ಕೋಟೆ ಮಾರಿಯಮ್ಮ ಮಂಟಪ ಸಮಿತಿ ಸದಸ್ಯರು ಬಹುಮಾನ ಸ್ವೀಕರಿಸಿದರೂ, ತೀರ್ಪುಗಾರಿಕೆಗೆ ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆಯಿತು. ಈ ಬೆಳವಣಿಗೆಗಳು ನಡೆಯುವ ಸಾಧ್ಯತೆಯನ್ನು ಮೊದಲೇ ಅರಿತಿದ್ದ ಪೊಲೀಸ್ ಇಲಾಖೆ ವೇದಿಕೆ ಮುಂಭಾಗ ಪೊಲೀಸ್ ಸರ್ಪಗಾವಲು ಹಾಕಿತ್ತಲ್ಲದೇ, ಅಹಿತಕರ ಘಟನೆಗಳಿಗೆ ಅವಕಾಶ ನೀಡಲಿಲ್ಲ.

ಶೋಭಾಯಾತ್ರೆಯಲ್ಲಿ ಉರುಳಿದ ಟ್ರ್ಯಾಕ್ಟರ್; ಮೂವರಿಗೆ ಗಾಯ



ಮಡಿಕೇರಿ,ಅ.25– ಈ ಬಾರಿಯ ದಸರಾ ಉತ್ಸವದ ಶೋಭಾಯಾತ್ರೆ ವೇಳೆ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದ್ದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯ ಮಂಟಪದ ಟ್ರ್ಯಾಕ್ಟರ್ ಉರುಳಿ ಬಿದ್ದ ಪರಿಣಾಮ ಟ್ರ್ಯಾಕ್ಟರ್ ಚಾಲಕ ಸೇರಿದಂತೆ ಇಬ್ಬರಿಗೆ ಗಾಯಗಳಾಗಿವೆ. ಸಂಪ್ರದಾಯದಂತೆ ಪೇಟೆ ಶ್ರೀ ರಾಮಮಂದಿರ ಮಂಟಪದ ಆಗಮನದೊಂದಿಗೆ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯ ಮಂಟಪ 'ಶ್ರೀ ದುರ್ಗಾ ಸಪ್ತಶತಿ ಪುರಾಣದ ಕದಂಬ ಕೌಶಿಕೆ' ಕಥಾ ಭಾಗವನ್ನಾಧರಿಸಿದ ಕಲಾಕೃತಿಗಳೊಂದಿಗೆ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿತ್ತು.

ದೇವಾಲಯದಿಂದ ಮಂಟಪ ಹೊರಟು ನಗರದ ಡಿಸಿಸಿ ಬ್ಯಾಂಕ್ ಮುಂಭಾಗದ ಇಳಿಜಾರು ರಸ್ತೆಯಲ್ಲಿ ಅ.25ರ ಬೆಳಗಿನ 4 ಗಂಟೆಯ ಸಮಯದಲ್ಲಿ ಆಗಮಿಸುತ್ತಿದ್ದಂತೆಯೇ ಆರ್ಚ್ ಬೋರ್ಡ್ ಸಹಿತ ದೇವಿಯ ಉತ್ಸವ ಮೂರ್ತಿಯನ್ನು ಹೊಂದಿದ್ದ ಟ್ರ್ಯಾಕ್ಟರ್ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಗೆ ಮಗುಚಿ ಬಿದ್ದಿತು. ಇದರಿಂದ ಚಾಲಕ ಹಾಗೂ ಮತ್ತೋರ್ವರಿಗೆ ಗಾಯಗಳಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಂಟಪ ಹೊತ್ತ ಟ್ರ್ಯಾಕ್ಟರ್ ಬರುತ್ತಿದ್ದ ಸಂದರ್ಭ ಸ್ಥಳದಲ್ಲಿ ನೂರಾರು ಮಂದಿ ನೆರೆದಿದ್ದು, ಎಲ್ಲರೂ ಅಪಾಯದಿಂದ ಪಾರಾಗುವ ಮೂಲಕ ಬಹು ದೊಡ್ಡ ಅನಾಹುತ ಕೂದಲೆಳೆಯ ಅಂತರದಲ್ಲಿ ತಪ್ಪಿದಂತಾಗಿದೆ. ಮಂಟಪ ಬಿದ್ದ ಸಂದರ್ಭ ಟ್ರ್ಯಾಕ್ಟರ್‌ನಲ್ಲಿ ಸಣ್ಣ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದ್ದು, ಸ್ಥಳದಲ್ಲಿದ್ದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿಯನ್ನು ನಂದಿಸುವಲ್ಲಿ ಸಫಲರಾಗಿದ್ದಾರೆ. ಲೈಟ್ ಬೋರ್ಡ್, ಸ್ಟುಡಿಯೋ ಸೆಟ್ಟಿಂಗ್, ಕೂಲ್ ಫಯರ್‌ಗೆ ಹಾನಿಯಾಗಿದೆ. ಈ ಘಟನೆ ಕುರಿತು ಟ್ರ್ಯಾಕ್ಟರ್ ಚಾಲಕನ ವಿರುದ್ಧ ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕಣ್ಣೀರು ಹಾಕಿದ ಸಮಿತಿ: ಈ ಬಾರಿ ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ಮಂಟಪ ತನ್ನ 50ನೇ ವರ್ಷದ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿತ್ತು. ಈ ಹಿನ್ನೆಲೆಯಲ್ಲಿ 30 ಲಕ್ಷ ರೂ. ವೆಚ್ಚ ಮಾಡಿ ಅದ್ದೂರಿಯಾಗಿಯೇ ಮಂಟಪವನ್ನು ಸಿದ್ಧಪಡಿಸಲಾಗಿತ್ತು. ಶೋಭಾಯಾತ್ರೆಯಲ್ಲಿ ಇತರ ಮಂಟಪಗಳಿಗೆ ತೀವ್ರ ಪೈಪೋಟಿ ನೀಡಬೇಕೆನ್ನುವ ಕಾರಣದಿಂದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯ ಸಮಿತಿಯ ನೂರಾರು ಯುವಕರು ಮತ್ತು ಹಿರಿಯರು 2 ತಿಂಗಳಿನಿಂದಲೇ ಮಂಟಪದ ಸಿದ್ಧತೆಯಲ್ಲಿ ತೊಡಗಿದ್ದರು. ಆದರೆ ಶೋಭಾಯಾತ್ರೆ ಸಂದರ್ಭ ದೇವಿಯ ಉತ್ಸವ ಮೂರ್ತಿಯನ್ನು ಹೊತ್ತಿದ್ದ ಟ್ರ್ಯಾಕ್ಟರ್ ಮಗುಚಿ ಬಿದ್ದ ಪರಿಣಾಮ ಸಮಿತಿ ಸದಸ್ಯರು ಸ್ಥಳದಲ್ಲೇ ಕಣ್ಣೀರು ಸುರಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಮಹಿಳೆಯರ P.G
ಮಹಿಳಾ ವಿದ್ಯಾರ್ಥಿಗಳು ಮತ್ತು ಉದ್ಯೋಗಸ್ಥ ಮಹಿಳೆಯರಿಗೆ 2/3 ಶೇರಿಂಗ್ ರೂಂಗಳು, ವೈಫೈ, ಸೆಕ್ಯೂರಿಟಿ, ಸಸ್ಯಾಹಾರಿ ಮತ್ತು ಮಾಂಸಾಹಾರಿ ಊಟದೊಂದಿಗೆ ಕೈಗೆಟುಕುವ ಬೆಲೆಯಲ್ಲಿ ದೊರೆಯುತ್ತದೆ
9591547239
6366141518

ತಕ್ಷಣ ಬೇಕಾಗಿದ್ದಾರೆ
ದಟ್ಟಗಳ್ಳಿ ಮತ್ತು ಬೋಗಾದಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಯೋಮಿತಿ : 50 ವರ್ಷದೊಳಗೆ
ವಿದ್ಯಾರ್ಹತೆ : SSLC, ಸಂಬಳ: 14500/-
ESI & PF ಸೌಲಭ್ಯವಿರುತ್ತದೆ.
9620777819
9620667819

ಸಣ್ಣ ಮನೆ ಮಾರಾಟಕ್ಕಿದೆ
8x38 ಅಡಿಯುಳ್ಳ ಸಣ್ಣ ಮನೆ (ಕಲ್ನಾರ್ ಶೀಟ್) ಪೂರ್ವ ದಿಕ್ಕು
4ನೇ ಕ್ರಾಸ್ ಕೃಷ್ಣಮೂರ್ತಿಪುರಂ
7975447262
ಬೆಲೆ : 22 ಲಕ್ಷ

JINI'S PILATES STUDIO
WE ARE HIRING!
* FITNESS INSTRUCTOR
Min Experience : 2 Years
Skills : Good Communication / Commanding.
Reach Us on:
9686868697

ಬೇಕಾಗಿದ್ದಾರೆ
ಗೋಕುಲಂನಲ್ಲಿರುವ ಪ್ರೀ-ಸ್ಕೂಲ್‌ನಲ್ಲಿ ಕೆಲಸ ಮಾಡಲು ಸಹಾಯಕ / ಆಯಾ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9632866616

House for Lease
2 BHK, 60x40 Corner house in Hebbal 2nd Stage, Behind Sankranthi Circle with garage.
Price: Rs. 20 Lakhs.
Mob: 9900850729

ವಿಕೇರ್ ಹೋಮ್ ನರ್ಸಿಂಗ್ ಮೈಸೂರು
ಮೈಸೂರಿನಲ್ಲಿ ರೋಗಿಯ ಆರೈಕೆಯ ಕೆಲಸಕ್ಕೆ
ಮಹಿಳಾ ಹೋಮ್ ನರ್ಸ್ ಬೇಕಾಗಿದ್ದಾರೆ
ವೇತನ 15,000 – 23,000/-
ಸಂಪರ್ಕಿಸಿ:
+91 93800 43696,
+91 6364 48 1333

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಕೆಲಸಕ್ಕೆ ಬೇಕಾಗಿದ್ದಾರೆ
ಕಂಪ್ಯೂಟರ್‌ನಲ್ಲಿ ಅನುಭವವುಳ್ಳವರು ಸೈಬರ್ ಸೆಂಟರ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಸ್ಥಳ: ವಿದ್ಯಾರಣ್ಯಪುರಂ
(ಆಕರ್ಷಕ ಸಂಬಳ ನೀಡಲಾಗುವುದು)
8762802661
7899293166

ಬೇಕಾಗಿದ್ದಾರೆ
ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಚಾಲಕರು, ಹೌಸ್ ಕೀಪಿಂಗ್ ಕೆಲಸಕ್ಕೆ, ಹೋಂ ನರ್ಸಿಂಗ್ ಹಾಗೂ ಆಯಾ ಕೆಲಸಕ್ಕೆ ಜನ ಬೇಕಾಗಿದ್ದಾರೆ. ಸಂಬಳ: 12000 ರಿಂದ 18000ವರೆಗೆ
6366141518

ಛತ್ರ ಖಾಲಿ ಇದೆ
9th & 10th Dec. 2023
GLN Convention Hall
9845129666, 9606225582



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580

ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು-570 007
9448048576, 9632378020

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಬಸವ ಮಾರ್ಗ ಫೌಂಡೇಷನ್
33ನೇ 21 ದಿನಗಳ ಉಚಿತ ಕುಡಿತ ಬಿಡಿಸುವ ಶಿಬಿರ
ದಿನಾಂಕ: 27-10-2023 ರಿಂದ 16-11-2023 ರವರೆಗೆ.
8803344999, 9742010101, 9742919191
ಶ್ರೀಮತಿ ಬಸಮ್ಮ ಶ್ರೀ ಎಂ. ಸೋನಿ ಕರೀಗೌಡರ ಫಾರಂ, ನಂ. 86/1ಬಿ ಶ್ರೀರಾಂಪುರ ರಿಂಗ್ ರಸ್ತೆ (ಜಂಕ್ಷನ್ ಹತ್ತಿರ) ಕಸಬಾ ಹೋಬಳಿ, ಮೈಸೂರು

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 15000/-
ESI & PF ಸೌಲಭ್ಯವಿರುತ್ತದೆ.
9845010281
9844171968

ಡ್ರೈವರ್ & ಹೆಲ್ಪರ್ ಬೇಕಾಗಿದ್ದಾರೆ
ಟಾಟಾ ಏಸ್ ವಾಹನಕ್ಕೆ ಡ್ರೈವರ್ ಬೇಕಾಗಿದ್ದಾರೆ
ವೇತನ : 12,000/- ದಿಂದ 15,000/-
ಉಚಿತ ವಸತಿ ಇರುತ್ತದೆ.
8884179981

neem BOND PLATINUM

PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

Aquaguard & Kent Sales and Service
Kuvempunagar, Mysore
Service Charge: 300
9901200444

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886



ಸ್ಪಾಟ್ ಡೆಲಿವರಿ ರೂ. 8/- ಮಾತ್ರ
ಟೇಬಲ್ ಮೌಲ್ಡ್ ಇಟ್ಟಿಗೆಗಳು
82178 93849
98442 24480

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: Diploma E&E & Mech, ITI, 8th to 2nd PUC ವರೆಗೆ ಮತ್ತು ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಊಟ, ವಸತಿ ESI, PF ಸೌಲಭ್ಯ. ಸಂಬಳ: 11,400 ರಿಂದ 18,000 ಇರುತ್ತದೆ. ಸಂಪರ್ಕಿಸಿ:
8951869646, 9902645646

ಶ್ರೀ ಮೂರ್ತಿ ಟೂರಿಸ್ಟ್
5-11-23 (ಭಾನುವಾರ) ತಲಕಾವೇರಿ ಭಾಗಮಂಡಲ, ಅಬ್ಬಿಫಾಲ್ಸ್ ಪ್ರವಾಸ (ತಿಂಡಿ, ಕಾಫೀ / ಊಟ ಸೇರಿದೆ)
ಮನೆ ಬಾಡಿಗೆಗೆ ಇದೆ
20x30 Ground Floor, (Veg only) ರಾಮಕೃಷ್ಣನಗರ E ಮತ್ತು F Block ನಲ್ಲಿ
9480733069

ಬೇಕಾಗಿದ್ದಾರೆ
ಬ್ಯೂಟಿಷಿಯನ್
ಕುವೆಂಪುನಗರ
7337896965

ಮನೆ ಮಾರಾಟಕ್ಕಿದೆ
20x30, 3BHK ಡ್ಯೂಪ್ಲೆಕ್ಸ್ ಪೂರ್ವಕ್ಕೆ ಬಾಗಿಲು # 16 ವಿನಾಯಕ ಗಾರ್ಡನ್ ಸಿಟಿ ಗೋಲ್ಡ್, ಟಿ.ನರಸೀಪುರ ರಸ್ತೆ, ರಾಜಶೇಖರ್ ಹಾಸ್ಪಿಟಲ್ ಎದುರು ಆಲನಹಳ್ಳಿ ಸಿಗ್ನಲ್ ಹತ್ತಿರ ರಿಂಗ್ ರೋಡ್.
(ಓನರ್ ನಂಬರ್)
8095503296

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ|| ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಹೊಸ ಮನೆ ಮಾರಾಟಕ್ಕಿದೆ
ಪೂರ್ವ ದಿಕ್ಕಿನ ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿವೆ ಶ್ರೀರಾಂಪುರ ರಿಂಗ್ ರೋಡ್, ಶ್ರೀನಗರ ಹಿಂಭಾಗ ಮೈಸೂರು
8050345574

ಹೊಸ ಮನೆ ಮಾರಾಟಕ್ಕಿದೆ
20x40
ನೆಲ ಅಂತಸ್ತು, 1ನೇ ಅಂತಸ್ತು, 2ನೇ ಅಂತಸ್ತು, 2ಬಿಹೆಚ್‌ಕೆ, ಜೆಪಿನಗರ, ಲಾಸ್ಟ್ ಬಸ್ ಸ್ಟಾಪ್, ಮಹದೇವಪುರ ಹತ್ತಿರ
6360452155
9880415347

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160, 6361056646

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

9/11A ಹಾಗೂ 11B ಖಾತೆಗಳಿಗೆ ಲೋನ್ ಮಾಡಿಕೊಡಲಾಗುವುದು
ಶೀಟಿನ ಮನೆ, ಹೆಂಚಿನ ಮನೆ, ಆರ್‌ಸಿಸಿ ಮನೆ ಮೇಲೆ ಸಾಲ ಮತ್ತು ಮನೆ ಖರೀದಿಸಲು, ಮನೆ ನವೀಕರಣ ಮಾಡಲು ಬ್ಯಾಂಕ್ ಲೋನ್ ಮಾಡಿಕೊಡಲಾಗುವುದು
9008504456

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಉದ್ಯೋಗವಕಾಶ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ 8ನೇ, 9ನೇ & 10ನೇ ತರಗತಿ ಪಾಸ್ ಫೇಲಾದ ಯುವಕ-ಯುವತಿಯರು, ಮಹಿಳೆಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ ಊಟ ಮತ್ತು ಸಂಬಳ ಇರುತ್ತದೆ. ಹೋಂ ನರ್ಸಿಂಗ್ ತರಬೇತಿ ಇರುತ್ತದೆ.
8123630683

ಬೇಕಾಗಿದ್ದಾರೆ
1) ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್‌ಗಳು
2) ಹೌಸ್ ಕೀಪರ್(ಮಹಿಳೆಯರು)
3) ಡೋರ್‌ಮೆನ್
ಮೇಲ್ಕಂಡ ಆಸಕ್ತ ಸಿಬ್ಬಂದಿಗಳು
9611236261

RV CONSTRUCTIONS
Sanction Plans, Sanction Plans Upload (E-submission) Construction Plans (As per Vastu), Estimations
REASONABLE RATES
Office : 0821-2002063
7975110915
D.Subbaiah Road, Mysore-04

Hiring Immediately
Sapthagiri Services, Mysore
Male candidates only.
Qualification: PUC / Diploma / Any Pass / Fail. Age below 30 years. Salary: 12 to 20 thousand.
9880151303, 9916080793

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

Vacancies @ Reputed Hotel in Mysore
1) Assistant Cook for North & Chinese.
2) Vegetable cutting expert for South Indian.
3) House Keeping or Room Cleaning Boys required.
4) Security.
Mob: 8217737552

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

DOLLAR ESTATE PROPERTIES PVT LTD
WE ARE HIRING FOR
* Sales Manager (Experinece) - 1 No.
* Sales Executive - 10 Nos.
(Any Degree with Property Experience)
* Team Leader - 02 Nos (Any Degree with Property Experience)
* Drivers - 03 Nos. * Tele callers - 05 Nos.
with attractive salary + Incentive
9538385049,08214247004

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಲೀನಿಂಗ್ ಮತ್ತು ಪ್ಯಾಕಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ನಜರ್‌ಬಾದ್, ಮೈಸೂರು

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
24-11-23: ರಾಯಲ್ ರಾಜಸ್ತಾನ್, ಜೈಪುರ, ಬಿಕನೇರ್, ಜೈಸಲ್ಮಾರ್, ಜೋದ್‌ಪುರ್, ಉದಯ್ ಪುರ್, ಚಿತ್ತೋರ್‌ಗರ್, ಪುಷ್ಕರ್. 21-12-2023: ಗುಜರಾತ್, ನಾಗನಾಥ್, ಸೋಮ್‌ನಾಥ್, ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ಸ್ಟ್ಯಾಚ್ಯು. 10-11-2023: ಶಿರಡಿ, ಪಂಡರಾಪುರ, ಭೀಮಾ ಶಂಕರ, ಕೊಲ್ಲಾಪುರ ಮಹಾಲಕ್ಷ್ಮಿ. 2-11-2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ. 13-11-2023: ಪುರಿ ಜಗನ್ನಾಥ್, ಭುವನೇಶ್ವರ.
9591017782, 9964527782

Urgent Requirement
Require B.Com / Any Graduates, only freshers for Document Controller position in Steel Detailing Company located at Dattagalli. Age limit 22 years. Computer knowledge, good communication skills are mandatory and prefer local Mysore candidates. Interested young and dynamic candidates can send their resume to:
deepu.mc@blanco-sdspl.com
OR Whatsapp @ 9972342126

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

HOUSE FOR SALE
33x40 ft., North facing, as per Vasthu, nice construction with 3 rooms. Bank loan available. Near Sangam Circle, Vijayanagar 2nd Stage. Rate: 88 Lakhs, slightly negotiable.
Mob: 9919917519

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್: (30 yrs to 50 yrs.) SSLC, PUC (ಹೂಟಗಳ್ಳಿ, ನಂಜನಗೂಡು, ವರುಣ).
2) ಹೌಸ್‌ಕೀಪಿಂಗ್ – ಮಹಿಳೆಯರು (ಕುವೆಂಪುನಗರ, ಮೇಟಗಳ್ಳಿ, ಹೂಟಗಳ್ಳಿ).
ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿರುತ್ತದೆ.
9739166772, 9880419847

ಬಾಡಿಗೆಗೆ/ಭೋಗ್ಯಕ್ಕೆ
ಜೆ.ಪಿನಗರದಲ್ಲಿ ಒಂದೇ ಕಟ್ಟಡದಲ್ಲಿ (ಬಿಲ್ಡಿಂಗ್) ಅಟ್ಯಾಚ್ ಬಾತ್ರೂಮ್ ಹೊಂದಿರುವ 8 ರೂಂಗಳು ಬಾಡಿಗೆಗೆ / ಪಿ.ಜಿ.ನಡೆಸಲು ಬಾಡಿಗೆಗೆ ದೊರೆಯುತ್ತದೆ. 2BHK ಮನೆ ಬಾಡಿಗೆಗೆ/ಭೋಗ್ಯಕ್ಕೆ ದೊರೆಯುತ್ತದೆ.
ಸ್ಥಳ: ಜೆ.ಪಿನಗರ, ಮೈಸೂರು
8296695765
7348843351

ಬೇಕಾಗಿದ್ದಾರೆ
ಶ್ರೀರಂಗಪಟ್ಟಣದಲ್ಲಿ DTP, RDS ಅನುಭವವಿರುವ ಆಪರೇಟರ್‌ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. (ಕೋರಲ್ ಮತ್ತು ಪೇಜ್‌ಮೇಕರ್) ಆಕರ್ಷಕ ಸಂಬಳ ಕೊಡಲಾಗುತ್ತದೆ.
8431591893
9538311556

SITE FOR SALE
40x60 site sale at Suvarna Nagar (Gaddige Road, Bogadi).
Call: 9880273834

ಬೇಕಾಗಿದ್ದಾರೆ
ನೈಟ್ ಐ ಸೆಕ್ಯೂರಿಟಿ ಸರ್ವೀಸಸ್ (ಪ್ರೈ) ಲಿ.
ಸಂಪರ್ಕಿಸಿ: Mob: 9606970941
ಗಣಪತಿ ದೇವಸ್ಥಾನದ ಹತ್ತಿರ, ಕೆಹೆಚ್‌ಬಿ ಹೂಟಗಳ್ಳಿ-ಬೆಳವಾಡಿ ಪೋಸ್ಟ್
1) ಫೀಲ್ಡ್ ಆಫೀಸರ್, (2) ಸೆಕ್ಯೂರಿಟಿ ಗಾರ್ಡ್ಸ್, (3) ಸೆಕ್ಯೂರಿಟಿ ಸೂಪರ್ ವೈಸರ್, (4) ಹೌಸ್ ಕೀಪಿಂಗ್ ಮಹಿಳೆಯರು, (5) ಲೇಡಿ ಗಾರ್ಡ್ಸ್

ಮನೆಯಲ್ಲಿಯೇ ಕೆಲಸ
WORK @ HOME
JOB
ಟೈಪಿಂಗ್ ಕೆಲಸ ವಾರದ ಸಂಬಳ 3,000 ರಿಂದ 18,000
ಮೈಸೂರಿನ M N C ಕಂಪನಿಗಳಲ್ಲಿ ಕೆಲಸ ಮಾಡಲು
ತಿಂಗಳಿಗೆ ಸಂಬಳ 16,000 ರಿಂದ 45,000 ಉಚಿತ ವಸತಿ/ ಊಟದೊಂದಿಗೆ.esi pf
8749098879

ಹೊಸ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
30x40 - N/F, E/ಡೋರ್, 3BHK, ಅಟ್ಯಾಚ್ ಬಾತ್‌ರೂಮ್, ಆಲ್‌ಟೀಕ್ ಇಟಾಲಿಯನ್ ಕಿಚನ್, ಕಾರ್‌ಪಾರ್ಕ್ ಸೌಲಭ್ಯವಿದೆ, ಕಂದಾಯನಗರ 1ನೇ ಹಂತ, ಶ್ರೀರಾಂಪುರ, ಮೈಸೂರು
9901899355

JNANAJYOTHI VIDYALAYA, BEERIHUNDI
English teacher-1 for 4th to 8 classes. Maths & EVS Teacher for 1st to 3rd classes. D Ed. B Ed. or any degree candidates
CONTACT
9845390377, 8197057626

HOUSE FOR LEASE
30X40 N-East Facing 2 BHK 1st Floor @ Bogadi Near Nirmithi Kendra.
(Brokers Excuse)
9964608362
7892927208

SITES FOR SALE
Govt. approved Sites for Sale in Vijayanagar 4th Stage, Near Srirampura Ring Road, Near MIT College. Ready to Register and in installments
9663761853

SBR ಇಂಟೀರಿಯರ್ಸ್
ಪಾಲಿಗ್ರಾನೈಟ್ ಡಿಜೈನ್ (New Trend) WPC ವಾಲ್ ಪ್ಯಾನಲ್ (TV Cabin Ceiling) ಆರ್ಟಿಫಿಶಿಯಲ್ ಗ್ರಾಸ್‌ಲಾನ್ ರಿಯಾಯಿತಿ ದರದಲ್ಲಿ ಮಾಡಿಕೊಡಲಾಗುತ್ತದೆ.
SBR 9900840025

ಕಳೆದಿದೆ
ಚಿನ್ನಮ್ಮ ಬಿನ್ ಸಿದ್ದಪ್ಪ, ಪುರಗ್ರಾಮ ಹಂಪಾಪುರ ಹೋಬಳಿ ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ. ಇವರಿಗೆ ಸೇರಿದ ದಾನ ಪತ್ರದ ನಂ. HDK-1-02820-2018-19 ದಿನಾಂಕ: 16-10-2023 ಸಮೀಪ ಕಳೆದು ಹೋಗಿರುತ್ತದೆ. ಸಿಕ್ಕಲ್ಲಿ ಸಂಪರ್ಕಿಸಿ:
7892888255

ಹೊಸ ಮನೆ ಮಾರಾಟಕ್ಕಿದೆ
ದಕ್ಷಿಣ ದಿಕ್ಕಿನ ಮುಡಾ ನಿವೇಶನ ಪೂರ್ವ ದಿಕ್ಕಿನ ಬಾಗಿಲು 100% ವಾಸ್ತು ಪ್ರಕಾರ ಸೆಮಿ ಫರ್ನಿಷಡ್, 3BHK+ Store Room ವಿಜಯನಗರ 4ನೇ ಹಂತ.
9663727759
7892942305

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
ಸಂಬಳ: 8000 ರಿಂದ 11000ರವರೆಗೆ
8150005111

ಖರೀದಿಗೆ ಹೊಸ ಮನೆಗಳು ಬೇಕಾಗಿದೆ
ಮುಡಾ ವ್ಯಾಪ್ತಿಯಲ್ಲಿ ಖರೀದಿಗೆ ಹೊಸ ಡ್ಯೂಪ್ಲೆಕ್ಸ್ ಅಥವಾ 5 ವರ್ಷ ಹಳೆಯದಾದ ಮನೆಗಳು ಬೇಕಾಗಿದೆ.
30x40, 30x50, 40x60
ಸಂಪರ್ಕಿಸಿ: ಶಕ್ತಿ ಪ್ರಾಪರ್ಟೀಸ್
ದೇವರಾಜ ಅರಸು ರಸ್ತೆ, ಮೈಸೂರು
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9731135888

ಮೈಸೂರು ಮ್ಯಾರೇಜ್ ಬ್ಯೂರೋ
ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ಜಂಗಮ, ನಯನ ಕ್ಷತ್ರಿಯ, ಅರಸು, ಮರಾಠ, ತಮಿಳು, ಮಲಯಾಳಿ, ಭೋವಿ, ಮಡಿವಾಳ, ಕುಂಬಾರ, ದೇವಾಂಗ, ಗೊಲ್ಲ, ಆದಿಕರ್ನಾಟಕ, ನಾಯಕ, ವಿಶ್ವಕರ್ಮ, ಈಡಿಗ, ಕುರುಹಿನ ಶೆಟ್ಟಿ, ರೆಡ್ಡಿ, ಆರ್ಯ ವೈಶ್ಯ, ಗಾಣಿಗ, ಉಪ್ಪಾರ, ಜಿಎಸ್‌ಬಿ, ಲಂಬಾಣಿ, ಬಂಟ್ಸ್, ಭಜಂತ್ರಿ, ಜೈನ್, ಚೆಟ್ಟಿ, ತಿಗಳ, ಕೂರ್ಗಿ, ಮುಸ್ಲಿಂ, ಕ್ರಿಶ್ಚಿಯನ್, ಬಲಿಜ ನಾಯ್ಡು, ಮೇದಾರ, ಇನ್ನು ಎಲ್ಲಾ ಜಾತಿಯ ಸುಂದರ, ಶ್ರೀಮಂತ, ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ:
ಡಾ.ಗುರೂಜಿ
9448229184,7899625268

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ:
ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ-25
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಸಿಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
8867064586

GOVT JOB ಇರುವ ಶ್ರೀಮಂತ ವಿಧುರನಿಗೆ ವಧು ಬೇಕಾಗಿದ್ದಾರೆ.
ಒಕ್ಕಲಿಗ Age: 50/5.6 MA, M.Ed, Govt Job Salary 86000 ಅಡಿಕೆ/ತೆಂಗು ತೋಟ ಹೊಂದಿರುವ Well Setteld Independent ಇರುವಂತಹ ವಿಧುರನಿಗೆ ಯಾವುದೇ ಜಾತಿಯ ಅಭ್ಯಂತರ ವಿಲ್ಲದೆ 2ನೇ ಸಂಬಂಧಕ್ಕೆ ವಿಧವೆ/ ವಿಚ್ಛೇದಿತೆ/ ನೌಕರಸ್ಥ/ಬಡವೆ/ವಧು ಬೇಕಾಗಿದ್ದಾರೆ. ಮಕ್ಕಳಿದ್ದರೂ ಪರವಾಗಿಲ್ಲ (ಸರಳ ವಿವಾಹಕ್ಕೆ ಆದ್ಯತೆ)
ಬೆಂಗಳೂರು: 9480385742

ಗಾರ್ಮೆಂಟ್ಸ್ ಮಾರಾಟಕ್ಕಿದೆ

ಸಿಂಗಲ್ ನೀಡ್ಸ್	-8 ನಂಬರ್
ಕನ್‌ಜಯ್	-1 ನಂಬರ್
ತ್ರಿಬಲ್ ನೀಡ್ಸ್	-1 ನಂಬರ್
ಐರನ್ ಸೆಟ್	-1 ನಂಬರ್
ಪ್ರೀಡ್ ಪ್ರೆವಲ್	-1 ನಂಬರ್
ಕಟಿಂಗ್ ಟೇಬಲ್	-1 ನಂಬರ್
ಕಟಿಂಗ್ ಮೆಷಿನ್	-1 ನಂಬರ್
ಟೇಬಲ್	-2 ನಂಬರ್

9108493969

HOUSES & OFFICE SPACE FOR RENT
@ SARASWATHIPURAM KUVEMPUNAGAR & SURROUNDINGS
S.S.PROPERTY SERVICES
(Opp.Kuvempu School), S.S.Puram
9342125252

1) 30x40 16 lakhs Hd kote road
2) 30x40 sites T.Narasipura road Saptamatruke Layout attch
3) 20x30 g+2 house Dattagalli
4) 14x100 near RAMAVILAS road
5) 40x70 nice vista Rammanahalli near
6) 40x60 ksfc layout Satagalli
7) 40x60 N ring road facing near Uttanahalli.
8) 20x30 g+1 house Srirampura
Prakruthi Properties
9538690359,9035990359

WANTED
For Medical Store/ Pharma Distributor
Male Staff - 4
with / without experience
SSLC / PUC Pass / Fail
9986108208
9739377827

ಬೇಕಾಗಿದ್ದಾರೆ
ಮಡಿಕೇರಿ ಸಮೀಪ ಎಸ್ಟೇಟ್ ಹೋಂಸ್ಟೇಯಲ್ಲಿ ಕೆಲಸ ಮಾಡಲು ದಂಪತಿಗಳಿಗೆ ಅವಕಾಶವಿದೆ.
ಊಟ, ವಸತಿ ಸೌಲಭ್ಯವಿದೆ.
9448048829

ಬೇಕಾಗಿದ್ದಾರೆ
ಮೈಸೂರು ನಂಜುಮಳಿಗೆ ಹೋಟೆಲ್‌ನಲ್ಲಿ ಕ್ಲೀನಿಂಗ್ & ವಾಶಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ & ಕಾಫಿ ಕೌಂಟರ್‌ಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
9738117713
8088737563

ಕೆಲಸಕ್ಕೆ ಬೇಕಾಗಿದ್ದಾರೆ
M.R Motors
TVS ಆಟೋ ಶೋರೂಂನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಮೆಕ್ಯಾನಿಕ್‌ಗಳು ಕೆಲಸಕ್ಕೆ ಬೇಕಾಗಿದ್ದಾರೆ.
ಉಚಿತ ರೂಂ ವ್ಯವಸ್ಥೆ ಇರುತ್ತದೆ.
B.B. Multiplex # 647, Adhichunchanagiri Road, Kuvempunagara, Near Aravinda Hospital, Mysore
8970592073/6363552350

ಮನೆ ಬಾಡಿಗೆಗಿದೆ
97, 30x50 West Facing North Door, ಮೊದಲನೇ ಮಹಡಿ 2BHK ಡೈನಿಂಗ್ ಹಾಲ್, ಪೂಜಾ ರೂಂ ಸೌಲಭ್ಯವುಳ್ಳ ಮನೆ ರಾಮಮಂದಿರ ಮುಖ್ಯರಸ್ತೆ, ಜಯನಗರ, ಮೈಸೂರು (ಸಸ್ಯಾಹಾರಿಗಳಿಗೆ ಮಾತ್ರ)
15,000/- ಬಾಡಿಗೆ
8892323823,7975757858

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಹೋಟೆಲ್‌ಗೆ ರಿಸೆಪ್ಷನಿಸ್ಟ್ ಮತ್ತು ರೂಂ ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ: ರಾಯಲ್ ಇನ್
ಕೆ.ಆರ್.ಎಸ್. ರಸ್ತೆ, ಮೈಸೂರು
9945707708

ಬೇಕಾಗಿದ್ದಾರೆ
ಮೈಸೂರಿನ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ:
ಊಟ, ವಸತಿ, ಉಚಿತದೊಂದಿಗೆ
ಸಂಬಳ: 12000-18000
(ಮೊದಲು ಬಂದವರಿಗೆ ಆದ್ಯತೆ)
9035113222

ಒಂದನೇ ಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಲೋಕಾರ್ಪಣೆ

ಮೈಸೂರಿನ ಪ್ರಥಮ ಸಸ್ಯ ಶಾಸ್ತ್ರೀಯ ತೋಟದಲ್ಲಿ 290 ಸಸ್ಯ ಪ್ರಭೇಧಗಳನ್ನು ಬೆಳೆಸಲಾಗಿದೆ. ವಿನಾಶದ ಅಂಚಿನಲ್ಲಿರುವ ಅಪರೂಪದ ಸಸ್ಯ ಪ್ರಭೇದಗಳನ್ನು ಇಲ್ಲಿ ಬೆಳೆಸಿ, ಸಂರಕ್ಷಿಸಲಾಗಿದೆ. ಸಸ್ಯ ಪ್ರಭೇದಗಳ ಸಮಗ್ರ ಮಾಹಿತಿ ದಾಖಲಿಸುವ ವೈಜ್ಞಾನಿಕ ಸಸ್ಯ ಕೇಂದ್ರವಾಗಿಸುವ ಉದ್ದೇಶದಿಂದ ಸಸ್ಯ ಶಾಸ್ತ್ರೀಯ ತೋಟವನ್ನು ನಿರ್ಮಾಣ ಮಾಡಿದ್ದು, ಸಸ್ಯ ಪ್ರಭೇದಗಳ ಬಗ್ಗೆ ವಿದ್ಯಾರ್ಥಿಗಳು, ಪರಿಸರ ಪ್ರಿಯರು ಅಭ್ಯಸಿಸಲು ಅವಕಾಶ ಕಲ್ಪಿಸಲಾಗಿದೆ. ಖ್ಯಾತ ಪರಿಸರ ತಜ್ಞ ಡಾ.ಎ.ಎನ್.ಯಲ್ಲಪ್ಪರೆಡ್ಡಿ ಅಧ್ಯಕ್ಷತೆಯಲ್ಲಿ 12 ಜನರ ತಜ್ಞರಿರುವ ಸಮಿತಿ ರಚಿಸಿ ಅವರು ಮಾಡಿದ ಶಿಫಾರಸು ಹಾಗೂ ಮಾಸ್ಟರ್ ಪ್ಲಾನ್ ನಂತೆ ಮೈಸೂರಿನ ಸಸ್ಯ ಶಾಸ್ತ್ರೀಯ ಈ ತೋಟವನ್ನು ಅಭಿವೃದ್ಧಿ ಮಾಡಲಾಗಿದೆ. ದೇಶ-ವಿದೇಶದ ಅಪರೂಪದ ಸಸ್ಯ ಪ್ರಭೇದಗಳಿರುವ 14 ತೋಟಗಳನ್ನು ನಿರ್ಮಾಣ ಮಾಡಲಾಗಿದೆ. ವೃಕ್ಷೋದ್ಯಾನ, ಗುಲಾಬಿ ತೋಟ, ಸೌಗಂಧಿಕ ಗಿಡಗಳ ತೋಟ, ಕಿರುಹಣ್ಣುಗಳ ತೋಟ, ಟೋಪಿಯರಿ ಗಾರ್ಡನ್, ಬೊಂಬು-ಬಿದಿರು ತಾಣ, ತಾಳೆ ಜಾತಿಯ ವೃಕ್ಷೋದ್ಯಾನ, ಔಷಧಿ ಸಸ್ಯೋದ್ಯಾನ ಸೇರಿದಂತೆ 290ಕ್ಕೂ ಹೆಚ್ಚು ಸಸ್ಯ ಪ್ರಭೇದಗಳನ್ನು ಇಲ್ಲಿ ಬೆಳೆಸಲಾಗಿದೆ.

ಸಸ್ಯ ಶಾಸ್ತ್ರೀಯ ತೋಟದಲ್ಲಿ ತಾವರೆ ಕೊಳ, ಕಲ್ಯಾಣಿ, ಸಸ್ಯಾಲಂಕರಣ, ಚಿಟ್ಟೆ ವನ ಸೇರಿದಂತೆ ಅತ್ಯಾಕರ್ಷಕ ವಿವಿಧ ರೀತಿಯ ಉದ್ಯಾನವನ ನಿರ್ಮಾಣ ಮಾಡಲಾಗಿದೆ.

ಲಿಂಗಾಂಬುಧಿ ಕೆರೆಯಲ್ಲಿ ಸ್ಥಳೀಯ ಹಾಗೂ ವಲಸೆ ಪಕ್ಷಿ ಸಂಕುಲವಿದ್ದು, ಅವುಗಳಿಗೆ ಸಸ್ಯ ಶಾಸ್ತ್ರೀಯ ತೋಟದ ಮರದ ಹಣ್ಣುಗಳು ಆಹಾರವಾಗಲಿದೆ. ಇದರಿಂದ ಪಕ್ಷಿಗಳು ಬೇರೆ ಕಡೆ ವಲಸೆ ಹೋಗದೆ ಇಲ್ಲೇ ನೆಲೆಯೂರಲು ಪೂರಕ ವಾತಾವರಣ ನಿರ್ಮಾಣ ಮಾಡಲಾಗಿದೆ ಸಸ್ಯ ಶಾಸ್ತ್ರೀಯ ತೋಟದ ಉದ್ಘಾಟನೆ ವೇಳೆ ಅಳಿವಿನಂಚಿನಲ್ಲಿರುವ ಹಲವು ಸಸ್ಯ ಪ್ರಭೇದಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇಡಲಾಗಿತ್ತು. ಸುಂದರಿ ಮರ, ಪೈನ್ ಕೋನ್, ಸನ್ಯಾಸಿ ಬಕ್ರೆ, ಕಲ್ಲು ತೇಗ, ಸೀಮೆ ಹಲಸು, ಕಕ್ಕೆ ಮರ, ಸುರ ಹೊನ್ನೆ, ಅಮಟೆಕಾಯಿ, ಬೇಲ, ಬಿಳಿ ದೊಡ್ಡ ಸಂಪಿಗೆ, ಆಫ್ರಿಕನ್ ಹಣ್ಣು, ಕಮರಾಕ್ಷಿ, ಹೊಳೆ ದಾಸವಾಳ, ವಾಕ್ಸ್ ರೋಸ್, ತಾಳೆ, ಮರ ಸೌತೆ, ರಂಗುಮಾಲೆ, ಬೇತಾಳ ಮರ ಸೇರಿದಂತೆ ಹಲವು ರೀತಿಯ ಅಪರೂಪದ ಸಸ್ಯ ಸಂಪತ್ತನ್ನು ವೀಕ್ಷಿಸಿದ ಜನರು ಅತೀವ ಸಂತಸ ವ್ಯಕ್ತಪಡಿಸಿದರು. ಸಸ್ಯ ಶಾಸ್ತ್ರೀಯ ತೋಟ ಅತ್ಯಾಕರ್ಷಕವಾಗಿದ್ದು, ಒಳಗೆ ಪಾದಾರ್ಪಣೆ ಮಾಡುತ್ತಿದ್ದಂತೆ ಅಮೂಲ್ಯ ಸಸ್ಯ ಸಂಪತ್ತಿನ ದರ್ಶನವಾಗುತ್ತದೆ.

ಸಂಕಷ್ಟ ತಂದೊಡ್ಡಿರುವ 'ಹುಲಿ ಉಗುರು'

ಪರಿಶೀಲನೆ ನಡೆಸದೆ ಪೆಂಡೆಂಟ್ ವಶಪಡಿಸಿಕೊಂಡು ಹಿಂತಿರುಗಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅರಣ್ಯಾಧಿಕಾರಿ, ತಾವು ಧರಿಸಿರುವುದು ಹುಲಿ ಉಗುರಿನ ಪೆಂಡೆಂಟ್ ಎಂದು ಸ್ವತಃ ಜಗ್ಗೇಶ್ ಅವರೇ ಹೇಳಿಕೊಂಡಿದ್ದಾರೆ. ಈ ಪೆಂಡೆಂಟ್ ಸುಮಾರು 40 ವರ್ಷ ಹಳೆಯದಾಗಿದ್ದು, ಅದರಲ್ಲಿನ ಹುಲಿ ಉಗುರು ಕೊಳೆತ ಸ್ಥಿತಿಯಲ್ಲಿದೆ. ಅದರ ನೈಜತೆ ಪರಿಶೀಲನೆಗಾಗಿ ಬೆಹರಿನ್‌ನಲ್ಲಿರುವ ಲ್ಯಾಬ್‌ಗೆ ಕಳುಹಿಸಲಾಗುವುದು. ಲ್ಯಾಬ್‌ನ ವರದಿ ಬಂದ ನಂತರ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು ಎಂದರು. ನಿಖಿಲ್ ಕುಮಾರಸ್ವಾಮಿಗೆ ನೋಟಿಸ್ ನೀಡಲು ಅವರ ನಿವಾಸಕ್ಕೆ ಅಧಿಕಾರಿಗಳು ತೆರಳಿದಾಗ ನಿಖಿಲ್ ಮನೆಯಲ್ಲಿರಲಿಲ್ಲ. ಆದರೆ ಅವರ ತಂದೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ವತಃ ತಾವೇ ನೋಟಿಸ್ ಪಡೆದುಕೊಂಡು ಪೆಂಡೆಂಟ್ ಅನ್ನು ಅಧಿಕಾರಿಗಳಿಗೆ ನೀಡಿದರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಕುಮಾರಸ್ವಾಮಿ, ವಿಷಯ ತಿಳಿಯುತ್ತಿದ್ದಂತೆಯೇ ನಾನೇ ಅಧಿಕಾರಿಗಳನ್ನು ಕರೆಸಿಕೊಂಡು ಪೆಂಡೆಂಟ್ ಕೊಟ್ಟಿದ್ದೇನೆ. ಮದುವೆ ಸಂದರ್ಭದಲ್ಲಿ ನಿಖಿಲ್‌ಗೆ ಈ ಪೆಂಡೆಂಟ್ ಉಡುಗೊರೆಯಾಗಿ ಬಂದಿದೆ. ಅದು ನೈಜ ಹುಲಿ ಉಗುರು ಅಲ್ಲ. ಕೃತಕವಾದದ್ದು ಎಂದರಲ್ಲದೆ, ಹುಲಿ ಉಗುರನ್ನು ಉಡುಗೊರೆಯಾಗಿ ಕೊಟ್ಟಿದ್ದರೆ, ನಾವೇನು ಅದನ್ನು ತೆಗೆದುಕೊಳ್ಳುತ್ತಿದ್ದೆವೆ? ಎಂದು ಪ್ರಶ್ನಿಸಿದರು.

ಚಿಕ್ಕಮಗಳೂರು ಜಿಲ್ಲೆ ಗೌರಿಗದ್ದೆ ಆಶ್ರಮಕ್ಕೆ ಅಧಿಕಾರಿಗಳು ಭೇಟಿ ಕೊಟ್ಟು, ನೋಟಿಸ್ ನೀಡಿದಾಗ ಅದನ್ನು ಪಡೆದ ವಿನಯ್ ಗುರೂಜಿ, ತಾವು ಹುಲಿ ಚರ್ಮದ ಮೇಲೆ ಕುಳಿತ್ತಿದ್ದ ಫೋಟೋ ಎರಡು ವರ್ಷ ಹಳೆಯದು ಎಂದು ಸ್ಪಷ್ಟಪಡಿಸಿದರು. ಶಿವಮೊಗ್ಗ ಜಿಲ್ಲೆಯ ಭಕ್ತರೊಬ್ಬರ ತಂದೆಯ ಬಳಿ ಆ ಹುಲಿ ಚರ್ಮ ಇತ್ತು. ತಂದೆಯಿಂದ ಮಗ ಅದನ್ನು ಕಾನೂನಿನಂತೆ ಅಧಿಕಾರಿಗಳ ಅನುಮತಿ ಪಡೆದು ತೆಗೆದುಕೊಂಡಿದ್ದಾರೆ. ಅದನ್ನು ತಮಗೆ ನೀಡಲೂ ಕೂಡ ಈ ಭಕ್ತರು ಶಿವಮೊಗ್ಗ ಜಿಲ್ಲೆಯ ಅರಣ್ಯಾಧಿಕಾರಿಗಳ ಅನುಮತಿ ಪಡೆದು ಹುಲಿ ಚರ್ಮವನ್ನು ನನಗೆ ಕೊಟ್ಟಿದ್ದರು. ಅದನ್ನು 2021ರಲ್ಲಿ ನಾನು ಸರ್ಕಾರದ ವಶಕ್ಕೆ ನೀಡಿದ್ದೇನೆ ಎಂದು ತಿಳಿಸಿ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿದರು. ತುಮಕೂರು ಜಿಲ್ಲೆ ಬಿದನಗೆರೆಯಲ್ಲಿರುವ ಶನೇಶ್ವರ ದೇವಸ್ಥಾನದ ಧರ್ಮದರ್ಶಿ ಧನಂಜಯ್ ಗುರೂಜಿ ಕೂಡ ಅಧಿಕಾರಿಗಳಿಂದ ನೋಟಿಸ್ ಪಡೆದು ತಮ್ಮ ಬಳಿ ಇದ್ದ ಪೆಂಡೆಂಟ್ ಅನ್ನು ಅಧಿಕಾರಿಗಳಿಗೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಈ ಪೆಂಡೆಂಟ್ ನೈಜ ಹುಲಿ ಉಗುರಿನದ್ದು ಅಲ್ಲ ಎಂದರು. ಆದರೆ ಪೆಂಡೆಂಟ್ ವಶಪಡಿಸಿಕೊಂಡಿರುವ ಅಧಿಕಾರಿಗಳು ಪರಿಶೀಲನೆಯ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಮತ್ತೊಂದೆಡೆ ನಟ ದರ್ಶನ್ ನಿವಾಸದಲ್ಲೂ ಕೂಡ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಆದರೆ ಅದರ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ನಿವಾಸಕ್ಕೆ ಅಧಿಕಾರಿಗಳು ಭೇಟಿ ನೀಡಿದ್ದರು. ರಾಕ್‌ಲೈನ್ ವೆಂಕಟೇಶ್ ವಿದೇಶ ಪ್ರವಾಸದಲ್ಲಿದ್ದಾರೆ ಎಂಬ ಮಾಹಿತಿ ಪಡೆದ ಅವರು, ಮನೆಯಲ್ಲಿದ್ದವರಿಗೆ ನೋಟಿಸ್ ನೀಡಿ ಹಿಂತಿರುಗಿದ್ದಾರೆ.

ಹುಲಿ ಉಗುರು ಪೆಂಡೆಂಟ್ ಕೃತಕವಾದದ್ದು

ಮೂಲಕ ವಿನಂತಿ ಮಾಡಿದ್ದಾರೆ. ತಮ್ಮ ಮದುವೆ ಸಮಯದಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ಹುಲಿ ಉಗುರಿನ ಪೆಂಡೆಂಟ್ ಧರಿಸಿದ್ದರು ಎಂದು ಕೆಲ ಮಾಧ್ಯಮಗಳಲ್ಲಿ ವರದಿ ಮಾಡಲಾಗಿದೆ. ಇದು ಸತ್ಯಕ್ಕೆ ದೂರ. ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು ಅದರ ಗಂಭೀರತೆ ಬಗ್ಗೆ ನನಗೆ ಖಂಡಿತಾ ಅರಿವಿದೆ ಎಂದು ಟ್ವೀಟ್ ಮಾಡಿದ್ದಾರೆ. ಹುಲಿ ಉಗುರು ಧರಿಸಿದ ಆರೋಪದ ಮೇಲೆ ಬಿಗ್ ಬಾಸ್ ಸೀಸನ್ 10ರ ಸ್ಪರ್ಧಿಯಾಗಿದ್ದ ವರ್ತೂರು ಸಂತೋಷ್ ಅವರನ್ನು ಬಂಧಿಸಿದ ನಂತರ ಚಾಲೆಂಜಿಂಗ್ ಸ್ಟಾರ್ ದರ್ಶನ್, ವಿನಯ್ ಗುರೂಜಿ, ನಟ ಜಗ್ಗೇಶ್ ಹಾಗೂ ನಿಖಿಲ್ ಕುಮಾರಸ್ವಾಮಿ ಅವರು ಅಂತಹದ್ದೇ ಪೆಂಡೆಂಟ್ ಧರಿಸಿರುವ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳುವಂತೆ ಹಲವರು ಒತ್ತಾಯಿಸಿದ್ದಾರೆ.

ಇಂದು ರಥೋತ್ಸವ; ನಾಡಿದ್ದು ತೆಪ್ಪೋತ್ಸವ

ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಅರಮನೆಯ ಬಿರುದು, ಬಾವಲಿ, ಛತ್ರಿ-ಛಾಮರ, ಮಂಗಳವಾದ್ಯ ಸೇರಿದಂತೆ ಜಾನಪದ ಕಲಾತಂಡಗಳೊಂದಿಗೆ ರಥೋತ್ಸವ ನಡೆಯಲಿದೆ. ಈ ವೇಳೆ ಫಿರಂಗಿ ದಳದ ಸಿಬ್ಬಂದಿ ಚಿಕ್ಕ ಟ್ರ್ಯಾಲಿಯಲ್ಲಿ 21 ಬಾರಿ ಸಿಡಿಮದ್ದು ಸಿಡಿಸಿ ಗೌರವ ಸಮರ್ಪಿಸಲಿದೆ. ರಥ ದೇವಾಲಯದ ಸುತ್ತ ಒಂದು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಸಮಾಪ್ತಿಗೊಳ್ಳಲಿದೆ.

ತೆಪ್ಪೋತ್ಸವ: ಅ.28ರಂದು ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ತೆಪ್ಪೋತ್ಸವ ಜರುಗಲಿದೆ. ಅಶ್ವಯುಜ ಮಾಸ, ಕೃಷ್ಣ ಪಕ್ಷದ ಪೂರ್ಣಿಮಾ ದಿನವಾದ ಶನಿವಾರ ಸಂಜೆ 6.30ರ ನಂತರ ಬೆಟ್ಟದಲ್ಲಿರುವ ದೇವಿಕೆರೆಯಲ್ಲಿ ತೆಪ್ಪೋತ್ಸವದ ವಿವಿಧ ಪೂಜಾ ಕಾರ್ಯ ಜರುಗಲಿದೆ.

ಕಾಫಿ ಉದ್ಯಮಿ ಪತ್ನಿ ಹತ್ಯೆ

ಮೂಲಕ ಕ್ರಮ ಕೈಗೊಂಡಿದ್ದಾರೆ ಎನ್ನಲಾಗಿದೆ. ಈ ಕಾರಣದಿಂದಾಗಿ ಕಳೆದ 2 ವರ್ಷದಿಂದ ಚಿಕೋರಿ ಘಟಕ ಸ್ಥಗಿತಗೊಂಡಿದೆ. ಸಾಲ ಹಾಗೂ ಉದ್ಯಮದಲ್ಲಿ ಉಂಟಾದ ನಷ್ಟದ ಕಾರಣದಿಂದಾಗಿ ರಮೇಶ್ ಮತ್ತು ನಳಿನಿ ದಂಪತಿ ಮಂಡ್ಯ ತೊರೆದು ಮೈಸೂರಿನ ವೃದ್ಧಾಶ್ರಮವೊಂದಕ್ಕೆ ಸೇರಿಕೊಂಡಿದ್ದರು. ಕೆಲ ದಿನಗಳ ಹಿಂದೆಯಷ್ಟೇ ನಳಿನಿಯವರು ಮಂಡ್ಯಕ್ಕೆ ಹಿಂತಿರುಗಿದ್ದರು. ಮಂಡ್ಯ ನಗರದಲ್ಲಿ ಮನೆ ಇದ್ದರೂ ಕೂಡ ಪ್ರತಿದಿನ ಅವರು ಚಿಕೋರಿ ಕಾರ್ಖಾನೆಗೆ ತೆರಳಿ ಅಲ್ಲಿನ ಕೊಠಡಿಯಲ್ಲಿ ಕೆಲ ಕಾಲ ಇದ್ದು ಬರುತ್ತಿದ್ದರು ಎಂದು ತಿಳಿದು ಬಂದಿದೆ.

ನಳಿನಿಯವರ ಸೊಸೆ ಬೆಂಗಳೂರಿನಲ್ಲಿದ್ದು, ಮಂಗಳವಾರ ಸಂಜೆ ಮೊಬೈಲ್‌ಗೆ ಕರೆ ಮಾಡಿದಾಗ ನಳಿನಿ ಕರೆ ಸ್ವೀಕರಿಸದ ಹಿನ್ನೆಲೆಯಲ್ಲಿ ವಯೋವೃದ್ಧರಾದ ಅವರ ಆರೋಗ್ಯದ ಬಗ್ಗೆ ಕಾಳಜಿಯಿಂದಾಗಿ ನಳಿನಿ ಸೊಸೆ ತಮ್ಮ ಪರಿಚಯಸ್ಥರಿಗೆ ವಿಷಯ ತಿಳಿಸಿ ಚಿಕೋರಿ ಕಾರ್ಖಾನೆ ಬಳಿ ಹೋಗಿ ಅತ್ತೆಯನ್ನು ನೋಡುವಂತೆ ಹೇಳಿದ್ದರು. ಅದರಂತೆ ಕಾರ್ಖಾನೆ ಬಳಿ ಹೋದಾಗ ಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ.

ನಾನೇ ಮುಖ್ಯಮಂತ್ರಿಯಾಗಿರ್ತೇನೆ...!

ಶಿವಕುಮಾರ್ ಆಪ್ತ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸವರಾಜ್ ಶಿವಗಂಗಾ ಅವರು, ನಮ್ಮ ನಾಯಕ ಡಿ.ಕೆ.ಶಿ ಅವರಿಗೆ ವಿಧಾನಸಭೆಯಲ್ಲಿ ಪಕ್ಷದ 73 ಶಾಸಕರ ಬೆಂಬಲವಿದೆ ಎಂದು ಏಕಾಏಕಿ ಹೇಳಿಕೆ ನೀಡಿ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿದ್ದಾರೆ. ಸಿದ್ದರಾಮಯ್ಯ ಅವರ ಆಪ್ತರು ನಮ್ಮ ನಾಯಕರಿಗೆ ಹೆಚ್ಚು ಸದಸ್ಯರ ಬೆಂಬಲವಿದೆ. ಅವರು ಸೂಚಿಸಿದವರೇ ಅಧಿಕಾರ ಬದಲಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗುತ್ತಾರೆ ಎಂಬ ಸಂದೇಶವನ್ನು ಶಿವಕುಮಾರ್ ಪಾಳಯಕ್ಕೆ ರವಾನಿಸಿದ್ದರು. ತದ ನಂತರ ಶಿವಕುಮಾರ್ ಅವರು ಸಿಎಲ್‌ಪಿಯಲ್ಲಿ ತಮ್ಮ ಬಲ ಹೆಚ್ಚಿಸಿಕೊಳ್ಳಲು ನಿರಂತರ ಕಸರತ್ತು ನಡೆಸುತ್ತಿದ್ದಾರೆ. ಅದು ಅವರಿಗೆ ಒಂದು ಹಂತದಲ್ಲಿ ಫಲ ಕೊಟ್ಟಂತಿದೆ. ಇದಕ್ಕೆ ಎಐಸಿಸಿಯ ಮಾಜಿ ಪ್ರಧಾನಕಾರ್ಯದರ್ಶಿ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಕೆಲವು ಹಿರಿಯ ಸಚಿವರು ಡಿ.ಕೆ.ಶಿ.ಗೆ ಬೆನ್ನೆಲುಬಾಗಿ ನಿಂತಿದ್ದಾರೆ ಎನ್ನಲಾಗಿದೆ. ಈ ಬೆಳವಣಿಗೆ ಹಿನ್ನೆಲೆಯಲ್ಲಿಯೇ ಶಿವಕುಮಾರ್ ಅವರು ಇಂತಹ ಸಂದೇಶ ನೀಡಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ರಿಲ್ಯಾಕ್ಸ್ ಮೂಡ್‌ನಲ್ಲಿ ದಸರಾ ಗಜಪಡೆ

- ಅರಮನೆ ಆವರಣದಲ್ಲಿ ಆನೆ ನೋಡಲು ಜನ ಜಾತ್ರೆ
- ಮಾವುತ, ಕಾವಾಡಿಗಳೊಂದಿಗೆ ಕೇರಂ ಆಡಿದ ಡಿಸಿಎಫ್









ಮೈಸೂರು, ಅ.25(ಎಂಟಿವೈ)- ಜಂಬೂಸವಾರಿ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ಜನರ ನಡುವೆ ರಾಜಗಾಂಭೀರ್ಯದಿಂದ ಸಾಗಿ ಸೈ ಎನಿಸಿಕೊಂಡಿರುವ ದಸರಾ ಗಜಪಡೆಗೆ ಬುಧವಾರ ದಿನವಿಡಿ ರಿಲ್ಯಾಕ್ಸ್ ಮೂಡ್‌ಗೆ ಜಾರಿದವು.

ದಸರಾ ಮಹೋತ್ಸವದ ಪ್ರಮುಖ ಘಟ್ಟ ಜಂಬೂಸವಾರಿ ಮೆರವಣಿಗೆಯಲ್ಲಿ ಯಶಸ್ವಿಯಾಗಿ ತಮ್ಮ ಜವಾಬ್ದಾರಿ ನಿಭಾಯಿಸಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಗೆ ಇಂದು ಬೆಳಗ್ಗಿನಿಂದ ಮಾವುತ, ಕಾವಾಡಿಗಳು ಆರೈಕೆ ಮಾಡುತ್ತಿದ್ದರು. ಮೈ ಮೇಲೆ ಚಿತ್ತಾಕರ್ಷಕ ಚಿತ್ರಕಲೆಯಿಂದ ಕಂಗೊಳಿಸುತ್ತಿದ್ದ ದಸರಾ ಗಜಪಡೆ ಅರಮನೆಗೆ ಆಗಮಿಸಿದ್ದ ಪ್ರವಾಸಿಗರನ್ನು ಸೆಳೆಯುತ್ತಿದ್ದವು.

ಅಭಿಮನ್ಯುವಿಗೆ ಬಿಸಿ ನೀರಿನ ಮಜ್ಜನ: ಜಂಬೂಸವಾರಿ ಮೆರವಣಿಗೆಯಲ್ಲಿ 750 ಕೆಜಿ ತೂಕದ ಚಿನ್ನದ ಅಂಬಾರಿಯೊಂದಿಗೆ ಗಾದಿ, ನಮ್ದಾ ಸೇರಿದಂತೆ 1100 ಕೆಜಿ ಭಾರ ಹೊತ್ತು ಸರಾಗವಾಗಿ ಸಾಗಿದ್ದ ಕೂಂಬಿಂಗ್ ಸ್ಟಾರ್ ಅಭಿಮನ್ಯುವಿಗೆ ಇಂದು ಮುಂಜಾನೆಯೇ ಬಿಸಿ ನೀರಿನ ಮಜ್ಜನ ಮಾಡಿಸಲಾಯಿತು. ಮಾವುತ ವಸಂತ್ ಒಂದು ದೊಡ್ಡ ಪಾತ್ರೆಯಲ್ಲಿ ನೀರು ಕಾಯಿಸಿ ಅಭಿಮನ್ಯುವಿಗೆ ಸ್ನಾನ ಮಾಡಿಸಲಾಯಿತು. ಭಾರ ಹೊತ್ತಿದ್ದ ಹಿನ್ನೆಲೆಯಲ್ಲಿ ಮೈ ನೋವು ನಿವಾರಿಸಲು ಬಿಸಿ ನೀರಿನ ಸ್ನಾನ ಮಾಡಿಸುವ ಪದ್ಧತಿ ಅನುಸರಿಸಲಾಗುತ್ತಿದ್ದು, ಇಂದು ಬಿಸಿ ನೀರಿಗೆ ಮೈ ಒಡ್ಡಿದ ಅಭಿಮನ್ಯು ದಿನವಿಡೀ ನಿರಾಳವಾಗಿ ವಿಶ್ರಾಂತಿ ಪಡೆಯಿತು.

ಬಿಡಾರದಲ್ಲೇ ವಾಸ್ತವ್ಯ: ಪ್ರತಿದಿನ ಅರಮನೆಯಿಂದ ಬನ್ನಿಮಂಟಪದವರೆಗೆ ತಾಲೀಮಿಗೆ ಹೋಗುತ್ತಿದ್ದ ಗಜಪಡೆ ಇಂದು ಬೆಳಗ್ಗಿನಿಂದ ಸಂಜೆವರೆಗೆ ಅರಮನೆ ಆವರಣದಲ್ಲಿ ಬಿಡಾರ ಬಿಟ್ಟು ಎಲ್ಲೂ ಕದಲಲಿಲ್ಲ. ಮಾವುತ, ಕಾವಾಡಿಗಳು ತಮ್ಮ ಆನೆಗಳಿಗೆ ನೀರು ಕುಡಿಸಿ, ಸ್ನಾನ ಮಾಡಿಸಿ ಕಟ್ಟಿ ಹಾಕುತ್ತಿದ್ದರು. ಬಳಿಕ ಹಸಿ ಹುಲ್ಲು, ಆಲದ ಸೊಪ್ಪು, ಕುಸುರೆ ನೀಡಿ ಗಜಪಡೆಯನ್ನು ಸ್ವಸ್ಥಾನಕ್ಕೆ ಕರೆದೊಯ್ಯಲು ಮಾನಸಿಕವಾಗಿ ಅಣಿಗೊಳಿಸಿದರು.

ಜನಜಾತ್ರೆ: ಅರಮನೆ ಆವರಣದಲ್ಲಿ ಎರಡು ಸ್ಥಳದಲ್ಲಿ ಬೀಡು ಬಿಟ್ಟಿದ್ದ ಗಜಪಡೆಯನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಮುಗಿಬಿದ್ದರು. ಜಂಬೂಸವಾರಿ ಮರು ದಿನ ಅರಮನೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿತ್ತು. ಅರಮನೆ ವೀಕ್ಷಿಸಿದ ನಂತರ ಅಂಬಾರಿ ಹೊತ್ತ ಅಭಿಮನ್ಯು ಹಾಗೂ ಇನ್ನಿತರ ಆನೆಗಳನ್ನು ನೋಡಲು ಬಯಸಿ ಬರುತ್ತಿದ್ದವರ ಸಂಖ್ಯೆ ಹೆಚ್ಚಾಗಿತ್ತು. ಆನೆ ಕಟ್ಟಿಹಾಕಿದ್ದ ಸ್ಥಳದ ಸುತ್ತಮುತ್ತಲೂ ಜನಜಂಗುಳಿ ಹೆಚ್ಚಾಗಿ ಕಂಡು ಬಂತು.

ಮಾವುತರೊಂದಿಗೆ ಕೇರಂ ಆಡಿದ ಡಿಸಿಎಫ್: ಜಂಬೂಸವಾರಿ ಯಶಸ್ವಿಯಾಗಿ ನೆರವೇರಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಅರಮನೆ ಆವರಣದ ಆನೆಗಳ ಬಿಡಾರದ ಬಳಿಯೇ ದಿನವಿಡೀ ಮಾವುತ, ಕಾವಾಡಿಗಳೊಂದಿಗೆ ಸಮಯ ಕಳೆದರು. ಈ ವೇಳೆ ಡಿಸಿಎಫ್ ಸೌರಭ್ ಕುಮಾರ್ ಮಾವುತ ಮತ್ತು ಕಾವಾಡಿಗಳೊಂದಿಗೆ ಕೇರಂ ಆಡಿ ಗಮನ ಸೆಳೆದರು.



ಫೋಟೋ ಸೆಷನ್: ಗಜಪಡೆಯನ್ನು ಯಶಸ್ವಿಯಾಗಿ ಮುನ್ನಡೆಸಿದ ಎಲ್ಲಾ 14 ಆನೆಗಳ ಮಾವುತ, ಕಾವಾಡಿ, ವಿಶೇಷ ಮಾವುತರು ಹಾಗೂ ಪಾಲಕರೊಂದಿಗೆ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಸೌರಭ್ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಹಾಗೂ ಇನ್ನಿತರರೊಂದಿಗೆ ಗ್ರೂಪ್ ಫೋಟೊ ತೆಗೆಸಿಕೊಂಡರು.

ಅರಮನೆ ಸೇರಿದ ಆನೆ ಆಭರಣ: ಜಂಬೂಸವಾರಿ ಮೆರವಣಿಗೆಯಲ್ಲಿ ತೆರಳಿದ ಗಜಪಡೆಯ ಸೌಂದರ್ಯ ಇಮ್ಮಡಿಗೊಳಿಸಲು ಅರಮನೆಯಿಂದ ತಂದಿದ್ದ ಜೂಲಾ, ಬಳೆ, ಸರ ಸೇರಿದಂತೆ ಇನ್ನಿತರ ಆಭರಣವನ್ನು ಸುರಕ್ಷಿತವಾಗಿ ಅರಮನೆ ಆಡಳಿತ ಮಂಡಳಿ ವಶಕ್ಕೆ ಒಪ್ಪಿಸಲಾಯಿತು.

ತವರಿಗೆ ತೆರಳಲು ಕಾತರ: ಅರಮನೆ ಆವರಣದಲ್ಲಿ ಗಜಪಡೆಯ ಮಾವುತ, ಕಾವಾಡಿಗಳ ಕುಟುಂಬದ ಮಹಿಳೆಯರು, ಮಕ್ಕಳು ಸ್ವಸ್ಥಳಕ್ಕೆ ತೆರಳಲು ಕಾತುರದಿಂದ ಕಾಯುತ್ತಿದ್ದರು. ಅಲ್ಲದೆ, ಬೇರೆ ಬೇರೆ ಕ್ಯಾಂಪ್‌ಗಳಿಂದ ಆಗಮಿಸಿದ್ದ ಆನೆಗಳ ಮಾವುತ, ಕಾವಾಡಿಗಳ ಕುಟುಂಬದ ಸದಸ್ಯರೊಂದಿಗೆ ಮಾತುಕತೆಯಾಡುತ್ತಾ ಕುಳಿತ್ತಿದ್ದ ದೃಶ್ಯ ಕಂಡು ಬಂದಿತು.

ಚಾಮುಂಡೇಶ್ವರಿ ಕೃಪೆಯಿಂದ ದಸರಾ ಯಶಸ್ವಿಯಾಯ್ತು



ಮೈಸುರು, ಅ.25(ಆರ್‌ಕೆ)-ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಅನುಗ್ರಹ, ಅಧಿಕಾರಿಗಳ ಶ್ರಮ ಹಾಗೂ ಸಾರ್ವಜನಿಕರ ಸಹಕಾರದಿಂದ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಯಶಸ್ವಿಯಾಯ್ತು ಎಂದು 2023ರ ದಸರಾ ಮಹೋತ್ಸವದ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ಮಾರ್ಗದರ್ಶನ, ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಈ ಬಾರಿಯ ನಾಡಹಬ್ಬ ಯಾವುದೇ ಲೋಪ-ದೋಷಗಳಿಲ್ಲದೇ ಸುಗಮವಾಗಿ ನೆರವೇರಿದೆ. ಜೊತೆಗೆ ಅತೀ ಹೆಚ್ಚು ಪ್ರವಾಸಿಗರು ದಸರಾದಲ್ಲಿ ಪಾಲ್ಗೊಂಡು ಸಂಭ್ರಮಿಸಿರುವುದು ಖುಷಿಯಾಗಿದೆ ಎಂದು ಅವರು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದರು. ದಸರಾ ಮಹೋತ್ಸವದಂತಹ ಬೃಹತ್ ಧಾರ್ಮಿಕ, ಸಾಂಸ್ಕೃತಿಕ ಹಬ್ಬ ಆಚರಿಸಲು ಅವಕಾಶ ಸಿಕ್ಕಿದ್ದು ನಮ್ಮ ಸೌಭಾಗ್ಯವೇ ಸರಿ. ಎಲ್ಲೆಡೆಯಿಂದ ಬಂದ ಉತ್ತಮ ಸಲಹೆಗಳು, ವಿವಿಧ ಉಪ ಸಮಿತಿಗಳ ಸದಸ್ಯರು, ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳ ಪ್ರಮುಖರು, ಮಾಧ್ಯಮ ಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳ ಸಹಕಾರ ಹಾಗೂ ಅಧಿಕಾರಿಗಳ ಶ್ರಮ ಹಾಗೂ ಪೊಲೀಸರ ಕಾರ್ಯಕ್ಷಮತೆಯು ನಾಡಹಬ್ಬದ ಯಶಸ್ಸಿಗೆ ಕಾರಣವಾಗಿದೆ ಎಂದು ಡಾ.ರಾಜೇಂದ್ರ ಅಭಿಪ್ರಾಯಪಟ್ಟರು.

ಇದನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ವಿಫುಲ ಅವಕಾಶವಿದೆ. ಸಾಂಪ್ರದಾಯಿಕ ದಸರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳೂ ಯಾವುದೇ ಗೊಂದಲವಿಲ್ಲದೇ ನೆರವೇರಿದ್ದು, ಅತೀವ ಸಂತಸ ತಂದಿದೆ ಎಂದು ಅವರು ನುಡಿದರು. ಭದ್ರತಾ ಜವಾಬ್ದಾರಿ ಹೊತ್ತಿದ್ದ ನಗರ ಪೊಲೀಸ್ ಆಯುಕ್ತರು ಪ್ರತಿಕ್ರಿಯೆ ನೀಡಿ ಈ ಬಾರಿಯ ದಸರಾ ಸುರಕ್ಷತೆ ಹಾಗೂ ಭದ್ರತೆ ಸವಾಲಾಗಿತ್ತು. ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರ ತವರಿನಲ್ಲಿ ದಸರಾ ಮಹೋತ್ಸವ ಶಾಂತಿಯುತವಾಗಿ ನಡೆಯಲು ಎಲ್ಲರ ಸಹಕಾರ ಕಾರಣವಾಗಿದೆ ಎಂದರು.

ಬಂದೋಬಸ್ತ್ ವ್ಯವಸ್ಥೆ ಬಗ್ಗೆ ಸ್ವತಃ ಮುಖ್ಯಮಂತ್ರಿಗಳೇ ಸಂತಸ ವ್ಯಕ್ತಪಡಿಸಿದ್ದಾರೆ. ದಸರಾ ಯಶಸ್ಸಿಗೂ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಶ್ರಮಿಸಿದ ಪೊಲೀಸ್ ಹಾಗೂ ಎಲ್ಲಾ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಅವರು ನುಡಿದರು.

ನ.3ರವರೆಗೆ ವಿದ್ಯುತ್ ದೀಪಾಲಂಕಾರ



ಮೈಸೂರು, ಅ.25(ಆರ್‌ಕೆ)- ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ವಿದ್ಯುತ್ ದೀಪಾಲಂಕಾರವು ನ.3ರವರೆಗೆ ಇರುತ್ತದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ 15ರಿಂದ ಆರಂಭವಾಗಿರುವ ವಿದ್ಯುತ್ ದೀಪಾಲಂಕಾರವನ್ನು ಜನರು ಮುಗಿಬಿದ್ದು ವೀಕ್ಷಿಸುತ್ತಿದ್ದು, ಅಂಬಾರಿ ಡಬಲ್ ಡಕ್ಕರ್ ಬಸ್ಸಿನಲ್ಲಿ ಪ್ರಯಾಣಿಸಿ ಸಂಭ್ರಮಿಸುತ್ತಿದ್ದಾರೆ. ರಾತ್ರಿ ವೇಳೆ ಮೈಸೂರಿನ ರಸ್ತೆಗಳಲ್ಲಿಯೂ ಬೆಳಕಿನ ಚಿತ್ತಾರ ಸವಿಯಲು ಅಪಾರ ಜನ ಆಗಮಿಸುತ್ತಿದ್ದಾರೆ.

ಮೈಸೂರಿನ 120 ಕಿ.ಮೀ. ರಸ್ತೆಗಳು, 98 ಸರ್ಕಲ್‌ಗಳಲ್ಲಿ, ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಸಂಜೆ 7ರಿಂದ ರಾತ್ರಿ 11 ಗಂಟೆಯವರೆಗೂ ಜನರು ವೀಕ್ಷಿಸಿ, ಸಂಭ್ರಮಿಸುತ್ತಿದ್ದಾರೆ. ಇದನ್ನು ಮುಂದುವರೆಸುವಂತೆ ಹೆಚ್ಚು ಜನ ಬಯಸುತ್ತಿದ್ದಾರೆ. ಆದರೆ ದೀಪಾಲಂಕಾರವನ್ನು ವಿಸ್ತರಿಸುವ ಬಗ್ಗೆ ತಮಗೆ ಸರ್ಕಾರದಿಂದ ಇನ್ನು ಯಾವ ಸೂಚನೆ ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯ ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸುತ್ತೇನೆ


ಕೇಸರಿ ನಾಯಕರಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು

- ಸಾಲ ಮಾಡುವುದರ ಜೊತೆಗೆ ರಾಜ್ಯ ಲೂಟಿ ಮಾಡಿದರು
- ಶಾಸಕರಿಗೆ 25 ಕೋಟಿ, ಚುನಾವಣಾ ಖರ್ಚಿಗೆ 25 ಕೋಟಿ
- 30 ಸಾವಿರ ಕೋಟಿ ಬಿಲ್ ಬಾಕಿ ಉಳಿಸಿದ್ದಾರೆ
- ಕಾಂಗ್ರೆಸ್ ಹೈಕಮಾಂಡ್‌ಗೆ ಯಾವ ಹಣವನ್ನೂ ಕೊಟ್ಟಿಲ್ಲ

ಮೈಸೂರು, ಅ.25(ಬಿಎಲ್‌ಯು)- ಬಿಜೆಪಿ ಸರ್ಕಾರದ ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನ ಟಿ.ಕೆ. ಬಡಾವಣೆಯ ತಮ್ಮ ನಿವಾಸದ ಬಳಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಕೋಟ್ಯಾಂತರ ರೂಪಾಯಿ ಲೂಟಿ ಮಾಡಿ ಈಗ ಕಾಂಗ್ರೆಸ್ ಸರ್ಕಾರದ ಬಗ್ಗೆ ಟೀಕೆ ಮಾಡುವ ಬಿಜೆಪಿ ನಾಯಕರಿಗೆ ಮಾನ ಮರ್ಯಾದೆ ಇದೆಯೇ ಎಂದು ಖಾರವಾಗಿ ಪ್ರಶ್ನಿಸಿದರು.

ಆಪರೇಷನ್ ಕಮಲ ಮಾಡುವಾಗ ಶಾಸಕರಿಗೆ 25 ಕೋಟಿ ಕೊಟ್ಟು, ನಂತರ ಉಪ ಚುನಾವಣಾ ಖರ್ಚಿಗೆ 25 ಕೋಟಿ ಕೊಟ್ಟರು. ಈ ಹಣ ಎಲ್ಲಿಂದ ಬಂತು ಎಂದು ಮರು ಪ್ರಶ್ನಿಸಿದ ಸಿದ್ದರಾಮಯ್ಯ, ತಮ್ಮ ಸ್ವಾರ್ಥ ರಾಜಕಾರಣಕ್ಕೆ ಕರ್ನಾಟಕವನ್ನು ಲೂಟಿ ಮಾಡಿ ಆರ್ಥಿಕವಾಗಿ ದಿವಾಳಿ ಮಾಡಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು ಎಂದು ಕೇಳಿದರು.



ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದೇ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಿಲ್ಲ. ಈಗ ನಮ್ಮ ಬಗ್ಗೆ ಪ್ರಶ್ನೆ ಮಾಡಲು ಇವರಿಗೆ ಯಾವ ನೈತಿಕ ಹಕ್ಕಿದೆ. ಇವತ್ತು ರಾಜ್ಯದಲ್ಲಿ ವಿದ್ಯುತ್ ಅಭಾವ ಉಂಟಾಗಿದ್ದರೆ ಅದಕ್ಕೆ ಬಿಜೆಪಿಯವರೇ ನೇರ ಕಾರಣಕರ್ತರು ಎಂದು ಸಿದ್ದರಾಮಯ್ಯ ದೂರಿದರು.

3 ವರ್ಷ 10 ತಿಂಗಳು ಅಧಿಕಾರ ನಡೆಸಿದ ಬಿಜೆಪಿಯವರು ಸಾಲ ಮಾಡಿ ಕರ್ನಾಟಕವನ್ನು ಆರ್ಥಿಕವಾಗಿ ದಿವಾಳಿ ಮಾಡಿದ್ದಾರೆ. ಹಣ ಇಲ್ಲದಿದ್ದರೂ ಟೆಂಡರ್ ಕರೆದಿದ್ದಾರೆ. ಇದರಿಂದ 30 ಸಾವಿರ ಕೋಟಿ ರೂಪಾಯಿ ಬಿಲ್ ಬಾಕಿ ಉಳಿಸಿದ್ದಾರೆ. ಇದಕ್ಕೆ ಯಾರು ಹೊಣೆ ಎಂದು ಸಿದ್ದರಾಮಯ್ಯ ಬಿಜೆಪಿ ನಾಯಕರಿಗೆ ಸರಣಿ ಪ್ರಶ್ನೆಗಳ ಸುರಿಮಳೆಗೈಯ್ದರು. ನಾನು ಮುಖ್ಯಮಂತ್ರಿಯಾಗಿ ಐದು ವರ್ಷ ಅಧಿಕಾರ ನಡೆಸಿದ ವೇಳೆ ಆರ್ಥಿಕ ಪರಿಸ್ಥಿತಿ ಹೇಗಿತ್ತು, ಬಿಜೆಪಿ ಸರ್ಕಾರ ಅವಧಿಯಲ್ಲಿ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎಂಬ ಬಗ್ಗೆ ಶ್ವೇತ ಪತ್ರ ಹೊರಡಿಸುತ್ತೇನೆ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

ರಾಜ್ಯವನ್ನು ಹಾಳು ಮಾಡಿ ಕುಳಿತಿರುವ ಬಿಜೆಪಿ ನಾಯಕರನ್ನು ಜನರು ತಿರಸ್ಕಾರ ಮಾಡಿದ್ದಾರೆ. ಆದರೂ ನಮ್ಮ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಪಂಚರಾಜ್ಯದ ಚುನಾವಣೆ ಹಿನ್ನೆಲೆ ನಮ್ಮ ವಿರುದ್ಧ ಇಲ್ಲಸಲ್ಲದ ಆಪಾದನೆ ಹೊರಿಸಿದ್ದಾರೆ. ಯಾವ ರಾಜ್ಯಕ್ಕೂ ನಾವು ಒಂದು ರೂಪಾಯಿ ಹಣ ಕೊಟ್ಟಿಲ್ಲ, ಯಾರಿಂದಲೂ ನಾವು ಹಣ ಪಡೆದಿಲ್ಲ. ಹೈಕಮಾಂಡ್‌ಗೆ ಹಣ ಕಳುಹಿಸುತ್ತಿದ್ದೇವೆ ಎಂಬುದು ಶುದ್ಧ ಸುಳ್ಳು ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸಚಿವ ಸಂಪುಟ ವಿಸ್ತರಣೆ ಸೇರಿದಂತೆ ಹಲವು ತೀರ್ಮಾನಗಳು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಕೆಲವು ಶಾಸಕರಿಗೆ ಮಂತ್ರಿಯಾಗುವ ಆಸೆ ಇದೆ. ಆದರೆ ಈ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದೆ ಎಂದರು. ರಾಮನಗರವನ್ನು ಬೆಂಗಳೂರಿಗೆ ಸೇರಿಸುವ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ಸಿದ್ದರಾಮಯ್ಯ ನಿರಾಕರಿಸಿದರು. ಈ ವಿಚಾರ ನನಗೆ ಗೊತ್ತಿಲ್ಲ. ತಿಳಿಯದ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಈ ಬಗ್ಗೆ ನನ್ನ ಜೊತೆ ಡಿ.ಕೆ. ಶಿವಕುಮಾರ್ ಚರ್ಚೆ ಮಾಡಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ವಿದ್ಯುತ್ ಕ್ಷಾಮ ನಿವಾರಣೆಗೆ ತ್ರಿಸೂತ್ರ

ವಿದ್ಯುತ್ ಕ್ಷಾಮ ನೀಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮೂರು ರೀತಿಯ ಕ್ರಮ ಕೈಗೊಂಡಿದೆ ಎಂದು ಇದೇ ವೇಳೆ ಸಿದ್ದರಾಮಯ್ಯ ವಿವರಿಸಿದರು.

ಕರ್ನಾಟಕದಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ರಾಜ್ಯಕ್ಕೆ ಕೊಡಬೇಕು, ಸಕ್ಕರೆ ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ವಿದ್ಯುತ್ ಖರೀದಿಸಲು ಕ್ರಮ ಕೈಗೊಳ್ಳುವುದರೊಂದಿಗೆ ಹೊರ ರಾಜ್ಯದಿಂದ ವಿದ್ಯುತ್ ಖರೀದಿ ಮಾಡಲಾಗುವುದು. ಈ ಮೂಲಕ ವಿದ್ಯುತ್ ಅಭಾವ ಎದುರಾಗದಂತೆ ನಿರ್ಧಾರ ಮಾಡಲಾಗುವುದು ಎಂದು ತಿಳಿಸಿದರು. ಹೆಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿರುವಂತೆ ಸರ್ಕಾರವೇ ಕೃತಕ ವಿದ್ಯುತ್ ಕ್ಷಾಮ ಸೃಷ್ಟಿಸಿಲ್ಲ. ಎದುರಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲಾಗುತ್ತಿದೆ ಎಂದು ಕುಮಾರಸ್ವಾಮಿಗೆ ಸಿದ್ದರಾಮಯ್ಯ ಟಾಂಗ್ ನೀಡಿದರು.

ವಿಜೃಂಭಣೆಯ ಕೋಟೆ ದಸರಾ ಮಹೋತ್ಸವ

● ವರದರಾಜಸ್ವಾಮಿಗೆ ಪೊಲೀಸರ ಸಕಲ ಗೌರವ ● ಕಲಾ ತಂಡಗಳೊಂದಿಗೆ ಮೆರವಣಿಗೆ



ಹೆಚ್.ಡಿ.ಕೋಟೆ, ಅ.25–ವಿಜಯದಶಮಿ ಅಂಗವಾಗಿ ಪಟ್ಟಣದಲ್ಲಿ ಮಂಗಳವಾರ ಪೊಲೀಸರ ಸಕಲ ಗೌರವಗಳೊಂದಿಗೆ ಐತಿಹಾಸಿಕ ಕೋಟೆ ದಸರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಪೊಲೀಸರು ಶುಭಲಗ್ನದಲ್ಲಿ ದೇವತೆಗಳ ರಾಜ ಶ್ರೀ ವರದರಾಜಸ್ವಾಮಿಗೆ ಗೌರವ ಸಲ್ಲಿಸಿದರು. ನಂತರ ಪೊಲೀಸರು, ಎಲ್ಲಾ ಸಮಾಜದ ಮುಖಂಡರು ವರದರಾಜಸ್ವಾಮಿಯ ಅಶ್ವ ವಾಹನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಬನ್ನಿ ಪೂಜೆಗೆ ಚಾಲನೆ ನೀಡಿದರು. ಉತ್ಸವ ಮೂರ್ತಿಯನ್ನು ಅಶ್ವ ವಾಹನದಲ್ಲಿ ಹಾಗೂ ಪೆರುಂದೇವಿ ಅಮ್ಮನವರ ಸಹಿತ ಶ್ರೀದೇವಿ, ಭೂದೇವಿಯ ಪಂಚಲೋಹದ ವಿಗ್ರಹ ಹಾಗೂ ತಾಯಿ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಬೆಳ್ಳಿ ರಥದಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಬಳಿಕ ಪಟ್ಟಣದ ಚಾಮುಂಡೇಶ್ವರಿ ದೇವಸ್ಥಾನ ಹಿಂಭಾಗದಲ್ಲಿರುವ ಬನ್ನಿ ಮರಕ್ಕೆ ಬಂದೂಕುಗಳನ್ನು ಇಟ್ಟು ಪೊಲೀಸರು ಪೂಜೆ ಸಲ್ಲಿಸಿದರು.

ಮೆರವಣಿಗೆಯಲ್ಲಿ ಮಹಿಳೆಯರು, ಮಕ್ಕಳು ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಭಾಗವಹಿಸಿದ್ದರು.

ಮೆರವಣಿಗೆಯ ಉದ್ದಕ್ಕೂ ದೇವರಿಗೆ ಪೂಜೆ ಸಲ್ಲಿಸಿ, ಈಡುಗಾಯಿ ಹೊಡೆಯಲಾಯಿತು. ಪುರಸಭಾ ಮುಖ್ಯಾಧಿಕಾರಿ ಸುರೇಶ್, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್ ಎಸ್‌ಐಗಳಾದ ಪ್ರಕಾಶ್, ಸುಬಾನ್, ರಂಗಾಯ್ಯಂಗರ್, ತಿರುಮಲಾಚಾರ್, ಗೀತಾ ರಾಮಕೃಷ್ಣ, ದೇವರಾಜು, ಡೇರಿ ಶ್ರೀಕಾಂತ್, ಜಯಂತ್, ನಟರಾಜ್, ಕನ್ನಡ ಪ್ರಮೋದ್, ವಿನಯ್ ಭಜರಂಗಿ, ಪೂರ್ಣೇಶ್, ಮುತ್ತುರಾಜ್, ಅರ್ಚಕರಾದ ಸತೀಶ್, ಶ್ರೀಧರ್, ಸತ್ಯ, ಶ್ರೀನಿಧಿ, ಸುಧಾಕರ್ ಭಾಗವಹಿಸಿದ್ದರು.

ಚಿಕ್ಕದೇವಮ್ಮನ ಬೆಟ್ಟದಲ್ಲಿ ಭಕ್ತಸಾಗರ



ಸರಗೂರು, ಅ.25–ವಿಜಯದಶಮಿ ಅಂಗವಾಗಿ ಮಂಗಳವಾರ ತಾಲೂಕಿನ ಪ್ರಸಿದ್ಧ ಚಿಕ್ಕದೇವಮ್ಮನವರ ಬೆಟ್ಟದ ತಾಯಿಯ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಬೆಟ್ಟದ ತಾಯಿಗೆ ವಿವಿಧ ಹೂವುಗಳಿಂದ ಅಲಂಕಾರಗೊಳಿಸಿ ಬೆಳಗ್ಗೆಯಿಂದಲೇ ಅಭಿಷೇಕದೊಂದಿಗೆ ಪೂಜಾ ಕಾರ್ಯ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ನಂತರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದರು. ಇದೇ ವೇಳೆ ಕೆಲವರು ವಿಶೇಷ ಪೂಜೆ ಸಲ್ಲಿಸಿ ಹರಕೆ ತೀರಿಸಿದರು. ಮಧ್ಯಾಹ್ನ 1.30 ಗಂಟೆ ನಂತರ ಚಿಕ್ಕದೇವಮ್ಮನವರ ಉತ್ಸವ ನಡೆಸಲಾಯಿತು. ಸುಮಾರು 10 ಸಾವಿರಕ್ಕೂ ಹೆಚ್ಚು ಭಕ್ತರು ಬೆಟ್ಟಕ್ಕೆ ಆಗಮಿಸಿದ್ದರು. ಸರಗೂರು ಠಾಣೆ ಪಿಎಸ್‌ಐ ನಂದೀಶ್ ಕುಮಾರ್, ಅಂತರಸಂತೆ ಠಾಣೆ ಪಿಎಸ್‌ಐ ರವಿಶಂಕರ್ ಹಾಗೂ ಪೊಲೀಸ್ ಸಿಬ್ಬಂದಿ ಬಂದೋಬಸ್ತ್ ಕಲ್ಪಿಸಿದ್ದರು. ದೇವಸ್ಥಾನದ ಸಿಇಓ ರಘು, ಪಾರುಪತ್ತೇದಾರ ಶಾಂತಿಪುರ ಮಹದೇವಸ್ವಾಮಿ, ಅರ್ಚಕರಾದ ಶಿವಕುಮಾರ್, ಕುಂದೂರು ಮಹಾದೇವಸ್ವಾಮಿ, ಪ್ರಸನ್ನ, ವೀರಣ್ಣ, ಮಣಿಕಂಠ, ನಿಂಗರಾಜು, ಸಿದ್ದಲಿಂಗಸ್ವಾಮಿ, ಕೃಷ್ಣ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

ಬೆಟ್ಟದಪುರದಲ್ಲಿ ಬನ್ನಿ ಉತ್ಸವ



ಬೆಟ್ಟದಪುರ, ಅ.25–ಇಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿಯ ಬನ್ನಿ ಉತ್ಸವ ಮಂಗಳವಾರ ಅದ್ಧೂರಿಯಾಗಿ ನೆರವೇರಿತು.

ಗ್ರಾಮದ ಬೀದಿಗಳಲ್ಲಿ ಗಿರಿಜಮ್ಮ ದೇವಿ ಹಾಗೂ ಬೆಳ್ಳಿ ಬಸಪ್ಪನ ಮೆರವಣಿಗೆ ನಡೆಸಿ, ನಂತರ ಬೆಟ್ಟದ ತಪ್ಪಲಿನ ಬನ್ನಿ ಮಂಟಪಕ್ಕೆ ತೆರಳಿ ವಿವಿಧ ಹೋಮ ಹಾಗೂ ಪೂಜೆ ನೆರವೇರಿಸಿ ಬನ್ನಿ ಕಡಿಯಲಾಯಿತು. ನವರಾತ್ರಿ ಅಂಗವಾಗಿ 9 ದಿನ ದೇವರನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಕೊನೆಯ ದಿನ ಅಲಂಕೃತ ಪಲ್ಲಕ್ಕಿಯಲ್ಲಿ ಗ್ರಾಮದ ಉಪ್ಪಾರ ಸಮಾಜದವರು ಉತ್ಸವ ನಡೆಸಿದರು. ಪ್ರಧಾನ ಅರ್ಚಕ ಸತೀಶ್ ಕಶ್ಯಪ್ ಪೂಜೆ ನೆರವೇರಿಸಿದರು.

ರಸ್ತೆ ತಡೆ ಚಳವಳಿ

ತಿ.ನರಸೀಪುರ, ಅ.25– ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಮಂಗಳವಾರ ಪಟ್ಟಣದಲ್ಲಿ ರಸ್ತೆ ಸಂಚಾರ ತಡೆ ಚಳವಳಿ ನಡೆಸಿ, ಕರಾಳ ದಿನ ಆಚರಿಸಿದರು.

ರೈತರ ಪಂಪ್‌ಸೆಟ್‌ಗಳಿಗೆ ಹಗಲು 10 ಗಂಟೆ ಕಾಲ ನಿರಂತರ ವಿದ್ಯುತ್ ನೀಡಬೇಕು. ತಮಿಳುನಾಡಿಗೆ ಹರಿಯುತ್ತಿರುವ ಕಾವೇರಿ ನದಿ ನೀರನ್ನು ನಿಲ್ಲಿಸಬೇಕು ಹಾಗೂ ಕಬ್ಬಿನ ಬಾಕಿ 150 ರೂ. ನೀಡಬೇಕು ಎಂದು ಆಗ್ರಹಿಸಿದರು. ನಂತರ ಮೈಸೂರಿನಲ್ಲಿ ಪ್ರತಿಭಟನೆ ನಡೆಸಲು ಪಟ್ಟಣದಿಂದ ಹೊರಟಿದ್ದ ರೈತ ಮುಖಂಡರನ್ನು ಪೊಲೀಸರು ಮಾರ್ಗಮಧ್ಯ ಬಂಧಿಸಿ ನಂಜನಗೂಡಿಗೆ ಕರೆದೊಯ್ದರು.

ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಕುರುಬೂರು ಗುರುಸ್ವಾಮಿ, ಯಾಕನೂರು ರಾಜೇಶ್, ಕುರುಬೂರು ಗೌರಿಶಂಕರ್, ವಾಚ್ ಕುಮಾರ್, ತರಕಾರಿ ನಿಂಗರಾಜು, ಕೆಇಬಿ ಯೋಗೇಶ್, ಯಾಕನೂರು ಮಲ್ಲೇಶ್, ಡೇರಿ ಸತೀಶ್, ಯಾರಗನಳ್ಳಿ ವೈ.ಎಂ.ಮಾದೇಸ್ವಾಮಿ, ಗೋಪಾಲಪುರ ಚಂದ್ರು ಇದ್ದರು.

ಯುವ ಜನತೆಗೆ ರಾಷ್ಟ್ರ ಕಟ್ಟಲು ಪ್ರೇರೇಪಿಸುವ ಕಾರ್ಯ ಅಗತ್ಯ



ತಿ.ನರಸೀಪುರ, ಅ.25– ದೇಶದ ಭವಿಷ್ಯ ಪ್ರಜೆಗಳಾದ ವಿದ್ಯಾರ್ಥಿಗಳು ಹಾಗೂ ಯುವ ಜನತೆಗೆ ರಾಷ್ಟ್ರ ಕಟ್ಟಲು ಪ್ರೇರೇಪಿಸುವ ಕಾರ್ಯ ಅಗತ್ಯವಿದೆ ಎಂದು ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಸಂತೇಮಾಳದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ, ತಾಲೂಕು ಆಡಳಿತ, ನೆಹರು ಯುವ ಕೇಂದ್ರ, ಕಾಲೇಜಿನ ಎನ್‌ಎಸ್‌ಎಸ್ ಘಟಕ, ಐಕ್ಯೂಎಸಿ ಹಾಗೂ ಯಾಚೇನಹಳ್ಳಿಯ ನನ್ನವ್ವ ಸಾಂಸ್ಕೃತಿಕ ಕಲಾತಂಡದ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ 'ನನ್ನ ಮಣ್ಣು–ನನ್ನ ದೇಶ' ಅಮೃತ ಕಳಸ ಯಾತ್ರೆ ಹಾಗೂ ಯೋಧರಿಗೆ ಅಭಿನಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮಗೆ ಸ್ವಾತಂತ್ರ್ಯ ತಂದು ಕೊಟ್ಟವರಿಗೆ ಹಾಗೂ ನಮ್ಮ ರಕ್ಷಿಸುವ ಯೋಧರನ್ನು ಸ್ಮರಿಸುವ ಕಾರ್ಯ ನಮ್ಮಿಂದಾಗಬೇಕಿದೆ. 'ನನ್ನ ಮಣ್ಣು–ನನ್ನ ದೇಶ' ಎಂಬ ಕಾರ್ಯಕ್ರಮ ಯುವ ಜನತೆಯಲ್ಲಿ ದೇಶಪ್ರೇಮ ಬೆಳೆಸಿ, ಏಕತೆ ಮನೋಭಾವ ಮೂಡಿಸುವ ಉದ್ದೇಶವಿದೆ. ನಮ್ಮ ನೆಲದ ಬಗ್ಗೆ ಗೌರವವಿರಬೇಕು. ಅಂದು ಸ್ವಾತಂತ್ರ್ಯ ಹೋರಾಟಗಾರರಲ್ಲಿ ದೇಶಾಭಿಮಾನ ಇದ್ದ ಕಾರಣ ತಮ್ಮ ಬದುಕನ್ನು ಬದಿಗೊತ್ತಿ ತ್ಯಾಗ, ಬಲಿದಾನ ಮಾಡಿ ಸ್ವಾತಂತ್ರ್ಯ ತಂದು ಕೊಟ್ಟರು. ಒಂದು ವೇಳೆ ಅವರಿಗೆ ದೇಶಾಭಿಮಾನವಿಲ್ಲದಿದ್ದರೆ, ಇಂದು ನಮಗೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ. ದೇಶದ ಭವಿಷ್ಯ ಪ್ರಜೆಗಳಾದ ವಿದ್ಯಾರ್ಥಿಗಳು ದೇಶ ಕಟ್ಟುವ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಧನೆಯತ್ತ ಸಾಗಬೇಕಾದರೆ ವಿದ್ಯಾರ್ಥಿಗಳಿಗೆ ಗುರಿ ಇರಬೇಕು. ಇದಕ್ಕೆ ಸತತ ಪರಿಶ್ರಮ, ನಿರಂತರ ಪ್ರಯತ್ನ ಇರಬೇಕು. ಒಮ್ಮೆ ಈ ವೃತ್ತಿ, ಮತ್ತೊಮ್ಮೆ ಆ ವೃತ್ತಿ ಎಂಬ ಚಂಚಲತೆ ಮನಸ್ಸಿನಲ್ಲಿದ್ದರೆ ಏನನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಆ ನಿಟ್ಟಿನಲ್ಲಿ ನಿರ್ದಿಷ್ಟ ಗುರಿಯೊಂದಿಗೆ ಸಾಗುವಂತೆ ಹೇಳಿದರು.

ತಾಪಂ ಇಓ ಸಿ.ಕೃಷ್ಣ ಮಾತನಾಡಿದರು. ಪತ್ರಕರ್ತ ಎಂ.ಮಹದೇವ್ ವಿಶೇಷ ಉಪನ್ಯಾಸ ನೀಡಿದರು. ಇದೇ ವೇಳೆ ಯೋಧ ಟಿ.ಎಸ್.ಪ್ರಶಾಂತ್ ಹಾಗೂ ನಿವೃತ್ತ ಯೋಧ ರಾಜೇಶ್ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ವಿವಿಧ ಗ್ರಾಮ ಪಂಚಾಯಿತಿಯಿಂದ ತಂದಿದ್ದ ಮಣ್ಣನ್ನು ಮಡಿಕೆಯಲ್ಲಿ ಸಂಗ್ರಹಿಸಲಾಯಿತು. ಇದಕ್ಕೂ ಮುನ್ನ ಅಮೃತ ಕಳಸ ಯಾತ್ರೆಯಡಿ ಪಟ್ಟಣದಲ್ಲಿ ಜಾಥಾ ನಡೆಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ವಿ.ಉದಯ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನನ್ನವ್ವ ಸಾಂಸ್ಕೃತಿಕ ಕಲಾ ತಂಡದ ಮುಖ್ಯಸ್ಥ ವೈ.ಜಿ.ಮಹದೇವ್, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಎನ್‌ಎಸ್‌ಎಸ್ ಯೋಜನಾಧಿಕಾರಿಗಳಾದ ಕೆಂಪರಾಜು, ಕವಿತಾ, ಐಕ್ಯೂಎಸಿ ಸಂಚಾಲಕಿ ಡಾ.ಎಂ.ಕೆ.ಮಾಧವಿ, ಪಿಡಿಓ ವೃಷಬೇಂದ್ರ, ಸಹಾಯಕ ಪ್ರಾಧ್ಯಾಪಕರು ಹಾಜರಿದ್ದರು.

ಮಿರ್ಲೆ ಕೃಷಿ ಪತ್ತಿನ ಸಂಘ ಜೆಡಿಎಸ್ ಬೆಂಬಲಿತರ ಪಾಲು



ಭೇರ್ಯ, ಅ.25–ಮಿರ್ಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಚುನಾವಣೆಯಲ್ಲಿ ಎಲ್ಲಾ 12 ನಿರ್ದೇಶಕ ಸ್ಥಾನಗಳು ಜೆಡಿಎಸ್ ಬೆಂಬಲಿತರ ಪಾಲಾಗಿದೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸುಧಾಕರ್, ಸಾಲಗಾರರ ಕ್ಷೇತ್ರದಿಂದ ಎಂ.ಬಿ.ಕಮಲಮ್ಮ, ಕಿರಣ್ ಕುಮಾರ್, ಎಂ.ಕೆ.ಕೃಷ್ಣಶೆಟ್ಟಿ, ಎಂ.ಎಸ್. ಧ್ರುವಕುಮಾರ, ಎಂ.ಕೆ.ನಟರಾಜ್, ಭಾಸ್ಕರ್, ಎಂ.ವಿ.ರಮೇಶ್, ರಂಗಸ್ವಾಮಿ, ಸುಶೀಲಮ್ಮ, ಪರಿಶಿಷ್ಟ ಪಂಗಡದಿಂದ ಪಾಪನಾಯಕ, ಪರಿಶಿಷ್ಟ ಜಾತಿಯಿಂದ ಬೈರೋಜಿ ಅವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಬಾಲು ಮಾತನಾಡಿ, ಸಂಘದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಎಲ್ಲಾ 12 ಸ್ಥಾನಗಳಿಗೆ ಜೆಡಿಎಸ್ ಬೆಂಬಲಿತರು ಆಯ್ಕೆಯಾಗುವ ಮೂಲಕ ಮಿರ್ಲೆ ಕ್ಷೇತ್ರ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಬೆಂಬಲಕ್ಕೆ ಸದಾ ಇದೆ ಎಂಬುದನ್ನು ಈ ಚುನಾವಣೆ ತೋರಿಸಿದೆ ಎಂದು ತಿಳಿಸಿದರು.

ಇದೇ ವೇಳೆ ಜೆಡಿಎಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಪಕ್ಷದ ಮುಖಂಡರಾದ ರಾಧಾಕೃಷ್ಣ, ನಾಗೇಶ್, ದಿವಾಕರ್, ಧನಂಜಯ, ಎಂ.ಲೋಕೇಶ್, ಕುನ್ನೇಗೌಡ, ಹೊಸಟ್ಟಿ ರಘು, ಮನು, ಚಂದ್ರು ಹಾಜರಿದ್ದರು.

ಗ್ರಂಥಾಲಯ ಜ್ಞಾನದ ಸಂಕೇತ



ಹೆಚ್.ಡಿ.ಕೋಟೆ, ಅ.25– ಜ್ಞಾನದ ಸಂಕೇತವೇ ಗ್ರಂಥಾಲಯ, ಗ್ರಂಥಾಲಯಗಳಿರುವ ಸ್ಥಳಗಳಲ್ಲಿ ಹೆಚ್ಚು ವಿದ್ಯಾವಂತರಿರುತ್ತಾರೆ ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನ ಡಾ.ಬಿ.ಆರ್.ಅಂಬೇಡ್ಕರ್ ನೂತನ ಭವನದಲ್ಲಿ ಯರಹಳ್ಳಿಕಾವಲ್‌ನ ಜನರು ತೆರೆದಿರುವ ಗ್ರಂಥಾಲಯವನ್ನು ಸಂವಿಧಾನದ ಪೀಠಿಕೆ ಓದುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಗ್ರಂಥಾಲಯಗಳನ್ನು ಪ್ರಾರಂಭಿಸುವ ಮೂಲಕ ಅಂಬೇಡ್ಕರ್ ಆಶಯ ಹಾಗೂ ಚಿಂತನೆಗಳನ್ನು ಶೋಷಿತ ಸಮುದಾಯಗಳು ಈಡೇರಿಸುತ್ತಿವೆ ಎಂದರು.

ಗ್ರಂಥಾಲಯಗಳು ಪ್ರಾರಂಭಕ್ಕೆ ಸೀಮಿತವಾಗದೆ, ಅಂಬೇಡ್ಕರ್ ಅವರ ಶಿಕ್ಷಣ, ಜ್ಞಾನಾರ್ಜನೆ ಮೂಲಕ ಸಂಘಟಿಸಿ, ಹಕ್ಕುಗಳಿಗಾಗಿ ಹೋರಾಟ ರೂಪಿಸುವ ದಿಕ್ಕಿನಲ್ಲಿ ಪ್ರೇರೇಪಣೆ ಆಗಲಿ. ಪುರಾಣಗಳಲ್ಲಿ ಜ್ಞಾನದ ಸಂಕೇತ ಸರಸ್ವತಿ, ಅದು ಭಾರತಕ್ಕೆ ಮಾತ್ರ ಸೀಮಿತ. ಜಗತ್ತಿನ ಇತಿಹಾಸದಲ್ಲಿ ಜ್ಞಾನದ ಸಂಕೇತ, ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ. ಅಂತಹ ಜ್ಞಾನದ ಸಂಕೇತದ ಗಿಡವನ್ನು ಹ್ಯಾಂಡ್‌ಪೋಸ್ಟ್ ಜನರು ನೆಟ್ಟಿದ್ದಾರೆ. ಇದು ಮುಂದಿನ ದಿನಗಳಲ್ಲಿ ದೊಡ್ಡ ಮರವಾಗಿ ಸಾವಿರಾರು ಜನರಿಗೆ ಜ್ಞಾನದ ನೆರಳನ್ನು ಕೊಡುವಂತೆ ಬೆಳೆಯಲಿ ಎಂದು ಆಶಿಸಿದರು.

ಪುರಸಭಾ ಸದಸ್ಯ ಎಚ್.ಸಿ.ನರಸಿಂಹಮೂರ್ತಿ ಮಾತನಾಡಿ, ಹ್ಯಾಂಡ್‌ಪೋಸ್ಟ್‌ನಲ್ಲಿ ಗ್ರಂಥಾಲಯ ಉದ್ಘಾಟನೆಗೊಂಡ ಸ್ಥಳದಲ್ಲೇ ಮುಂದಿನ ದಿನಗಳಲ್ಲಿ ಅಂಬೇಡ್ಕರ್ ಪುತ್ಥಳಿಯನ್ನು ಅನಾವರಣ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಅಂತರಸಂತೆ ಬುದ್ಧಧಮ್ಮ ಕೇಂದ್ರದ ಗೌತಮ ಬಂತೇಜಿ, ಪುರಸಭಾ ಸದಸ್ಯರಾದ ಪ್ರೇಮ್ ಸಾಗರ್, ಚಾಂ. ನಂಜುಂಡಮೂರ್ತಿ, ಹೈರಿಗೆ ಶಿವರಾಜು, ಮಲ್ಲೇಶ್, ಶಿಕ್ಷಕ ನಾಗರಾಜು, ಜಿವಿಕೆ ಬಸವರಾಜು, ಉಮೇಶ್, ಯೂಸುಫ್, ಹೆಗ್ಗನೂರು ನಿಂಗರಾಜು, ಬೊಪ್ಪನಹಳ್ಳಿ ಭಾಸ್ಕರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಿಎಂ ತವರು ಕ್ಷೇತ್ರ ವರುಣದಲ್ಲಿ ಭೂ ಮಾಫಿಯಾ

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಎಸ್.ಚಂದ್ರಶೇಖರ್ ಆರೋಪ



ತಿ.ನರಸೀಪುರ, ಅ.25– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಕ್ಷೇತ್ರ ವರುಣದಲ್ಲಿ ಭೂ ಮಾಫಿಯಾ ನಡೆಯುತ್ತಿದ್ದು, ಸರ್ಕಾರಿ ಭೂಮಿ ರಕ್ಷಿಸಲು ಜಿಲ್ಲಾಧಿಕಾರಿ ನಿರ್ಲಕ್ಷಿಸಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಡಾ.ಎಸ್.ಚಂದ್ರಶೇಖರ್ ಆರೋಪಿಸಿದರು.

ಪಟ್ಟಣದ ಮಿನಿವಿಧಾನಸೌಧ ಹಿಂಭಾಗದ ಸುಮಾರು 4 ರಿಂದ 5 ಕೋಟಿ ರೂ. ಬೆಲೆ ಬಾಳುವ ಸರ್ಕಾರಿ ಜಮೀನನ್ನು ಕೆಲ ಖಾಸಗಿ ವ್ಯಕ್ತಿಗಳು ನಕಲಿ ದಾಖಲೆ ಸೃಷ್ಟಿಸಿ ಕಬಳಿಸುವ ಉದ್ದೇಶದಿಂದ ಕಳೆದ 17 ವರ್ಷಗಳಿಂದ ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದಾರೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ವರುಣ ಕ್ಷೇತ್ರ ವ್ಯಾಪ್ತಿಯ ತಾಲೂಕಿನ ಕಸಬಾ ಹೋಬಳಿಯ ಆಲಗೂಡು ಗ್ರಾಮದ ಸರ್ವೆ ನಂ.511ರಲ್ಲಿ 3.38 ವಿಸ್ತೀರ್ಣವುಳ್ಳ ಜಾಗ ದೇವರ ಇನಾಂ ಜಮೀನಾಗಿದ್ದು, ಸದರಿ ಜಮೀನಿನ ಆರ್‌ಟಿಸಿ ಕಲಂ 10ರಲ್ಲಿ ಪೂಜಾರಿ ಮಲ್ಲಪ್ಪನವರ ಹೆಸರು ನಮೂದಾಗಿದೆ. ಈವರೆಗೂ ಮಲ್ಲಪ್ಪರ ಹೆಸರಿಗೆ ಜಮೀನು ಮುಂಜೂರಾಗಿಲ್ಲ. ಪೂಜಾರಿ ಮಲ್ಲಪ್ಪಗೆ ನಾವು ದತ್ತು ಮಕ್ಕಳು ಎಂದು ಬಿಂಬಿಸಿಕೊಂಡು ನಕಲಿ ವಂಶವೃಕ್ಷ ಸೃಷ್ಟಿ ಮಾಡಲಾಗಿದೆ. 1972ರಲ್ಲಿ ಸರ್ಕಾರಿ ಹುದ್ದೆಯಲ್ಲಿಲ್ಲದ ಗ್ರಾಮಲೆಕ್ಕಿಗ ಆನಂದರಾವ್ ಹೆಸರಿನ ನಕಲಿ ಸಹಿ ಮಾಡಿ, ಪೂಜಾರಿ ಮಲ್ಲಪ್ಪ ಮೃತಪಟ್ಟಿದ್ದಾರೆಂದು ನಕಲಿ ಮರಣ ಪತ್ರ ಸೃಷ್ಟಿಸಿದ್ದಾರೆ ಎಂದು ಆರೋಪಿಸಿದರು.

10 ವರ್ಷಗಳ ಹಿಂದೆ ಖಾತೆ ತಿರಸ್ಕಾರವಾಗಿರುವ ಜಮೀನನ್ನು ಮತ್ತೆ ಕೆಲ ಭೂಮಾಫಿಯಾ ವ್ಯಕ್ತಿಗಳ ಕೈವಾಡದಿಂದ ಭೂಮಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಿ ಸರ್ಕಾರಿ ಭೂಮಿ ಕಬಳಿಸುವ ಹುನ್ನಾರ ನಡೆದಿದ್ದು, ಜಿಲ್ಲಾಡಳಿತ ಸರ್ಕಾರಿ ಭೂಮಿ ಸಂರಕ್ಷಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಪತ್ರ ಮತ್ತು ತಹಶೀಲ್ದಾರ್ ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕಾಗಿದ್ದು, ಪೂಜಾರಿ ಮಲ್ಲಪ್ಪ ಅಥವಾ ಮತ್ಯಾವ ವ್ಯಕ್ತಿಗೂ ಖಾತೆಯೇ ಆಗಿಲ್ಲದ ಮೇಲೆ ನೋಟಿಸ್ ನೀಡುವ ಅವಶ್ಯಕತೆ ಇಲ್ಲ. ಆದರೂ ನೋಟಿಸ್ ನೀಡುವ ಮೂಲಕ ಎಸಿ ಕಾಲಾವಕಾಶ ನೀಡಿರುವುದರ ಹಿಂದೆ ಅಧಿಕಾರ ದುರುಪಯೋಗವಾಗುತ್ತಿದ್ದು, ಭೂ ಮಾಫಿಯಾದವರೊಂದಿಗೆ ಶಾಮೀಲಾಗಿ ಸಹಕರಿಸಲಾಗುತ್ತಿದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ವಂಚಿಸಿ ನ್ಯಾಯಾಲಯಕ್ಕೆ ಹೋಗಲು ಭೂ ಭಕ್ಷಕರಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ ಎಂಬ ಅನುಮಾನವಿದೆ. ಆದ್ದರಿಂದ ಕೋಟ್ಯಂತರ ರೂ. ಬೆಲೆಬಾಳುವ ಸರ್ಕಾರಿ ಭೂಮಿಯನ್ನು ಸರಂಕ್ಷಣೆ ಮಾಡುವಂತೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ತಾಲೂಕು ಸಂಚಾಲಕರಾದ ಕೆಂಪಯ್ಯನಹುಂಡಿ ಆರ್.ರಾಜು, ಮನೋಜ್ ಕುಮಾರ್, ಜಿಲ್ಲಾ ವಿಭಾಗಿಯ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ರಾಜಶೇಖರ್, ಗೋವಿಂದರಾಜು, ಪರಶುರಾಮ್, ಪ್ರಭಾಕರ್, ರವಿಕಾಂತ್, ಸೋಸಲೆ ಶಿವು, ಬೈರಾಪುರ ಅರ್ಜುನ್, ಬಿಲಿಗೆರೆಹುಂಡಿ ಮಹದೇವಸ್ವಾಮಿ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಗಣಪತ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಲಿಯೋ (ತ)	2 ಪ್ರದರ್ಶನಗಳು
ಲಿಯೋ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಲಿಯೋ (ಕ)	3 ಪ್ರದರ್ಶನಗಳು
ಲಿಯೋ (ತ)	1 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಣಪತ್ (ಹಿ)	4 ಪ್ರದರ್ಶನಗಳು
ಪ್ರಭಾ	
ಟೈಗರ್ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಢುಂಢ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಪತ್ತೆಯಾಗಿದ್ದ ಯುವಕನ ಶವ ಪತ್ತೆ




ಹುಣಸೂರು, ಅ.25– ಮೂರು ದಿನಗಳ ಹಿಂದೆ ಕಾಣೆಯಾಗಿದ್ದ ಯುವಕನ ಶವ ಬುಧವಾರ ತಾಲೂಕಿನ ತಿಪ್ಲಾಪುರ ಗ್ರಾಮದ ಕೆರೆಯಲ್ಲಿ ಪತ್ತೆಯಾಗಿದ್ದು, ಈತನ ತಾಯಿ ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ.

ಗ್ರಾಮದ ಕೆಂಚೆಗೌಡರ ಮಗ ಮಧು (28) ಮೃತ ಯುವಕ. ಈತ ಕಳೆದ ಮೂರು ದಿನಗಳ ಹಿಂದೆ ಮನೆಯಿಂದ ಹೊರ ಹೋದವನು ಪತ್ತೆಯಾಗಿರಲಿಲ್ಲ. ನಂತರ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಈತನ ತಾಯಿ ಜಯಂತಿ ನಾಪತ್ತೆ ದೂರು ನೀಡಿದರು. ಬುಧವಾರ ಬೆಳಗ್ಗೆ ಮಧು ಅವರ ಬಾವ ಬಹಿರ್ದೆಸೆಗೆಂದು ಕೆರೆ ಹತ್ತಿರ ಹೋದಾಗ ಕೆರೆಯಲ್ಲಿ ಮೃತದೇಹ ತೇಲುತ್ತಿರುವುದು ಪತ್ತೆಯಾಗಿದೆ.

ನನ್ನ ಮಗನ ಸಾವಿಗೆ ನಮ್ಮ ಬಾವ ಮತ್ತು ಅವರ ಕುಟುಂಬವೇ ಕಾರಣವೆಂದು ಆರೋಪಿಸಿ ತಾಯಿ ಜಯಂತಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಜಮೀನಿನ ವಿಚಾರವಾಗಿ 25 ವರ್ಷಗಳಿಂದ ನಮಗೂ ಹಾಗೂ ಅವರಿಗೂ ಗಲಾಟೆ ನಡೆದು, ನ್ಯಾಯಾಲಯದಲ್ಲಿ ವ್ಯಾಜ್ಯವಿತ್ತು. ಆದರೆ, ಕಳೆದ ಎರಡು ತಿಂಗಳ ಹಿಂದೆ ನ್ಯಾಯಾಲಯದಲ್ಲಿ ತೀರ್ಪು ನಮ್ಮ ಪರ ಬಂದಿದೆ. ಇದನ್ನು ಸಹಿಸದ ಬಾವ ಸಣ್ಣೇಗೌಡ, ಅವರ ಮಕ್ಕಳಾದ ಹರೀಶ, ಶಿವಣ್ಣ, ಕೊತ್ತೇಗಾಲದಲ್ಲಿರುವ ಬಾವನ ತಂಗಿ ರತ್ನಮ್ಮ, ಪತಿ ಜಗದೀಶ್ ನನ್ನ ಮಗನನ್ನು ಕೊಲೆ ಮಾಡಿ ಸೇಡು ತೀರಿಸಿಕೊಂಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.


ಸರ್ವಮಂಗಳಾ ನಿಧನ



ಸರಗೂರು: ನಿವೃತ್ತ ವನಪಾಲಕ ದಿವಂಗತ ವಿರುಪಾಕ್ಷಯ್ಯ ಅವರ ಪತ್ನಿ ಸರ್ವಮಂಗಳಾ (84) ಬುಧವಾರ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಮತ್ತು ಅಪಾರ ಬಂಧು–ಬಳಗ ಇದ್ದಾರೆ. ಪಟ್ಟಣದ 12ನೇ ವಾರ್ಡ್‌ನ ಮೂಡಲಮಠದಹುಂಡಿಯಲ್ಲಿರುವ ಮೃತರ ಜಮೀನಿನಲ್ಲಿ ಗುರುವಾರ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಬಿನಜರ್ ಶಾಂತಕುಮಾರ್



ಹೆಚ್.ಡಿ.ಕೋಟೆ: ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಎಬಿನಜರ್ ಶಾಂತಕುಮಾರ್ (47) ಬುಧವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಅಪಾರ ಬಂಧು–ಬಳಗ ಇದ್ದಾರೆ. ಗುರುವಾರ ಮಧ್ಯಾಹ್ನ 1 ಗಂಟೆಗೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾ ವಸ್ತುಪ್ರದರ್ಶನದಲ್ಲಿ ಪ್ರವಾಸಿಗರ ಜಾತ್ರೆ

● ಕಿಕ್ಕಿರಿದು ತುಂಬಿದ್ದ ಇಡೀ ವಸ್ತುಪ್ರದರ್ಶನ ಆವರಣ ● ವ್ಯಾಪಾರಿಗಳಿಗೆ ಖುಷಿಯೋ ಖುಷಿ; ಭರ್ಜರಿ ವ್ಯಾಪಾರ ● ಮನರಂಜನಾ ತಾಣಗಳಲ್ಲಿ ಕಾಲಿಡಲು ಜಾಗವಿಲ್ಲ



ಮೈಸೂರು,ಅ.25(ಎಂಕೆ)–ದಸರಾ ಮಹೋತ್ಸವದ ಸಡಗರ–ಸಂಭ್ರಮದ ಹಿನ್ನೆಲೆ ಮೈಸೂರಿಗೆ ಲಗ್ಗೆ ಇಟ್ಟಿರುವ ಪ್ರವಾಸಿಗರು, ದಸರಾ ವಸ್ತುಪರ್ದರ್ಶನಕ್ಕೆ ಮುಗಿಬಿದ್ದಿದ್ದಾರೆ.

ವಿಶ್ವವಿಖ್ಯಾತ ಜಂಬೂಸವಾರಿ ಸಂಪನ್ನಗೊಂಡ ಬಳಿಕ ದಸರಾ ವಸ್ತುಪ್ರದರ್ಶನದತ್ತ ಪ್ರವಾಸಿಗರು ಧಾವಿಸುತ್ತಿದ್ದು, ಬುಧವಾರ ಒಂದೇ ದಿನ ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ. ದಸರಾ ಉದ್ಘಾಟನೆಗೊಂಡಾಗಿನಿಂದ ಇಲ್ಲಿಯವರೆಗೆ ಸುಮಾರು 4 ಲಕ್ಷ ಮಂದಿ ಪ್ರವಾಸಿಗರು ದಸರಾ ವಸ್ತುಪ್ರದರ್ಶಕ್ಕೆ ಭೇಟಿ ನೀಡಿದ್ದು, ಇಡೀ ವಸ್ತುಪ್ರದರ್ಶನ ಆವರಣ ಪ್ರವಾಸಿಗರಿಂದ ತುಂಬಿ ತುಳುಕುವಂತಾಗಿದೆ.

ದಸರಾ ಉದ್ಘಾಟನೆಯ ಮೊದಲ ದಿನ ಸುಮಾರು 20 ಸಾವಿರ, ಅ.16ರಿಂದ 18ರವರೆಗೆ 20–25 ಸಾವಿರ, ಅ.19ರಿಂದ 24ರವರೆಗೆ 30–35 ಸಾವಿರ, ವಿಜಯದಶಮಿ ದಿನದಂದು 50–60 ಸಾವಿರ ಪ್ರವಾಸಿಗರು ಭೇಟಿ ನೀಡಿದ್ದರೆ, ಅ.25ರಂದು ಒಂದೇ ದಿನ ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ.

ರಾಜ್ಯ ಸರ್ಕಾರದ ಶಕ್ತಿ(ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ) ಯೋಜನೆ ಹಿನ್ನೆಲೆಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ವಸ್ತುಪ್ರದರ್ಶನದಲ್ಲಿ ಫುಡ್ ಕೋರ್ಟ್, ಅಂಗಡಿ ಮುಂಗಟ್ಟುಗಳು ಭರ್ತಿಯಾಗಿವೆ. ಅಮ್ಯೂಸ್‌ಮೆಂಟ್ ಪಾರ್ಕ್(ಜಾಯಿಂಟ್ ವ್ಹೀಲ್)ನಲ್ಲಿ ಕಾಲಿಡದಷ್ಟು ಮಟ್ಟಿಗೆ ಜನರು ತುಂಬಿದ್ದು, ಮಕ್ಕಳೊಂದಿಗೆ ತಾವು ಕೂಡ ಜಾಯಿಂಟ್ ವ್ಹೀಲ್‌ಗಳಲ್ಲಿ ಆಟವಾಡಿ ಸಂಭ್ರಮಿಸುತ್ತಿದ್ದಾರೆ.

ವ್ಯಾಪಾರ ವಹಿವಾಟು ಜೋರು: ವಸ್ತುಪ್ರದರ್ಶನದಲ್ಲಿ ಪ್ರವಾಸಿಗರ ಬಾಯಲ್ಲಿ ನೀರೂರಿಸುವ ಬಗೆ ಬಗೆಯ ಖಾದ್ಯಗಳು ಆಹಾರ ಪ್ರಿಯರ ಆಕರ್ಷಣೆ ಯಾಗಿದ್ದರೆ, ಬಟ್ಟೆ, ಬ್ಯಾಗ್, ಶೂ, ಸ್ಲಿಪ್ಪರ್ ಸೇರಿದಂತೆ ಮಕ್ಕಳ ಆಟಿಕೆಗಳು ಜೋರಾಗಿ ಮಾರಾಟವಾಗುತ್ತಿವೆ. ಬಹುತೇಕ ಎಲ್ಲಾ ಅಂಗಡಿ ಮಳಿಗೆಗಳು ಭರ್ತಿಯಾಗಿದ್ದು, ವ್ಯಾಪಾರ–ವಹಿವಾಟು ಪೂರ್ಣ ಆರಂಭವಾಗಿದೆ.

ಸರ್ಕಾರಿ ಮಳಿಗೆಗಳು ಆಕರ್ಷಣೆ: ಈಗಾಗಲೇ ಉದ್ಘಾಟನೆಗೊಂಡಿರುವ 15ಕ್ಕೂ ಹೆಚ್ಚು ಸರ್ಕಾರಿ ಮಳಿಗೆಗಳು ಪ್ರವಾಸಿಗರ ಆಕರ್ಷಣೆಯಾಗಿವೆ. ಪ್ರವಾಸೋದ್ಯಮ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಮಳಿಗೆಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ

ರಜಾ–ಮಜಾ: ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಸರ್ಕಾರಿ ಶಾಲೆಗಳು ನಾಳೆಯಿಂದ ಆರಂಭವಾದರೂ ಎರಡು ದಿನ ಶಾಲೆಗೆ ರಜಾ ಹಾಕಿ ಕಾಲ ಕಳೆಯುವ ಚಿಂತನೆಯಲ್ಲಿ ಪ್ರವಾಸಿಗರಿದ್ದಾರೆ. ಎರಡು ದಿನ ಕಳೆದರೆ ಮತ್ತೆ ವಾರದ ರಜಾ ದಿನಗಳಿದ್ದು, ಒಟ್ಟಿಗೆ ಅ.30ರಿಂದ ಶಾಲೆಗೆ ಕಳುಹಿಸಿದರಾಯಿತು. ಹೇಗಿದ್ದರೂ ಮೈಸೂರಿಗೆ ಬಂದಿದ್ದೇವೆ. ಎಲ್ಲಾ ಪ್ರವಾಸಿ ತಾಣಗಳನ್ನು ನೋಡಿಕೊಂಡೇ ಹೋಗಬೇಕು ಎಂಬ ಚಿಂತನೆಯಲ್ಲಿದ್ದಾರೆ ಎಂದು ಪ್ರವಾಸಿಗರೊಬ್ಬರು ತಿಳಿಸಿದರು.

ಅಚ್ಚುಕಟ್ಟು ವ್ಯವಸ್ಥೆ: ದಸರಾ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಮಧ್ಯಾಹ್ನ 3ರಿಂದ ರಾತ್ರಿ 10ರವರೆಗೂ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಇನ್ನಿತರೆ ಮೂಲ ಸೌಕರ್ಯ ವ್ಯವಸ್ಥೆ ಮಾಡಲಾಗಿದೆ. ಹಾಗೆಯೇ ಪಾರ್ಕಿಂಗ್ (ಕಾರಿಗೆ 50 ರೂ., ದ್ವಿಚಕ್ರ ವಾಹನಗಳಿಗೆ 20 ರೂ.) ವ್ಯವಸ್ಥೆಯಲ್ಲಿಯೂ ಯಾವುದೇ ಗೊಂದಲವಾಗದಂತೆ ನಿರ್ವಹಿಸಲಾಗುತ್ತಿದೆ ಎಂದು ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಜಿ.ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> "ದಸರಾ ವಸ್ತುಪ್ರದರ್ಶನಕ್ಕೆ ಆಗಮಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಈ ಬಾರಿ ಹೊಸದಾಗಿ ನಿರ್ಮಾಣ ಮಾಡಿರುವ ಸೆಲ್ಫಿ ಸ್ಪಾಟ್ ವಿಶೇಷ ಆಕರ್ಷಣೆಯಾಗಿದ್ದು, ಯುವಕ–ಯುವತಿಯರು ಸೇರಿದಂತೆ ಪ್ರತಿಯೊಬ್ಬರು ಫೋಟೋ ತೆಗೆದುಕೊಂಡು ಸಂಭ್ರಮಿಸುತ್ತಿದ್ದಾರೆ. ಅಲ್ಲದೆ ಪ್ರವಾಸಿಗರ ಅನುಕೂಲಕ್ಕಾಗಿ ಲಗೇಜ್ ರೂಂ ಮಾಡಿರುವುದಕ್ಕೆ ಪ್ರಶಂಸೆ ವ್ಯಕ್ತವಾಗಿರುವುದಲ್ಲದೆ, ನಿರೀಕ್ಷೆಗೂ ಮೀರಿ ಲಗೇಜ್ ರೂಂ ಬಳಕೆಯಾಗುತ್ತಿದೆ.
> **–ರಾಜೇಶ್ ಜಿ.ಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಸರಾ ವಸ್ತುಪ್ರದರ್ಶನ ಪ್ರಾಧಿಕಾರ**

ಮೃಗಾಲಯಕ್ಕೆ 1.65 ಲಕ್ಷ ಪ್ರವಾಸಿಗರು ಭೇಟಿ...!

ದಸರಾ ಮಹೋತ್ಸವ ಉದ್ಘಾಟನೆಯಾದ ಅ.15ರಿಂದ 24ರವರೆಗೆ ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ 1.65 ಲಕ್ಷ ಮಂದಿ ಭೇಟಿ ನೀಡಿದ್ದು, ವಿಜಯದಶಮಿ ದಿನ 23,890 ಪ್ರವಾಸಿಗರು ಭೇಟಿ ನೀಡಿದ್ದಾರೆ. 2020ರ ದಸರಾ ಮಹೋತ್ಸವದ ವೇಳೆ 20,217 ಮಂದಿ, 2021ರಲ್ಲಿ 75,251 ಮಂದಿ, 2022ರಲ್ಲಿ 1,55,588 ಮಂದಿ ಪ್ರವಾಸಿಗರು ಭೇಟಿ ನೀಡಿದರೆ, ಈ ವರ್ಷ 1,65,003 ಮಂದಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ಕಳೆದ ಮೂರು ವರ್ಷಕ್ಕೆ ಹೋಲಿಸಿದರೆ ಈ ವರ್ಷ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ ಎಂದು ಮೃಗಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜ.22ಕ್ಕೆ ಅಯೋಧ್ಯೆಯ ಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ; ಪ್ರಧಾನಿ ಮೋದಿಗೆ ಆಮಂತ್ರಣ



ನವದೆಹಲಿ: ಅಯೋಧ್ಯೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮಂದಿರದಲ್ಲಿ ಜ.22ರಂದು ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆಯಾಗಲಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನಿ ನರೇಂದ್ರ ಮೋದಿಗೆ ಬುಧವಾರ ಆಮಂತ್ರಣ ನೀಡಿತು. ಈ ಬಗ್ಗೆ ಸ್ವತಃ ಪ್ರಧಾನಿಗಳು ಟ್ವೀಟ್ ಮಾಡಿದ್ದು, ತಮ್ಮ ಜೀವಮಾನದಲ್ಲಿ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಲಿರುವುದಕ್ಕೆ ಧನ್ಯನಾಗಿದ್ದೇನೆ ಎಂದಿದ್ದಾರೆ.

ತಮಗೆ ಆಮಂತ್ರಣ ನೀಡಿದ್ದನ್ನು ಉಲ್ಲೇಖಿಸಿರುವ ಪ್ರಧಾನಿ ಮೋದಿ, ಜೈ ಶ್ರೀ ರಾಮ್! ಇಂದು ಅತ್ಯಂತ ಭಾವನಾತ್ಮಕ ದಿನವಾಗಿದೆ ಎಂದು ಹೇಳಿದ್ದಾರೆ. ಪ್ರಧಾನಿಗೆ ಆಮಂತ್ರಣ ನೀಡಿದ ತೀರ್ಥಕ್ಷೇತ್ರ ಟ್ರಸ್ಟ್‌ನ ಭಾಗವಾಗಿ ರಾಜ್ಯದ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮಿಗಳು ಭಾಗಿಯಾಗಿದ್ದರು. ಜ.22ರಂದು ಅಯೋಧ್ಯೆಯ ಮಂದಿರದಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆಯಾಗಲಿದೆ ಎಂದು ಅ.25ರಂದು ಆರ್‌ಎಸ್‌ಎಸ್ ಮುಖಂಡ ಮೋಹನ್ ಭಾಗ್ವತ್ ಹೇಳಿದ್ದರು.

ಅ.28ರಿಂದ ಸ್ಮಾರ್ತ ಬ್ರಾಹ್ಮಣ ಸಂಘದ ಸುವರ್ಣ ಮಹೋತ್ಸವ



ಮೈಸೂರು, ಅ.25(ಜಿಎ)–ಹಳೇ ನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣ ಸಂಘದ ಸುವರ್ಣ ಮಹೋತ್ಸವ ಸಮಾರಂಭವನ್ನು ಅಕ್ಟೋಬರ್ 28, 29ರಂದು ಬೆಳಗ್ಗೆ 10.30ಕ್ಕೆ ನಗರದ ಕೃಷ್ಣಮೂರ್ತಿಪುರಂನ ಶಾಂತಿ ನಿಕೇತನ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎಸ್.ವಸಂತ್ ತಿಳಿಸಿದರು.

ಅಂದಿನ ಕಾರ್ಯಕಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಸ್.ಎ.ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಪಾಲಿಕೆ ಸದಸ್ಯರಾದ ಮ.ವಿ.ರಾಮಪ್ರಸಾದ್, ಎಂ.ಸಿ.ರಮೇಶ್, ಪಲ್ಲವಿ ಬೇಗಂ, ವಿಪ್ರ ಮುಖಂಡ ಕೆ.ಆರ್.ಸತ್ಯನಾರಾಯಣ್ ಮತ್ತು ಕೆ.ರಾಮಸ್ವಾಮಿ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಕೆ.ಎಸ್.ಪಶುಪತಿ ರಾವ್, ಕಾರ್ಯದರ್ಶಿ ಜಿ.ಎ.ಉಮೇಶ್, ಖಜಾಂಚಿ ಸುರೇಶ್ ಮುಳ್ಳೂರು ಮತ್ತು ಸತ್ಯನಾರಾಯಣ್ ಉಪಸ್ಥಿತರಿದ್ದರು.

150 ಕೋಟಿ ವೆಚ್ಚದಲ್ಲಿ ಮಹಾರಾಣಿ ಕಾಲೇಜು, ಹಾಸ್ಟೆಲ್ ನಿರ್ಮಾಣ

ವಿದ್ಯಾರ್ಥಿನಿಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಮೈಸೂರು, ಅ.25(ಎಸ್‌ಪಿಎನ್)– ಮೈಸೂರು ಮಹಾರಾಣಿ ಕಾಲೇಜು ಮತ್ತು ವಸತಿ ನಿಲಯಕ್ಕೆ, ಸೋಮವಾರ ಭೇಟಿ ನೀಡಿ ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಹಾರಾಣಿ ಕಾಲೇಜಿನ ಕಟ್ಟಡ ಹಾಗೂ ವಸತಿ ನಿಲಯಗಳ ನಿರ್ಮಾಣವನ್ನು 150 ಕೋಟಿ ರೂ. ಗಳಲ್ಲಿ ಕೈಗೊಳ್ಳುವ ಕುರಿತು ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು.

ಮುಂದುವರೆದು 2 ಸಾವಿರ ವಿದ್ಯಾರ್ಥಿ ಸಾಮರ್ಥ್ಯದ 4 ಕಟ್ಟಡಗಳುಳ್ಳ ವಸತಿ ನಿಲಯವನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ. ಒಂದೊಂದು ಕಟ್ಟಡದಲ್ಲಿ ತಲಾ 500 ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು. ಮಹಾರಾಣಿ ವಿಜ್ಞಾನ ಕಾಲೇಜು ಒಂದು ಭಾಗ ಕುಸಿದಿದ್ದು, ಇದರ ಮುಂದೆ ಇರುವ ಐತಿಹಾಸಿಕ ಕಟ್ಟಡದ ಭಾಗವನ್ನು ಹಾಗೆಯೇ ಉಳಿಸಿಕೊಂಡು ಉಳಿದ ಭಾಗದಲ್ಲಿ ಕಟ್ಟಡ ನಿರ್ಮಿಸಲಾಗುವುದು ಎಂದರು.

51 ಕೋಟಿ ರೂ.ಗಳಲ್ಲಿ ವಿಜ್ಞಾನ ಕಾಲೇಜಿನ ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತಿದೆ. 17 ಕೋಟಿ ರೂ. ವೆಚ್ಚದಲ್ಲಿ ಆರ್ಟ್ಸ್ ಕಾಲೇಜು, 99 ಕೋಟಿ ರೂ.ಗಳಲ್ಲಿ ವಸತಿ ನಿಲಯದ ನಿರ್ಮಾಣ ಸೇರಿದಂತೆ ಒಟ್ಟು 150 ಕೋಟಿ ರೂ.ಗಳ ಕಾಮಗಾರಿಗಳನ್ನು ಕೈಗೊಳ್ಳಲು ಉನ್ನತ ಶಿಕ್ಷಣ ಇಲಾಖೆಗೆ ಸೂಚಿಸಲಾಗಿದೆ. ಹಿಂದಿನ ಸರ್ಕಾರದವರು ಮೈಸೂರು ಭಾಗದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ ಎಂದರು.

ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕಾರ್ಯಕ್ರಮಗಳಿಂದ ಸ್ಫೂರ್ತಿ ಪಡೆದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಮಹಾರಾಣಿ ಕಾಲೇಜು ಮತ್ತು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಪರಿಶೀಲಿಸಿ ವಿದ್ಯಾರ್ಥಿನಿಯರ ಜತೆ ಸಂವಾದ ನಡೆಸಿದರು. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಉಪಸ್ಥಿತರಿದ್ದರು. ನೂತನ ಕಟ್ಟಡಗಳ ನೀಲನಕ್ಷೆಯನ್ನು ಗಮನಿಸಿದ ಮುಖ್ಯಮಂತ್ರಿಗಳು ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವುದೂ ಸೇರಿದಂತೆ ಹಲವು ಸಲಹೆ, ಸೂಚನೆಗಳನ್ನು ನೀಡಿದರು.